# ಕಲ್ಯಾಣ ಕಿರಣ

ನವೆಂಬರ್-2006

ಬೆಲೆ -6/-



ಶಿವ ಶರಣ ತುರುಗಾಹಿ ರಾಮಣ್ಣ



ಶಿವಮೊಗ್ಗದಲ್ಲಿ ಬಸವ ಜ್ಯೋತಿ ಕಾರ್ಯಕ್ರಮದ ಉದ್ಘಾಟನೆ
ಮಾಡುತ್ತಿರುವ ಪೂಜ್ಯ ಮಾತಾಜಿಯವರು



ಪೂಜ್ಯ ಮಾತಾಜಿ ಹಾಗೂ ಶರಣ - ಶರಣೆಯರಿಂದ ವಾರದ
ಸಾಮೂಹಿಕ ಪ್ರಾರ್ಥನೆ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666


ಸಂಪುಟ-37 ಬಸವ ಶಕೆ-873 ಆಜೀವ ಸದಸ್ಯತ್ವ 600 ರೂ.
ಸಂಚಿಕೆ-6 ನವೆಂಬರ್-2006 ವಾರ್ಷಿಕ ಚಂದಾ 60/- ರೂ.


# ನುಡಿ ನೈವೇದ್ಯ

ಹೃದಯ ಸರೋಜ ಗದ್ದುಗೆಗೆ । ದಿವ್ಯ
ಸದಮಲ ಗುಣ ನಿಧಿ ಬಾರಯ್ಯಾ ದೇವ ॥ ॥ ಪಲ್ಲವಿ ॥

ಆನಂದ ಜಲದಿ ಮಜ್ಜನಕ್ಕೆರೆವೆನು । ಸು
ಜ್ಞಾನದ ಗಂಧವನೊರೆವೆನು ॥
ನಾನು ನೀನೆನ್ನ ದಕ್ಷತೆಯ ನೀಡುವೆ । ದಿವ್ಯ
ಜ್ಞಾನದಾರತಿ ಎತ್ತುವೆ ಬಾರಯ್ಯಾ ದೇವ ॥ ॥ 1॥

ಜ್ಞಾನವೆ ಬೇರುವರಿದ ಮುಡಿವಾಳ । ಸು
ಜ್ಞಾನವೆ ಚಿಗುರ್ದ ಪಚ್ಚೆಯು
ಹೀನತೆಯಳಿದ ಮರುಗ -ದವನಗಳಿಂದ ।
ನಾನೊಲಿದರ್ಚಿಪೆ ಬಾರಯ್ಯಾ ದೇವ ॥ ॥ 2 ॥

ತನುಪುಳಕದವಿರಳದ ಸೇವಂತಿಗೆ ।
ನೆನಹು ತಾನಾದ ಜಾಜೆಯು
ಇನಿತಗಲದದೆ ಸಂಪಗೆಯರಳುಗಳಿಂದ ।
ಮನವಲರ್ದರ್ಚಿಸುವೆ ಬಾರಯ್ಯಾ ದೇವ ॥ ॥ 3 ॥

ಮೂಲಜ್ಞಾನದಿ ದಿವ್ಯರೂಪವನರ್ಚಿಪೆ
ಮೇಲೆ ಬ್ರಹ್ಮ ಸ್ಥಾನದಲ್ಲಿ
ಶೂಲಿ, ನಿಮಗೆ ನೈವೇದ್ಯವನರ್ಪಿಸುವೆ
ಲಾಲಿತ ತಾಂಬೂಲವನೊಪ್ಪಿಸುವೆ ಬಾರಯ್ಯಾ ದೇವ ॥ ॥ 4 ॥

ಆಟ ನೋಟದ ಬೇಟ ಕೂಟದ ಶಿಶುವಿದ ।
ರಾಟವೇ ತಾನು ತಾನಾಗಿ ।
ನಾಟಿ ಮನದ ಕೊನೆಯೊಳು ನೆಲಸಿಹ ಶಶಿ ।
ಜೂಟ ಚೆನ್ನ ಮಲ್ಲಿಕಾರ್ಜುನ ಬಾರಯ್ಯಾ ದೇವ॥ ॥ 5 ॥

---

ಸಜ್ಜನೆಯಾಗಿ ಮಜ್ಜನಕೆರೆವೆ
ಶಾಂತಳಾಗಿ ಪೂಜೆಯ ಮಾಡುವೆ
ಸಮರತಿಯಿಂದ ನಿಮ್ಮ ಹಾಡುವೆ
ಚನ್ನ ಮಲ್ಲಿಕಾರ್ಜುನಯ್ಯಾ
ನಿಮ್ಮ ನಗಲದ ಪೂಜೆ ಅನುವಾಯಿತ್ತೆನಗೆ.

-ಜಗನ್ಮಾತಾ ಅಕ್ಕಮಹಾದೇವಿ

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666

ಸಂಪುಟ 37 ಬಸವ ಶಕೆ 873 ಆಜೀವ ಸದಸ್ಯತ್ವ 600ರೂ

ಸಂಚಿಕೆ 6 ನವೆಂಬರ್- 2006 ವಾರ್ಷಿಕ ಚಂದಾ 60/-ರೂ.

## ಕಿರಣ ಗನ್ನಡಿ

ಲೇಖನಗಳು ಪುಟ



**KALYANA KIRANA**-Reg No.19988/70. Monthly Magazine Edited by Pujya Mate Kasturidevi and Published by Pujya Allama Prabhu Swamiji, on behalf of Vishwakalyana Mission Charitable Trust, Basava Mantapa, at Padmashri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010



## ಸಂಪಾದಕೀಯ: ಸಂಶೋಧನೆಯಿಂದ ದೊರಕುವ ಸತ್ಯವನ್ನು ಒಪ್ಪಿಕೊಳ್ಳುವುದು ಪ್ರಾಮಾಣಿಕತೆ.

-ಮಾತಾಜಿ

[ ಬಸವ ಕಲ್ಯಾಣದ ನಮ್ಮ ಮಹಾಮನೆಯಲ್ಲಿ ಪ್ರತಿ ತಿಂಗಳ ಹುಣ್ಣಿಮೆಯಂದು ಸಂಜೆ ಜ್ಞಾನ ದಾಸೋಹ ಹಾಗೂ ಅನ್ನ ದಾಸೋಹ ನಡೆಯುತ್ತವೆ.ಅಕ್ಟೋಬರ್ 7ರಂದು ಅದರಲ್ಲಿ ಭಾಗಿಯಾದ ನಾನು ಮಾತನಾಡುತ್ತ ಛತ್ರಪತಿ ಶಿವಾಜಿ ಮಹಾರಾಜರ ಮೂಲ ಪುರುಷರ ಕನ್ನಡ ಮೂಲ ಕುರಿತು ಹೇಳಿದೆ. ಪ್ರಜಾವಾಣಿ ಪತ್ರಿಕೆ ಭಾಷಣದ ಸಾರಾಂಶ ಪ್ರಕಟಿಸಿತು. ಇದಕ್ಕೆ ತೀವ್ರ ಆಕ್ಷೇಪವನ್ನು ಮಾಜಿ ಎಂ.ಎಲ್.ಎ. ಶ್ರೀ.ಎಂ.ಜಿ. ಮೂಳೆ ವ್ಯಕ್ತ ಪಡಿಸಿದರು.ಇದಕ್ಕೆ ಪ್ರತಿಕ್ರಿಯೆಯಾಗಿ ದಿ.12-10-2006ರಂದು ನಾನು ಕೊಟ್ಟ ಪತ್ರಿಕಾ ಹೇಳಿಕೆಯ ವಿವರವಿಲ್ಲಿದೆ.]

ಇತಿಹಾಸದ ಗರ್ಭದಲ್ಲಿ ಹುದುಗಿರುವ ಸತ್ಯವನ್ನು ಹೊರ ತೆಗೆದಾಗ ಅದನ್ನು ಪ್ರಾಂಜಲ ಮನಸಿನಿಂದ ಒಪ್ಪಿಕೊಳ್ಳುವುದು ಪ್ರಾಮಾಣಿಕತೆ . ಮರಾಠಾ ವಿದ್ವಾಂಸರಾದ ಡಾ|| ಆರ್. ಸಿ ಢೇರೆಯವರು ರಾಷ್ಟ್ರ ವೀರ ಛತ್ರಪತಿ ಶಿವಾಜಿ ಮಹಾರಾಜರ ಮೂಲವನ್ನು ಕುರಿತು ಆಳವಾದ ಅಧ್ಯಯನ ಮಾಡಿದಾಗ ತಿಳಿದ ಸಂಗತಿಗಳನ್ನು ಶಿಖರ ಶಿಂಗಣಾಪುರಾಚ ಶಂಭು ಮಹಾದೇವ ಎಂಬ ಕೃತಿಯಲ್ಲಿ ಪ್ರಚುರ ಪಡಿಸಿದರು. ಅದನ್ನು ಮರಾಠಿ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಪ್ರಾವೀಣ್ಯತೆ ಹೊಂದಿರುವ ಡಾ|| ಸರಜೂ ಕಾಟಕರ ಕನ್ನಡಕ್ಕೆ ಅನುವಾದಿಸಿದ್ದಾರೆ. ಇದರ ಪ್ರಕಾರ ಶಿವಾಜಿ ಮಹಾರಾಜರ ಮೂಲ ಪುರುಷರು ಗದುಗಿನ ಸಮೀಪದ ಸೋರಟೂರು ಗ್ರಾಮದಿಂದ ಮಹಾರಾಷ್ಟ್ರಕ್ಕೆ ವಲಸೆ ಹೋದವರು; ಶಿವಾಜಿ ಮಹಾರಾಜರು, ಇಂದಿಗೂ ಕೆಲವು ಕಾಯಕಗಳವರು ರಟ್ಟೆಗೆ ಇಷ್ಟಲಿಂಗವನ್ನು ಕಟ್ಟುವ ಪರಿಪಾಠದಂತೆ, ತಮ್ಮ ರಟ್ಟೆಗೆ ಇಷ್ಟಲಿಂಗವನ್ನು ಕಟ್ಟುತ್ತಿದ್ದರಂತೆ. ಶಿವಾಜಿ ಮಹಾರಾಜರಂತಹ ಮಹಾನ್ ಚೇತನಗಳು ಜಾತಿ, ಮತ,ಧರ್ಮಗಳ ವಲಯವನ್ನು ಮೀರಿದವರು. ಆದರೆ ಅವರು ಲಿಂಗಾಯತ ಧರ್ಮೀಯರಾಗಿದ್ದರೆ ಅದು ನಿಜಕ್ಕೂ ನಮಗೆ ಹೆಮ್ಮೆಯ ಸಂಗತಿ. ಈ ಸತ್ಯವನ್ನು ಅಭಿಮಾನದಿಂದ ಹೇಳಿದ್ದನ್ನು ಮಾಜಿ ಶಾಸಕರಾದ ಎಂ.ಜಿ. ಮುಳೆಯವರಾಗಲಿ, ಕರ್ನಾಟಕ ಕ್ಷತ್ರಿಯ ಮರಾಠಾ ಪರಿಷತ್‌ದವರಾಗಲಿ ಖಂಡಿಸುವ ಅಗತ್ಯವಿಲ್ಲ.ಹೋರಾಟ ಮಾಡುವ ಅಗತ್ಯ ಮೊದಲೇ ಇಲ್ಲ.

"ಡಾ||ಆರ್.ಸಿ. ಢೇರೆಯವರ ಗ್ರಂಥವನ್ನು ಮತ್ತು ಅದರ ಕನ್ನಡ ಅನುವಾದವನ್ನು ಮಾರಾಟ ಮಾಡದಂತೆ ನಿಷೇಧಿಸಬೇಕೆಂದು ಮರಾಠ ಸೇವಾ ಸಂಘದಿಂದ ಸರ್ಕಾರವನ್ನು ಒತ್ತಾಯಿಸಲಾಗಿದೆ." ಎಂದು ಕೆಲವರು ಹೇಳಿದಾರೆ. ಸತ್ಯವನ್ನು ದಮನ ಮಾಡುವ ಇಂತಹ ಪ್ರವೃತ್ತಿ ಅಪೇಕ್ಷಣೀಯವಲ್ಲ. ಡಾ|| ಢೇರೆಯವರ ಸಂಶೋಧನೆಯಲ್ಲಿ ಅನುಚಿತವಾದ , ಛತ್ರಪತಿ ಶಿವಾಜಿ ಮಹಾರಾಜರ ಭವ್ಯ ವ್ಯಕ್ತಿತ್ವಕ್ಕೆ ಕಲಂಕ ತರುವಂಥದು ಏನೂ ಇಲ್ಲ, ಅಂದಾಗ ಅದನ್ನು ವಿರೋಧಿಸುವ ಅಗತ್ಯವೇನಿದೆ ?

ಇಂದಿಗೂ ಶಿವಾಜಿ ಮಹಾರಾಜರ ವಂಶಿಕರ ಮನೆಗಳಲ್ಲಿ ಪೂಜಾದಿ ಕಾರ್ಯಗಳನ್ನು ನೆರವೇರಿಸುವವರು ಲಿಂಗಾಯತ ಜಂಗಮರು ಎಂಬ ಸಂಪ್ರದಾಯ ಶಿವಾಜಿ ಮಹಾರಾಜರ ಮೂಲಪುರುಷರು ಲಿಂಗಾಯತ ಧರ್ಮೀಯರಾಗಿದ್ದರು ಎಂಬುದಕ್ಕೆ ಬಲವಾದ ಸಾಕ್ಷಿಯಾಗುತ್ತದೆ. ಪ್ರಗತಿ ಪರ ವಿಚಾರ ಧಾರೆಯ ಲಿಂಗಾಯತ ಧರ್ಮವು ಕರ್ನಾಟಕ ಮಾತ್ರವಲ್ಲ ಪಕ್ಕದ ರಾಜ್ಯಗಳಲ್ಲೆಲ್ಲ ಸಂಸ್ಥಾಪಕರಾದ ಬಸವಣ್ಣನವರ ಕಾಲದಿಂದಲೂ ಹಬ್ಬ ತೊಡಗಿತು. ಕೊಲ್ಹಾಪುರ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ನೂರಕ್ಕೆ ನೂರು ಜನ ಲಿಂಗಾಯತರೇ ಇದ್ದಾರೆ. ಗುರು ಬಸವಣ್ಣನವರು ಸ್ಥಾಪಿಸಿ ಕೊಟ್ಟ ಧರ್ಮಕ್ಕೆ ಎಲ್ಲಾ ಜಾತಿ, ಮತ, ಪಂಥ, ಧರ್ಮಗಳವರೂ ಸೇರ್ಪಡೆಯಾಗಿದ್ದಾರೆ. ಛತ್ರಪತಿ , ಕ್ರಾಂತಿಕಾರಿ ರಾಜರ್ಷಿ ಶಾಹೂ ಮಹಾರಾಜರು ಇಷ್ಟಲಿಂಗ ದೀಕ್ಷೆಗಾಗಿ ಹಂಬಲಿಸಿದ್ದರು ಎಂದು ಹೇಳಲಾಗುತ್ತಿದೆ.ಲಿಂಗಾಯತವು ಒಂದು ಜಾತಿಯಲ್ಲ,ಧರ್ಮ. ಹೀಗಾಗಿ ಎಲ್ಲಾ ಜಾತಿ ಜನಾಂಗದವರೂ ಲಿಂಗಾಯತ ಸಮಾಜದಲ್ಲಿ ಇರುವುದನ್ನು ಕಾಣುತ್ತೇವೆ. ಶಿವಾಜಿ ಮಹಾರಾಜರ ಮನೆತನದ ಮೂಲ ಪುರುಷರು ಲಿಂಗಾಯತರಾಗಿದ್ದರು ಎಂಬುದನ್ನು ಒಪ್ಪಿಕೊಳ್ಳಲು ಮರಾಠಾ ಮುಖಂಡರು ಸಂಕೋಚ ಪಡುವುದೇಕೆ. ?

ತಮ್ಮ ಬಾಹುಬಲ, ಪರಾಕ್ರಮದಿಂದ ಶಿವಾಜಿಯವರು ಮಹಾರಾಜರಾಗಿ ಪಟ್ಟಾಭಿಷೇಕ ಮಾಡಿಕೊಳ್ಳಲು ಪ್ರಯತ್ನಿಸಿದಾಗ ಮಹಾರಾಷ್ಟ್ರದ ಬ್ರಾಹ್ಮಣರು, ಸ್ವತಃ ಶಿವಾಜಿ ಮಹಾರಾಜರ ಆಸ್ಥಾನದ ಪುರೋಹಿತರು,"ಶಿವಾಜಿಯವರು ಕ್ಷತ್ರಿಯರಲ್ಲ, ರಾಜತ್ವ ಹೊಂದಲಾರರು" ಎಂದು ಕಿರುಕುಳ ನೀಡಿದ್ದು ಇತಿಹಾಸದಲ್ಲಿ ದಾಖಲಾಗಿದೆ. ಉತ್ತರದಿಂದ ಗಾಗಾಭಟ್ಟ ಎಂಬ ಬ್ರಾಹ್ಮಣ ಪಂಡಿತನನ್ನು ಕರೆಸಿ, ಕೃತಕವಾಗಿ ಚರಿತ್ರೆಯನ್ನು ಬರೆಸಿ, ಶಿವಾಜಿ ಮಹಾರಾಜರ ಮೂಲ ಪುರುಷರು ರಾಜಸ್ಥಾನದಿಂದ ಬಂದ ಕ್ಷತ್ರಿಯರು ಎಂದು ಪ್ರತಿಪಾದಿಸಲಾಯಿತು. ಶೂದ್ರರೆಂಬ ಕಾರಣಕ್ಕೆ ಬ್ರಾಹ್ಮಣರು ಶಿವಾಜಿ ಮಹಾರಾಜರಿಗೆ ಪಟ್ಟಾಭೀಷೇಕ ಮಾಡಲು ನಿರಾಕರಿಸಿದರು ಎಂಬ ಸತ್ಯವನ್ನು ಮುಳೆಯವರು ಖಂಡಿಸಿದ್ದಾರೆ.ಲಿಂಗಾಯತ ಧರ್ಮೀಯರು ಹೋಮ -ಹವನಾದಿಗಳನ್ನು ಮಾಡುವುದಿಲ್ಲ. ಜಾತಿ ಸೂತಕ ,ಮುಟ್ಟು, ಮೈಲಿಗೆ ಆಚರಿಸುವುದಿಲ್ಲ ಎಂಬ ಕಾರಣಕ್ಕಾಗಿ ಮಡಿವಂತ ಬ್ರಾಹ್ಮಣರು ಮಹಾರಾಷ್ಟ್ರದಲ್ಲಿ ಲಿಂಗಾಯತರನ್ನು ಶೂದ್ರರೆಂದೇ ಪರಿಗಣಿಸುತ್ತಾರೆ.ಹಾಗೆಂದ ಮಾತ್ರಕ್ಕೆ ನಾವು ಸಂಕೋಚ ಪಟ್ಟು ಬ್ರಾಹ್ಮಣರೆನ್ನಿಸಿಕೊಳ್ಳಲು ತೀವ್ರವಾಗಿ ಹೆಣಗಾಡ ಬೇಕಾಗಿಲ್ಲ. ಚತುರ್ವರ್ಣ ವ್ಯವಸ್ಥೆಯನ್ನೇ ಲಿಂಗಾಯತರು ಒಪ್ಪದ ಅತಿ ವರ್ಣಾಶ್ರಮಿಗಳು. ವೈದಿಕ ಹಿಂದು ಧರ್ಮವು ಪ್ರತಿಪಾದಿಸಿದ ಹುಟ್ಟಿನಿಂದಲೇ ಮೇಲು- ಕೀಳೆಂದು ವರ್ಗೀಕರಿಸುವ ವರ್ಣ ವ್ಯವಸ್ಥೆಯ ವಿರುದ್ಧ ಹೋರಾಡದೆ ಹಲವಾರು ಜಾತಿಗಳವರು ಬ್ರಾಹ್ಮಣ,ಕ್ಷತ್ರಿಯ ವರ್ಣಗಳವರಾಗಲು ಇಂದಿಗೂ ಪ್ರಯತ್ನಿಸುತ್ತಿರುವುದು ಹಾಸ್ಯಾಸ್ಪದ ಸತ್ಯವಾಗಿದೆ. ಜಂಗಮ ಲಿಂಗಾಯತರು ಕೆಲವರು ಸಹ ತಾವು ಲಿಂಗೀ ಬ್ರಾಹ್ಮಣರು ಎಂದು ಸಾಧಿಸಲು ಕೃತಕವಾಗಿ ಪುಸ್ತಕಗಳನ್ನು ಬರೆಸಿದ್ದಾರೆ.

ಶಿವಾಜಿ ಮಹಾರಾಜರ ಪುತ್ರ ರಾಜಾರಾಮರು ಔರಂಗಜೇಬನ ಕೆಂಗಣ್ಣಿಗೆ ಗುರಿಯಾಗಿ, ದೇಶ ಭ್ರಷ್ಟರಾಗಿ ಸಂಚರಿಸಬೇಕಾಯಿತು. ಆಗ ಅವರು ಆಶ್ರಯ ಕೋರಿದುದು ಮತ್ತೊಬ್ಬ ಲಿಂಗಾಯತ ಮಹಾರಾಣಿ ಕೆಳದಿಯ ಚನ್ನಮ್ಮಾಜಿಯವರ ಬಳಿ. ರಾಜಾರಾಮರಿಗೆ ಆಶ್ರಯ ನೀಡಿ ಔರಂಗ ಜೇಬ್‌ನಂತಹ ಬಲಿಷ್ಠ ಶತ್ರುವನ್ನು ಎದುರು ಹಾಕಿಕೊಳ್ಳುವುದು ಬೇಡ ಎಂದು ಮಂತ್ರಿಗಳು ಹೇಳಿದಾಗ ರಾಣಿ ಚನ್ನಮ್ಮಾಜಿ " ಆಶ್ರಯ ಕೋರಿದವರಿಗೆ ನಿರಾಕರಿಸಬಾರದು ,ಮೇಲಾಗಿ ರಾಜಾರಾಮರು ಸ್ವಧರ್ಮೀಯರು" ಎನ್ನುತ್ತಾಳೆ. ಕೆಲವು ಕಾಲದವರೆಗೆ ರಾಜಾರಾಮರನ್ನು ತಮಿಳು ನಾಡಿನ ತಂಜಾವೂರಿನಲ್ಲಿದ್ದ ತಮ್ಮ ಬಂಧುಗಳ ಮನೆಯಲ್ಲಿ ಇರಿಸುತ್ತಾಳೆ. ನಂತರ ಔರಂಗ ಜೇಬನ ಸೈನ್ಯದೊಡನೆ ಯುದ್ಧ ಮಾಡಿ ಗೆಲುವು ಪಡೆದು ರಾಜಾರಾಮರಿಗೆ ಪಟ್ಟಾಭಿಷೇಕ ಮಾಡಿಸುತ್ತಾಳೆ. ಕೆಳದಿಯಲ್ಲಿರುವ ವಿಜಯ ಸಂಭದ ಮೇಲೆ ರಾಣಿ ಚನ್ನಮ್ಮಾಜಿ ಮತ್ತು ರಾಜಾರಾಮರ ಶಿಲ್ಪವನ್ನು ಕೆತ್ತಲಾಗಿದೆ.ಈ ಪ್ರಸಂಗವು ಸಹಿತ ಶಿವಾಜಿ ಮಹಾರಾಜರ ವಂಶಸ್ಥರು ಲಿಂಗಾಯತರೆಂಬುದಕ್ಕೆ ಸಾಕ್ಷಿ ನುಡಿಯುತ್ತದೆ.

ಬಾಲ್ಯದಿಂದಲೂ ನಾನು ಶಿವಾಜಿ ಮಹಾರಾಜರ ಅಭಿಮಾನಿ, ಅವರ ರಾಷ್ಟ್ರ ಪ್ರೇಮ ನನಗೆ ಸ್ಫೂರ್ತಿ ನೀಡಿದೆ. ಅವರ ಮೂಲ ಪುರುಷರು ಲಿಂಗಾಯತ ಧರ್ಮೀಯರು ಎಂಬ ಸತ್ಯ ಡಾ|| ಆರ್. ಸಿ. ಢೇರೆಯವರ ಸಂಶೋಧನೆಯಿಂದ ತಿಳಿದುದು ಇನ್ನಷ್ಟು ಸಂತೋಷ ತಂದಿದೆ. ಕಾರಣಾಂತರದಿಂದ ಅವರ ಸಂತತಿಯವರು ಲಿಂಗಾಯತ ಸಂಸ್ಕೃತಿಯಿಂದ ದೂರವಾಗಿರಬಹುದು. ವೈದಿಕ ಹಿಂದೂ ಧರ್ಮದ ಕಕ್ಷೆಯೊಳಗಿದ್ದು ಶೂದ್ರರು ಎನ್ನಿಸಿಕೊಳ್ಳುವ ಬದಲು ಗುರು ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮವನ್ನು ಸ್ವೀಕರಿಸಿ ಪುಣ್ಯ ಪುರುಷರಾದ ಛತ್ರಪತಿ ಶಿವಾಜಿ ಮಹಾರಾಜರು ಮತ್ತು ರಾಜರ್ಷಿ ಶಾಹು ಮಹಾರಾಜರ ಆತ್ಮಕ್ಕೆ ಶಾಂತಿಯನ್ನು ತರಬೇಕೆಂದು ಕರ್ನಾಟಕ ಮರಾಠಾ ಪರಿಷತ್ತಿನವರಿಗೆ ಹೃತ್ಪೂರ್ವಕ ಆಹ್ವಾನ ನೀಡುತ್ತೇನೆ.(ಇದಕ್ಕೆ ತೀವ್ರವಾಗಿ ಪ್ರತಿಕ್ರಿಯೆ ನೀಡಿರುವ ಬಸವ ಕಲ್ಯಾಣ ರಾಷ್ಟ್ರವಾದಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ರಾಮಭಾವು ಜಾಧವ ಮತ್ತಿತರರು ಜಂಟಿ ಹೇಳಿಕೆ ನೀಡಿ, "ಮಾತಾಜಿಯವರೇ ಶಿವ ಧರ್ಮವನ್ನು ಸ್ವೀಕರಿಸಿ, ಪ್ರಚಾರ ಮಾಡಲಿ") ಎಂದು.

ದಿ. 15-10-2006ರಂದು ನೀಡಿದ ಪತ್ರಿಕಾ ಹೇಳಿಕೆಯಲ್ಲಿ ಕೊಟ್ಟಿದ್ದಾರೆ. ನಾನು ಕೇಳಿದ್ದೇನೆ, "ಮಹಾರಾಷ್ಟ್ರದಲ್ಲಿ ಒಂದು ವೈಚಾರಿಕ ಚಳುವಳಿ ಪ್ರಾರಂಭವಾಗಿದೆ. "ಶಿವ ಧರ್ಮ ಎಂದು ಛತ್ರಪತಿ ಶಿವಾಜಿ ಮಹಾರಾಜರ ಹೆಸರಿನ ಮೇಲೆ ಇದನ್ನು ಸ್ಥಾಪಿಸಲಾಗಿದೆ." ಎಂಬುದಾಗಿ ರಾಮಭಾವು ಜಾಧವ್ ಅವರು ಇದನ್ನು ಪ್ರಸ್ತಾಪಿಸಿ 2ಕೋಟಿಗೂ ಅಧಿಕ ಜನ ಇದನ್ನು ಸ್ವೀಕರಿಸಿದ್ದಾರೆ ಎಂದು ಹೇಳಿಕೊಂಡಿದ್ದಾರೆ ಇದು ಸತ್ಯವೇ ಆಗಿದ್ದರೆ ಇದನ್ನು ನಾವು ಸಂತೋಷದಿಂದ ಸ್ವಾಗತಿಸುತ್ತೇವೆ. ಏಕೆಂದರೆ ವರ್ಣಾಶ್ರಮ ವ್ಯವಸ್ಥೆಯ ಅಷ್ಟಪದಿ ಹಿಡಿತದಲ್ಲಿ ಸಿಕ್ಕ ಜನರಲ್ಲಿ ಇಷ್ಟಾದರೂ ಜಾಗೃತಿ ಮೂಡಿರುವುದು ಅಭಿನಂದನೀಯ! ಆದರೆ 'ಶಿವ ಧರ್ಮ ' ಎಂಬ ಹೊಸದಾಗಿ ಹುಟ್ಟು ಹಾಕಿದ್ದರೆ, ಅದು ಧರ್ಮ ಎನ್ನಿಸಿಕೊಳ್ಳಬೇಕಾದರೆ ಅದಕ್ಕೆ ಒಂದು ಸ್ವತಂತ್ರವಾದ ಧಾರ್ಮಿಕ ಸಂವಿಧಾನವಾಗಿ ಸಾಹಿತ್ಯ ಇರಬೇಕು. ಅಂಥ ಧರ್ಮ ಶಾಸ್ತ್ರ ಯಾವುದು ಇದೆ ? ಧಾರ್ಮಿಕ ಆಚಾರ -ವಿಚಾರಗಳನ್ನು ಪ್ರತಿಪಾದಿಸುವ ಧರ್ಮಶಾಸ್ತ್ರ ಅತ್ಯಗತ್ಯ .ಒಂದು ವೇಳೆ ಅದೇ ವೇದೋಪನಿಷತ್ತು , ಭಗವದ್ಗೀತೆ ಮುಂತಾದುವನ್ನು ಅವಲಂಬಿಸಿದರೆ ಅದು ಸ್ವತಂತ್ರ ಧರ್ಮವಾಗದು. ಪ್ರತಿ ಧರ್ಮಕ್ಕೂ ಒಳಗೆ ಪ್ರವೇಶಿಸಲು ಒಂದು ದೀಕ್ಷೆ ಅರ್ಥಾತ್ ಧರ್ಮ ಸಂಸ್ಕಾರ ಅಗತ್ಯ. ಶ್ರೀ ರಾಮಭಾವು ಜಾಧವ್ ಅವರು ಅಂಥ ಯಾವ ಧರ್ಮ ಸಂಸ್ಕಾರವನ್ನು ಜನರಿಗೆ ನೀಡಬಲ್ಲರು ? ವೈದಿಕ ಪುರೋಹಿತ ಶಾಹಿಯ ವಿರುದ್ಧ ಡಿ.ಕೆ.ಡಿ.ಎಂ.ಕೆ. ಮುಂತಾದವರ ಚಳುವಳಿಯಂತೆ ರಾಮ ಜಾಧವ್ ಅವರ ಪ್ರಯತ್ನವು ಒಂದು ಚಳುವಳಿ (Movement) ಆದೀತೇ ವಿನಾ ಸ್ವತಂತ್ರ ಧರ್ಮವಾಗಲಾರದು ಆದರೆ ಅವರ ಶಿವ ಧರ್ಮ ಚಳುವಳಿಯು ಮರಾಠರನ್ನು ಕ್ಷತ್ರಿಯರನ್ನಾಗಿ ಮಾಡಲು ಮಾತ್ರ ಆಸಕ್ತವಾಗಿದ್ದು , ಕೇವಲ ಮರಾಠಾ ಸಮೂಹಕ್ಕೆ ಸೀಮಿತವಾಗದೆ , ಮಹಾರಾಷ್ಟ್ರದ ಎಲ್ಲ ಜಾತಿ ಮತ ಪಂಥಗಳನ್ನು ಆಕರ್ಷಿಸಿ ಜಾಗೃತಿ ಮಾಡಿ, ವೈದಿಕ ಪುರೋಹಿತ ಶಾಹಿಯ ಅವಲಂಬನೆಯಿಂದ ಅವರನ್ನು ಬಿಡಿಸಿದರೆ ನಾವಂತೂ ಸ್ವಾಗತಿಸುತ್ತೇವೆ, ಬೆಂಬಲಿಸುತ್ತೇವೆ.

## ಸಾಮೂಹಿಕ ಪ್ರಾರ್ಥನೆಯ ಮಹತ್ವ

- ಮಾತಾಜಿ

ದಿ. 1-10-2006ರಂದು ಧಾರವಾಡದ ಕಲಾಭವನದಲ್ಲಿ ಒಂದು ವಿಶೇಷ ಕಾರ್ಯಕ್ರಮವಿತ್ತು. ಉನ್ನತ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಶ್ರೀ ಸಿರಿಯಾಕ್ ಜೋಸೆಫ್ ಮತ್ತು ಇನ್ನಿತರ ನ್ಯಾಯ ಮೂರ್ತಿಗಳು ಆಗಮಿಸಿದ್ದರಂತೆ. ಭಾನುವಾರದಂದು ಬೆಳಿಗ್ಗೆ ತಾವು ಚರ್ಚ್‌ಗೆ ಹೋಗಿ ಪ್ರಾರ್ಥನೆ ಮಾಡಬೇಕು ಎಂದು ನ್ಯಾಯಮೂರ್ತಿಗಳು ಹೇಳುತ್ತಿದ್ದಂತೆಯೆ ಪೋಲೀಸರು ಮತ್ತು ಇನ್ನಿತರ ಭದ್ರತಾ ಸಿಬ್ಬಂದಿಗೆ ಗಲಿಬಿಲಿ . ಚರ್ಚ್‌ನ ವ್ಯವಸ್ಥಾಪಕರಿಗೆ ತಿಳಿಸಿ ಮುಖ್ಯ ನ್ಯಾಯ ಮೂರ್ತಿಗಳನ್ನು ಕರೆದೊಯ್ದರಂತೆ . ಅಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡಿದ ಬಳಿಕವೇ ಮುಖ್ಯ ನ್ಯಾಯ ಮೂರ್ತಿಗಳು ಸಭೆಗೆ ಬಂದಿದ್ದರಂತೆ . ನಿಗದಿತ ಸಮಯಕ್ಕಿಂತ ಅರ್ಧಗಂಟೆ ತಡವಾಗಿ ಬಂದರಂತೆ. ಕಿರಿಯ ನ್ಯಾಯ ವಾದಿಗಳಾದ ಶರಣ. ಕರಿಬಸಪ್ಪ ಕೋರಿಶೆಟ್ಟರ್ ಇದನ್ನು ತಿಳಿಸಿ ಹೇಳಿದರು, "ನಾವು ಕಾರ್ಯಕ್ರಮವಿದೆ ಎಂದು ನಮ್ಮ ಪ್ರಾರ್ಥನೆ ಬಿಟ್ಟು ಸಭೆಗೆ ಹೋದೆವು. ಮುಖ್ಯ ನ್ಯಾಯ ಮೂರ್ತಿಗಳು ಸಭೆಗೆ ಅವರ ಪ್ರಾರ್ಥನೆ ಮುಗಿಸಿ ಬರುವವರೆಗೆ ಕುಳಿತು ಕಾದುದಕ್ಕೆ ಮನಸ್ಸಿಗೆ ಪಶ್ಚಾತ್ತಾಪವೆನಿಸಿತು.

ಅಂದೇ ಸಂಜೆ, ಧಾರವಾಡ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ .ಸಿದ್ಧಣ್ಣ ನಟೇಗಲ್ ಅವರ ಪತ್ನಿ ಯವರಿಗೆ ಶಸ್ತ್ರ ಚಿಕಿತ್ಸೆಯಾಗಿ ಮನೆಗೆ ಬಂದಿದ್ದು , ಅವರಿಗೆ ಆಶೀರ್ವದಿಸಿ ಬರಲೆಂದು ಸಿದ್ಧಣ್ಣನವರ ಮನೆಗೆ ಹೋಗುತ್ತಿದ್ದೆವು. ದಾರಿಯಲ್ಲಿ ವಿಪರೀತ ಮಸೀದಿಗಳು;ಸಂಜೆಯ ರಂಜಾನ್ ಪ್ರಾರ್ಥನೆ ಮುಗಿಸಿಕೊಂಡು ಜನರು ಗುಂಪು ಗುಂಪಾಗಿ ಬರುತ್ತಿದ್ದರು . ಈ ಎಲ್ಲಾ ವಿದೇಶೀ ಧರ್ಮಗಳವರ ನಿಷ್ಠೆ ಕಂಡಾಗ ಆಶ್ಚರ್ಯ - ಆನಂದ ಉಂಟಾದರೆ ನಮ್ಮ ಧರ್ಮದವರಲ್ಲಿ ಇರುವ ಧರ್ಮ ಅಶ್ರದ್ಧೆ, ಅಸಂಘಟನೆ ಕುರಿತು ಬಹಳ ವಿಷಾದವೆನಿಸುತ್ತದೆ. ಇವರು ಎಂದು ಬುದ್ಧಿ ಕಲಿತಾರು ಎಂದು ದುಃಖವಾಗುತ್ತದೆ.

## ಶರಣ ಮೇಳದ ಚಿಂತನಗೋಷ್ಠಿಯಲ್ಲಿ ಚರ್ಚಿಸಬಹುದಾದ ವಿಷಯಗಳು.

1. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಆಗಾಗ ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ / ಮಾಧ್ಯಮಿಕ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರವಾಗಿ ಕೋಳಿ ಮೊಟ್ಟೆಯನ್ನು ಕೊಡುವ ಬಗ್ಗೆ ಆಲೋಚಿಸುತ್ತವೆ. ಇದು ಸರಿಯೆ? ಶುದ್ಧ ಸಸ್ಯಾಹಾರಿಗಳಾದ ಲಿಂಗಾಯತರು, ಜೈನರು, ವೈಶ್ಯರು, ಕೆಲವು ಬ್ರಾಹ್ಮಣರು, ಇತರ ಜಾತಿಗಳವರ ಧಾರ್ಮಿಕ ಆಚರಣೆಗೆ ಚ್ಯುತಿ ಬರುವುದಿಲ್ಲವೆ? ಕೋಳಿ ಮೊಟ್ಟೆ ಹಾಲಿನಂತೆ ಸಸ್ಯಾಹಾರ ಎಂದು ಕೆಲವರು ವಾದಿಸುವರು. ಈ ಬಗ್ಗೆ ಅಧ್ಯಯನ ಮಾಡಿಕೊಂಡು ಬಂದು ಶರಣ ಬಂಧುಗಳು ಚರ್ಚೆಯಲ್ಲಿ ಭಾಗವಹಿಸಬೇಕು.

2. ಪರಸ್ಪರ ಶರಣರು ಭೇಟಿಯಾದಾಗ ಶರಣು, ಶರಣಾರ್ಥಿ ಎಂದು ಹೇಳುವುದನ್ನು ರೂಢಿಸಲಾಗಿದೆ. ದೂರವಾಣಿಯಲ್ಲಿ ಸಹ ಇದೇ ರೀತಿ ಮಾತನಾಡಲಾಗುತಿದೆ. ಸಮಾನಸ್ಕರ ನಡುವೆ ಏನೋ ಇದು ಸರಿ. ಶರಣರು ಗುರುಗಳ ಜೊತೆ ಮಾತನಾಡಲು ಆರಂಭಿಸುವಾಗ ಶರಣು ಎನ್ನುವರು. ಆಗ ಗುರುಗಳು ಶರಣು, ಶರಣು ಶರಣಾರ್ಥಿ ಎಂದಾಗ ತನಗಿಂತ ಹಿರಿಯರಾದ ಗುರು ಜಂಗಮರು ಹೀಗೆ ಅಂದರು ಎಂದು ಕೆಲವು ಭಕ್ತರು ಮುಜುಗರ ಪಡುವರು. ಗುರುಗಳು, ಸ್ವಾಮಿಗಳು ಅವರ ಸಮನಾದವರ ಜೊತೆ ಅಂದರೆ ಪರವಾಗಿಲ್ಲ ಭಕರಿಗೆ ಪುನಃ ವಂದಿಸದೆ ಆಶೀರ್ವದಿಸಬೇಕು ಎಂದು ಕೆಲವರ ಅನಿಸಿಕೆ. ಈ ಅಭಿಪ್ರಾಯ ಸರಿಯೆ? ಬೇರಾವ ಪದದಿಂದ ಗುರುಗಳು ಆಶೀರ್ವದಿಸಬಹುದು?

3. ಕಲ್ಯಾಣ ಕ್ರಾಂತಿಗೆ ಕಾರಣವಾದ ವರ್ಣಾಂತರ ವಿವಾಹದ ಪ್ರಸಂಗವು ನಡೆದುದು ಫಾಲ್ಗುಣ ಮಾಸದ (ಹೋಳಿ) ಹುಣ್ಣಿಮೆಯ ಆಸುಪಾಸಿನಲ್ಲಿ. ಆಗ ಹೋಳಿ ಹುಣ್ಣಿಮೆಯ ಗದ್ದಲ ಇರುವ ಕಾರಣ ಕಲ್ಯಾಣ ಕ್ರಾಂತಿಯ ಸಂಸ್ಮರಣೆಯನ್ನು ದಶಹರ ಸಮಯದಲ್ಲಿ ಆಚರಿಸಲು ನಿರ್ಧರಿಸಲಾಗಿದೆ, 2006ನೆಯ ದಸರಾ ಸಮಯದಲ್ಲಿ ಪ್ರಥಮ ಬಾರಿಗೆ ಆಚರಿಸಲಾಗಿದೆ. 10 ದಿವಸಗಳ ಉತ್ಸವದಲ್ಲಿ ಮಹಾನವಮಿಯಂದು ಹರಳಯ್ಯ-ಮಧುವರಸ-ಶೀಲವಂತರ ಹುತಾತ್ಮ ದಿನಾಚರಣೆ, ವಿಜಯ ದಶಮಿಯಂದು ಬಸವ ಧರ್ಮದ ವಿಜಯೋತ್ಸವ, ಅಕ್ಕನಾಗಲಾಂಬಿಕಾ ಸಂಸ್ಮರಣೆ ಮಾಡಲಾಯಿತು. ಧಾರವಾಡದ ಕೆಲವು ಶರಣೆಯರ ಅಭಿಪ್ರಾಯವೆಂದರೆ

1. ಮಹಾನವಮಿಯಂದು ಉಪವಾಸವಿರಬೇಕು. ಬೆಳಗಿನಿಂದ ನೀರು, ಹಣ್ಣಿನ ರಸ ಮುಂತಾದ ದ್ರವಾಹಾರ ಮಾತ್ರ ಸ್ವೀಕರಿಸಬೇಕು. ಕಾಯಿಲೆಗಳಿದ್ದವರಿಗೆ ಮಾತ್ರ ರಿಯಾಯಿತಿ. ಸಂಜೆಯ ಪೂಜೆ ಮುಗಿಸಿ ಉಪ್ಪಿಟ್ಟು, ಅವಲಕ್ಕಿ ಮುಂತಾದ ಲಘು ಘನಾಹಾರ ತೆಗೆದುಕೊಳ್ಳಬೇಕು.

2. ಅಂದು ಉಪವಾಸವೇನೂ ಬೇಡ. ದೇಹ ದಂಡನೆ ನಮ್ಮ ಧರ್ಮದಲ್ಲಿ ಇಲ್ಲ. ಅಂದಿನ ಊಟದಲ್ಲಿ ಹಬ್ಬದ ಸಿಹಿ ವರ್ಜಿಸಿದರೆ ಸಾಕು.

ಈ ಎರಡು ಅಭಿಪ್ರಾಯಗಳಲ್ಲಿ ಯಾವುದು ಮಾನ್ಯ?

4. ಬಸವ ಮಂಟಪಗಳಿಗೆ ಆಯಾ ಭಾಗದ ಶರಣರ ಹೆಸರನ್ನೂ ಸೇರಿಸಿ ನಾಮಕರಣ ಮಾಡುವುದು ಸೂಕ್ತವಲ್ಲವೇ? ಉದಾ: ಅಕ್ಕಮಹಾದೇವಿ ಬಸವ ಮಂಟಪ

5. ರಾಷ್ಟ್ರೀಯ ಬಸವ ದಳಗಳಿಗೆ ಅನುಭಾವಿಗಳು, ಹಿರಿಯರು, ತತ್ತ್ವನಿಷ್ಠರು ಎಂದು ಕೆಲವರನ್ನು ಗೌರವಾಧ್ಯಕ್ಷ ಕಾರ್ಯಾಧ್ಯಕ್ಷರನ್ನಾಗಿ ನೇಮಿಸಲಾಗುವುದು. ಆದರೆ ಅವರಿಗೆ ವ್ಯಾಪಕವಾಗಿ ತಿರುಗಾಡಲೂ ಸಹ ಆಗುವುದಿಲ್ಲ ಆದರೆ ಅವರ ಮಾರ್ಗದರ್ಶನ ಅತ್ಯಗತ್ಯವಾಗಿರುತದೆ. ಇಂತಹ ಸನ್ನಿವೇಶದಲ್ಲಿ ಸಂಘಟನಾ ಕಾರ್ಯದರ್ಶಿ (Organising Secretary) ಎಂದು ಸಂಘಟನೆಗೆ ಸಮಯ ಕೊಡಬಲ್ಲವರು, ಮಾತಾಡುವ ಕಲೆ ಮತ್ತು ಸಂಘಟನಾ ಕಾರ್ಯದಲ್ಲಿ ಆಸಕ್ತಿಯುಳ್ಳವರನ್ನು ಒಂದು ವರ್ಷಕ್ಕೆ ಆಯ್ಕೆ ಮಾಡುವುದು ಒಳ್ಳೆಯದು. ಅವರ ಅವಧಿಯನ್ನು ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬ (ಗಣೇಶ ಚೌತಿ)ದ ದಿನದಿಂದ ಒಂದು ವರ್ಷದವರೆಗೆ ಎಂದು ನಿಗದಿ ಪಡಿಸಬೇಕು. ನಂತರ ಅವರೇ ಬೇಕಾದರೆ ಧ್ವನಿ ಮತದಿಂದ ಆಯ್ಕೆ ಮಾಡಿ ಮುಂದುವರಿಸಬಹುದು. ಇಲ್ಲವಾದರೆ ಬೇರೆಯವರನ್ನು ಆಯ್ಕೆ ಮಾಡಬಹುದು.

ಈ ಬಗ್ಗೆ ಸಲಹೆ-ಸೂಚನೆ ಕೊಡುವವರಿಗೆ ಅವಕಾಶ ಉಂಟು; ಶರಣ ಮೇಳದಲ್ಲಿ ಅಂಥ ಸಂಘಟನಾ ಕಾರ್ಯದರ್ಶಿಗಳ ಹೆಸರು ಘೋಷಿಸಲೂ ಬಹುದು.



## ☹ ಸಮಸ್ಯೆ..? - ಸಮಾಧಾನ..! ☺

- ಅಂಬಿಕಮ್ಮ ಬಸವರಾಜ್, ಚಿತ್ರದುರ್ಗ

? ಹಿಂದಿ ಚಲನ ಚಿತ್ರ ತಾರೆ ಮತ್ತು ಸಮಾಜ ಸೇವಕಿ ಶಬಾನಾ ಆಜ್ಮಿಯವರಿಗೆ ಬಸವ ಶ್ರೀ ಪ್ರಶಸ್ತಿಯನ್ನು ಚಿತ್ರದುರ್ಗದ ಮುರುಘಾ ಮಠದವರು ಕರುಣಿಸಿದರಲ್ಲ, ಇದು ಮಹಿಳೆಯರನ್ನು ಗೌರವಿಸಿದಂತೆ ಬಹಳ ಅಭಿನಂದನಾರ್ಹವಲ್ಲವೆ?

★ ಅದೇ ಸಮಯದಲ್ಲಿ ಯಾದಗಿರಿಯಲ್ಲಿ ಬಸವ ತತ್ತ್ವ ಪ್ರಚಾರಕ್ಕಾಗಿ ಪ್ರವಚನ ಮಾಡುತ್ತಿದ್ದ ದ್ವಿತೀಯ ಮಹಿಳಾ ಜಗದ್ಗುರು ಮಾತೆ ಗಂಗಾದೇವಿಯವರಿಗೆ ವಿಪರೀತ ಕಿರುಕುಳ ಕೊಟ್ಟು ಪ್ರವಚನ ನಿಲ್ಲಿಸಬೇಕೆಂದು ಸರ್ವ ಸಾಹಸ ಮಾಡಿದರಲ್ಲ! ಪ್ರಚಾರ ಪ್ರಿಯ ಮುರುಘ ರಾಜೇಂದ್ರ ಶರಣರ ಇಂಥ ದ್ವಂದ್ವ ನೀತಿ ಖಂಡನಾರ್ಹವಲ್ಲವೆ?

- ಶಾರದಾ ಚಂದ್ರಶೇಖರ್, ಭದ್ರಾವತಿ

? ಯಾದಗಿರಿಯಲ್ಲಿ ಪೂಜ್ಯ ಗಂಗಾ ಮಾತಾಜಿಯವರ ಪ್ರವಚನಕ್ಕೆ ತುಂಬಾ ಕಿರುಕುಳ ಕೊಡುತ್ತಿದ್ದ ಸಂಗತಿ ತಿಳಿದು ನಮ್ಮ ಬಂಧುಗಳೊಬ್ಬರು, "ನಿಮ್ಮ ಸ್ವಾಮಿಗಳು ಮಾಡುವುದು ಸರಿಯೇ?" ಎಂದು ಶ್ರೀ ಗಳ ನಿಕಟವರ್ತಿಗಳನ್ನು ಕೇಳಿದಾಗ, ವಿಭೂತಿ ಬಡುಕ ಆ ಹುಚ್ಚನನ್ನು, ಎಂದೋ ಮಠದಿಂದ ಹೊರ ಹಾಕಲಾಗಿದೆ. ಅವನು ತೊಂದರೆ ಮಾಡಿದರೆ ನಾವು ಹೊಣೆಯಲ್ಲ ಎಂದು ಹೇಳಿದರಂತೆ.

★ ಉಷ್ಟ್ರ ಪಕ್ಷಿ ಮುಖವನ್ನು ಮಾತ್ರ ಪೊದೆಯಲ್ಲಿಟ್ಟು, ಅದರ ಬೃಹತ್ ಶರೀರ ಹೊರಗೇ ಇದ್ದಾಗ, ಶತ್ರುವಿಗೆ ನಾನು ಕಾಣುವುದಿಲ್ಲ ಎಂದು ಭಾವಿಸುತ್ತದೆಯಂತೆ. ಆ ಬೂದಿ ಬುಡುಕ ಹುಚ್ಚನ ಜೊತೆಗೆ ಗುರು ಮಿಟಕಲ್ ಮಠಕ್ಕೆ ಅಧಿಕಾರಿಯಾದ ಚಿತ್ರದುರ್ಗ ಮಠದವರ ಒಬ್ಬ ಸ್ವಾಮಿ, ನೇರವಾಗಿ ಚಿತ್ರದುರ್ಗ ಮಠದಿಂದ ಬಂದ ಮತ್ತೊಬ್ಬ ಸ್ವಾಮಿ ಯಾದಗಿರಿಯಲ್ಲಿ ಜನರನ್ನು ಪ್ರಚೋದಿಸಲು ಅಲೆದಾಡುತ್ತಿದ್ದುದು ಇಡೀ ಊರಿಗೇ ಗೊತ್ತಿರುವುದು ಉಷ್ಟ್ರ ಪಕ್ಷಿಯ ಜಾಣ್ಮೆಯಂತಿದೆ ಎಂದು ಪ್ರತಿಕ್ರಿಯೆ ನೀಡದೆ ಗತ್ಯಂತರವಿಲ್ಲ.

- ನಾಗಶೆಟ್ಟಿ ಶೆಟಕಾರ, ಬೀದರ್

? ಛತ್ರಪತಿ ಶಿವಾಜಿ ಮಹಾರಾಜರು, ಗವಳಿ (ವೀರಶೈವ) ಲಿಂಗಾಯತರಾಗಿದ್ದ ಬಳಿಯಪ್ಪ ಅವರ ವಂಶದಲ್ಲಿ ಹುಟ್ಟಿದವರು. ಮೂಲ ಪುರುಷ ಬಳಿಯಪ್ಪನು ಗದಗ ಜಿಲ್ಲೆಯ ಸೋರಟೂರಿನಿಂದ ವಲಸೆ ಹೋಗಿದ್ದರು ಎಂಬ ವಿಚಾರವನ್ನು ನೀವು ಭಾಷಣದಲ್ಲಿ ಹೇಳಿದ್ದಕ್ಕೆ ಮರಾಠಾ ಕ್ಷತ್ರಿಯ ಪರಿಷತ್‌ದವರು, ಮಾಜಿ ಎಂ.ಎಲ್.ಎ. ಬಸವ ಕಲ್ಯಾಣದ ಮುಳೆಯವರು, ನಿಮ್ಮನ್ನು ತೀವ್ರವಾಗಿ ಟೀಕಿಸಿದ್ದಾರೆ. ಈ ಸತ್ಯವನ್ನು ಹೇಳಿದ ಮೊದಲಿಗರು ನೀವೆಯೆ?

★ ನನಗೆ ಮರಾಠಿ ಓದಲು, ಮಾತನಾಡಲು ಬರದು. ಪೂಜ್ಯ ನಾಗನೂರು ಶ್ರೀಗಳೂ ಒಂದು ಲೇಖನ ಬರೆದರು. ನಂತರ ವಿಜಯ ಕರ್ನಾಟಕದ ದಿ: 24-09-2006 ರ ಸಂಚಿಕೆಯಲ್ಲಿ ಶ್ರೀಮತಿ ಶಶಿಕಲಾ ವೀರಯ್ಯ ಸ್ವಾಮಿಯವರ ಲೇಖನ ಪ್ರಕಟವಾಯಿತು. ಅದನ್ನು ಓದಿ ನಾನು ಹೇಳಿದ್ದು. ನಂತರ ನಾನು ಮಹತ್ವ ಪೂರ್ಣವಾದ ಕೃತಿ ಶಿವಾಜಿ ಮೂಲ ಕನ್ನಡ ನೆಲ ಎಂಬ ಕೃತಿಯನ್ನು ಓದಿದೆ. ಈ ಸತ್ಯದ ಮೂಲ ಸಂಶೋಧಕರು ಡಾ|| ರಾಮಚಂದ್ರ ಚಿಂತಾಮಣಿ ಢೇರೆ. "ಶಿಖರ ಶಿಂಗಣಾ ಪುರಾಚ ಶಂಭು ಮಹಾದೇವ" ಎಂಬ ಮರಾಠಿ ಕೃತಿಯಲ್ಲಿ ಅವರು ವಿಸ್ತೃತವಾಗಿ ಬರೆದಿದ್ದಾರೆ. ಅದರ ಆಧಾರದ ಮೇಲೆ ಡಾ|| ಸರಜೂ ಕಾಟಕರ್ ಕನ್ನಡದಲ್ಲಿ ಶಿವಾಜಿ ಮೂಲ ಕನ್ನಡ ನೆಲ ಎಂಬ ಅಧಿಕೃತ ಪುಸ್ತಕ ಬರೆದಿದ್ದಾರೆ. ಆದ್ದರಿಂದ ಶ್ರೀ ಮುಳೆಯವರಾಗಲೀ, ಮರಾಠ ಕ್ಷತ್ರಿಯ ಪರಿಷತ್ತಿನವರಾಗಲೀ ವಿರೋಧಿಸಬೇಕಾದುದು ಡಾ|| ಆರ್. ಸಿ. ಢೇರೆಯವರನ್ನೇ ಹೊರತು ನನ್ನನ್ನಲ್ಲ ವರ್ಣಾಶ್ರಮ ವ್ಯವಸ್ಥೆ ಮಹಾರಾಜ ಶಿವಾಜಿ ಯಂಥ ಶೂರ, ವೀರ ರಾಷ್ಟ್ರ ಪ್ರೇಮಿಯನ್ನು ಶೂದ್ರರಾದ ಕಾರಣ ಪಟ್ಟಾಭಿಷೇಕಕ್ಕೆ ಅರ್ಹರಲ್ಲ ಎಂದು ಹೀಯಾಳಿಸಿದ್ದನ್ನು ಮುಚ್ಚಿಟ್ಟು ಆ ಕೆಟ್ಟ ವ್ಯವಸ್ಥೆಗೆ

ತಲೆಬಾಗಿ ಕೃತಕವಾಗಿ ಕ್ಷತ್ರಿಯರಾಗಲು ಪ್ರಯತ್ನಿಸುವ ಇಂಥ ನೇತಾರರಿಗೆ ಯಾರು ಬುದ್ಧಿ ಹೇಳಲು ಸಾಧ್ಯ? ಅಧ್ಯಯನ ಇಲ್ಲ, ಸ್ವಾಭಿಮಾನವೂ ಇಲ್ಲ ಎನ್ನಬೇಕು ಅಷ್ಟೆ.

- ಎಂ.ಆರ್.ಧುಬಲ್‌ಗುಂಡಿ, ಚಿಮ್ಮನ ಚೋಡ

?. ರೇವಣ ಸಿದ್ದರು ಯಾರು? ಕುರುಬರ ಕುಲ ಗುರುಗಳೆ ಅಥವಾ ವೀರಶೈವ ಮತ ಸಂಸ್ಥಾಪಕರೆ?

★ ರೇವಣ ಸಿದ್ದರು ಹುಟ್ಟಿನಿಂದ ಕುರುಬ ಜನಾಂಗ ಸಂಜಾತರು; ಅವರ ಮೇಲೆ ಹಾಲು ಮತ ಪುರಾಣ ಎಂಬ ಕೃತಿ ರಚನೆಯಾಗಿದೆ. ನಂತರ ಸಿದ್ಧ ಮಾರ್ಗಾನುಯಾಯಿಗಳಾಗಿ ಸಂಚರಿಸಿದರು. ಗುರು ಬಸವಣ್ಣನವರಿಂದ ಲಿಂಗಾಯತ ಧರ್ಮವು ಸ್ಥಾಪನೆಯಾಗಿ ಹಬ್ಬ ತೊಡಗಿದಾಗ ಚನ್ನ ಬಸವಣ್ಣನವರಿಂದ ದೀಕ್ಷಿತರಾದ ನಿರ್ಲಜ ಶಾಂತಿಮಯ್ಯ ಎಂಬ ವಿರಕ್ತರಿಂದ ಲಿಂಗಾಯತ ಧರ್ಮವನ್ನು ಸ್ವೀಕರಿಸಿದರು. ಅವರ ಮಗ ರುದ್ರಮುನಿ ದೇವರು ಚನ್ನಬಸವಣ್ಣನವರ ವಯಸ್ಸಿನವರು ಮಹಾಮನೆಯಲ್ಲೇ ಇದ್ದವರು. ಹೀಗಾಗಿ ರೇವಣ ಸಿದ್ದರು ಪೂರ್ವಾಶ್ರಮದಲ್ಲಿ ಕುರುಬ ಸಮಾಜದವರಾದ ಕಾರಣ ಅವರನ್ನು ತಮ್ಮ ಕುಲಗುರುಗಳೆಂದು ಕುರುಬ ಸಮಾಜದವರು, ನಂತರ ಅವರು ಲಿಂಗಾಯತ ಧರ್ಮವನ್ನು ಸ್ವೀಕರಿಸಿ ಅಳವಡಿಸಿಕೊಂಡ ಕಾರಣ ಲಿಂಗಾಯತ ಸಮಾಜದ ಮಹಾತ್ಮರೆಂದು ಭಾವಿಸಲಾಗುತ್ತಿದೆ. ಪಂಚಾಚಾರ್ಯವಾದಿಗಳಿಗೆ ಯಾವುದೂ ಐತಿಹಾಸಿಕ ದಾಖಲೆ ಇರದ್ದರಿಂದ ಅವರು ಐತಿಹಾಸಿಕ ರೇವಣ ಸಿದ್ದರನ್ನು ಪುರಾಣೀಕರಿಸಿ ರೇಣುಕಾಚಾರ್ಯರನ್ನಾಗಿ ಮಾಡಲು ವ್ಯರ್ಥ ಸಾಹಸ ಮಾಡುತ್ತಿದ್ದಾರೆ ಅಷ್ಟೆ.

2. ?. ಲಿಂಗಾಯತ ರೆಡ್ಡಿ ಜನಾಂಗದವರು ಮತ್ತು ಇತರ ಕೆಲವು ಲಿಂಗಾಯತರು ತಮ್ಮ ಪೂರ್ವಾಶ್ರಮದ ಜಾತಿಯವರೊಡನೆ ಲಗ್ನವಾಗಿ ಲಿಂಗಾಯತ ಧರ್ಮವನ್ನು ಬಿಟ್ಟು ಹೋಗುತ್ತಾರೆ. ಇದನ್ನು ಹೇಗೆ ತಪ್ಪಿಸಬೇಕು?

★ ಕೆಲವು ಲಿಂಗಾಯತರ ಉಪ ಪಂಗಡಗಳವರು ಮಾತ್ರ ಹೀಗೆ ಮಾಡುತ್ತಾರೆ. ಈ ಧರ್ಮಕ್ಕೆ ವಿವಿಧ ಜಾತಿ, ಕಸುಬಿನವರು ಒಬ್ಬೊಬ್ಬ ಶರಣರು, ಗುರುಗಳು, ನೇತಾರರ ಪ್ರಭಾವದಿಂದ ಬಂದು ಸೇರಿದರು. ಕೆಲವು ಜನಾಂಗಗಳ ಇಡೀ ಸಮೂಹವೇ ದೀಕ್ಷೆ ಪಡೆಯಿತು. ಅವರು ಈಗ ಲಿಂಗಾಯತ ಧರ್ಮವನ್ನು ಬಿಡುವುದಿಲ್ಲ. ಆದರೆ ಕೆಲವರು ಅರ್ಧ ಜನ ದೀಕ್ಷೆ ಮತ್ತೆ ಅರ್ಧ ಜನ ಪೂರ್ವಾಶ್ರಮದ ಜಾತಿಯಲ್ಲಿ ಉಳಿದರು. ಅಂಥ ಸಂದರ್ಭದಲ್ಲಿ ಇಂಥ ಪ್ರಸಂಗ ಜರುಗುತ್ತವೆ. ಅದರಲ್ಲೂ ಈಗ ರಾಜಕೀಯ ದ್ವೇಷ ವಿಪರೀತವಾಗುತ್ತಿದೆ. ಲಿಂಗಾಯತರಲ್ಲಿನ ಒಳಪಂಗಡಗಳ ಪೈಪೋಟಿ ತೀವ್ರವಾಗಿ ಸಮಾಜವು ಚೂರು ಚೂರಾಗುತ್ತಿದೆ. ವಾರಕೊಮ್ಮೆ ವರ್ಷಕ್ಕೊಮ್ಮೆ ಸ್ಥಳೀಯವಾಗಿ ಸೇರುವುದು, ಮುಸಲ್ಮಾನರ ಹಜ್‌ದಂತೆ ವರ್ಷಕ್ಕೊಮೆ ಧರ್ಮ ಕ್ಷೇತ್ರದಲ್ಲಿ ಸೇರುವುದು ಮೊದಲಿನಿಂದಲೂ ಸಾಗಿ ಬಂದಿದ್ದರೆ ಎಲ್ಲಾ ಪಂಗಡಗಳ ಮಧ್ಯದ ಗೋಡೆ ಇರುತ್ತಿರಲ್ಲಿಲ್ಲ; ಪುನಃ ಬೇರೆ ಬೇರೆಯಾಗುವ ಸನ್ನಿವೇಶ ಬರುತ್ತಿರಲಿಲ್ಲ. ಆ ಸಾಮರಸ್ಯವನ್ನು ಮಠಾಧೀಶರು ತರಲಿಲ್ಲ; ಈಗಿನ ರಾಜಕಾರಣಿಗಳು ಹೊಂಚುಹಾಕಿ ಬಿರುಕುಗಳನ್ನು ದೊಡ್ಡದು ಮಾಡುತ್ತಿದ್ದಾರೆ. ನಿಸಹಾಯಕರಾಗಿ ರಾಜಕಾರಣಿಗಳ ಲೀಲಾ ವಿಲಾಸವನ್ನು ನೋಡುವುದಷ್ಟೆ ಈಗ ಉಳಿದಿರುವ ಕೆಲಸ. ಬಹಳವೆಂದರೆ ನಿಮ್ಮಂತಹ ಪ್ರಜ್ಞಾವಂತರು ವಿಶಾಲವಾದ ಧರ್ಮಬಿಟ್ಟು ಸಂಕುಚಿತವಾದ ಜಾತಿ ಬಂಧನಕ್ಕೆ ಒಳಗಾಗಬೇಡಿ ಎಂದು ಅಂಥವರಿಗೆ ತಿಳಿ ಹೇಳುವ ಕೆಲಸ ಮಾಡಿರಿ.

3. ?. ಲಿಂಗಾಯತ ಕೆಲವು ಸ್ವಾಮಿಗಳು, ಸಂಶೋಧಕರು ತಮ್ಮ ಧರ್ಮದ ರ್ಥಗರ್ಭೀತ ಹೆಸರನ್ನು ಅಲ್ಲಗಳೆದು, ಸಂಬಂಧವಿರದ ವೀರಶೈವ ಪದವನ್ನು ಅಂಟಿಸಿಕೊಳ್ಳುತ್ತಾರಲ್ಲ. ಇದಕ್ಕೆ ವಚನಗಳ ಅಧ್ಯಯನ ಮಾಡದೆ ಇರುವುದೇ ಕಾರಣ ಆಗಿರಬಹುದೇ?

★ ಭಾರತೀಯರಲ್ಲಿ ಒಂದು ಅಪ್ರಾಮಾಣಿಕ ಪ್ರವೃತ್ತಿಯಿದೆ. ಮಹಾಪುರುಷರು ಕ್ರಾಂತಿ ಕಾರಿಗಳು ಎಲ್ಲರನ್ನು ಪುರಾಣೀಕರಿಸುತ್ತಾರೆ. ಅದೇ ರೀತಿ ತಮಗೆ ಬೇಕಾದ ವಿಚಾರಗಳನ್ನೂ ಕಷ್ಟಪಟ್ಟು ಹುಡುಕುತ್ತಾರೆ, ಕೆಲವೊಮ್ಮೆ ತೂರಿಸುತ್ತಾರೆ. ಹಿಂದಿನ ಬಾಗಿಲಲ್ಲಿ ತಂದಿಟ್ಟು, ಮುಂದಿನ ಬಾಗಿಲಿನಿಂದ ಬಂದು, ನೋಡು



ಇಲ್ಲಿ ಈ ವಸ್ತುವಿದೆ ಎಂಬ ಜಾಯಮಾನ ಭಾರತೀಯರದು. ಕೆಲವು ಸ್ವಾಮಿಗಳು, ಸಂಶೋಧಕರು ವಚನ ಸಾಹಿತ್ಯ ಅಧ್ಯಯನ ಮಾಡಿಲ್ಲ ಎಂಬುದು ಸುಳ್ಳು; ಅವರಿಗೆ ಸತ್ಯವೇನೆಂಬುದು ಖಂಡಿತವಾಗಿಯೂ ಗೊತ್ತು. ಆದರೂ ಅದನ್ನು ಒಪ್ಪಿಕೊಳ್ಳದೆ ದುರಾಲೋಚನೆ ಯಿಂದ ತಮ್ಮ ಪೂರ್ವ ನಿರ್ಧಾರಿತ (Predetermined) ಆಲೋಚನೆಗಳನ್ನು ಕಷ್ಟಪಟ್ಟು ಹುಡುಕುತ್ತಾರೆ.

- ಜಿ. ರಾಮನಗೌಡ, ಬೈಲಹೊಂಗಲ

?. ಶರಣ ಹರಳಯ್ಯ ಎಂಬ ಮಾಸ ಪತ್ರಿಕೆಯಲ್ಲಿ ಗದುಗಿನ ಜಗದ್ಗುರುಗಳ ಒಂದು ಹೇಳಿಕೆ ಹೀಗಿದೆ. ಸೊಲ್ಲಾಪುರದ ಸಿದ್ಧರಾಮೇಶ್ವರರ ಗುಡಿಯ ಸಮಿತಿಯವರು ಸಿದ್ಧರಾಮೇಶ್ವರರಿಗೂ ಬಸವಣ್ಣನವರ ಕ್ರಾಂತಿಗೂ ಏನೂ ಸಂಬಂಧವಿಲ್ಲ ಎಂದು ಹೇಳಿಕೆ ಕೊಟ್ಟಿದ್ದಾರೆಂದು ತಿಳಿಸುತ್ತದೆ. ಅಲ್ಲಿಯ ದೇವಾಲಯದಲ್ಲಿ ವೈದಿಕ ಸಂಪ್ರದಾಯದ ಪೂಜೆ ಇದೆ ಎಂದು ಕೇಳಿದ್ದೇವೆ.

★ ಲಿಂಗಾಯತ ಸಮಾಜವು ಇಂದು ಗೊಂದಲದ ಗೂಡಾಗಿದೆ. ಸಿದ್ಧರಾಮೇಶ್ವರರು ಇಷ್ಟಲಿಂಗ ದೀಕ್ಷೆ ಪಡೆದು ವಾಪಸ್ಸು ಹೋದಾಗ ಹಳೆಯ ಶಿಷ್ಯರು, ಅನುಯಾಯಿಗಳು ಆಕ್ಷೇಪ ಮಾಡುತ್ತಾರೆ. ಅವರೆ ನಿಜ ಜ್ಞಾನಿ ಸಿದ್ಧರಾಮೇಶ್ವರರು,

ಕಸವ ಕೊಂಡು ಹೊಸಧಾನ್ಯವ ಕೊಟ್ಟರೆ ಒಲ್ಲೆಂಬ ಚದುರರಾರು?
ಜಲವ ಕೊಂಡು ಅಮೃತವ ಕೊಟ್ಟರೆ ಒಲ್ಲೆಂಬ ಭಾಷೆಯದಾರದು?
ಎನ್ನಂತರಂಗದ ಅಜ್ಞಾನವ ಕೊಂಡು ಸುಜ್ಞಾನವಪ್ಪ ಕರತೇಜವ ಕೊಟ್ಟರೆ
ಒಲ್ಲೆನೆಂಬ ಪಾತಕಿ ಯಾರು?

ಎಂದು ಅಂಥವರಿಗೆ ಉತ್ತರಿಸುತ್ತಾರೆ. ಪೂರ್ವಾಶ್ರಮದ ಸಮಯದಲ್ಲಿದ್ದ ಅಂಥ ಜನರ ವಂಶಾವಳಿ ಮುಂದುವರಿದುಕೊಂಡೇ ಬಂದಿದೆ. ಲಿಂಗಾಂಗಯೋಗಿ ಶರಣ ಗಣಾಧೀಶರಲ್ಲಿ ಒಬ್ಬರಾದ 3ನೆಯ ಶೂನ್ಯ ಪೀಠಾಧೀಶರಾದ ಸಿದ್ಧರಾಮೇಶ್ವರರ ವ್ಯಕ್ತಿತ್ವ ಪರಿಚಯ ಮಾಡುವಂತಹ ಪರಿಸರ ಆ ದೇವಾಲಯದಲ್ಲಿ, ಸೊಲ್ಲಾಪುರದಲ್ಲಿ ಇಲ್ಲದ್ದು ಬಹಳ ವಿಷಾದನೀಯವಾಗಿದೆ.

- ಧರ್ಮಣ್ಣ ಮಾಸ್ತರ್, ಕಣಮಣಸ, ಆಳಂದ ತಾಲ್ಲೋಕ್

1. ? ಭಾರತ ಸೇವಾದಳದ ಒಂದು ಕ್ಯಾಂಪ್ ನಡೆಯಿತು. ಆಳಂದ ಮತ್ತು ಅಫಜಲಪುರ ತಾಲ್ಲೋಕಿನ ಪ್ರೈಮರಿ ಶಿಕ್ಷಕರು ಭಾಗವಹಿಸುತ್ತಿದ್ದರು. ದಿನಾಲೂ ರಾತ್ರಿ 12-1ರವರೆಗೆ ಚರ್ಚೆ ನಡೆಯುತ್ತಿತ್ತು. ಕೆಲವರು ಕೇಳಿದರು, ''ಮನುಷ್ಯ ಚರ್ಮ ತೀರಾ ತೆಳುವು. ಅದರಿಂದ ಹರಳಯ್ಯನವರು ಚಮ್ಮಾವುಗೆ (ಚಪ್ಪಲಿ) ಮಾಡಲು ಸಾಧ್ಯವೇ ಇಲ್ಲ.'' ಎಂದು.

★ ಬಹುಶಃ ಹರಳಯ್ಯ ಶರಣರು ಪ್ರಾಣಿಗಳ ಚರ್ಮದಿಂದಲೇ ಮಾಡಿ, ಅದರ ಮೇಲೆ ತಮ್ಮ ಮತ್ತು ಶರಣೆ ಕಲ್ಯಾಣಮ್ಮನ ತೊಡೆಯ ಚರ್ಮವನ್ನು ಸಾಂಕೇತಿಕವಾಗಿ ಅಂಟಿಸಿರಬಹುದು. ಏಕೆಂದರೆ ಮನುಷ್ಯ ಚರ್ಮ ತೀರಾ ತೆಳುವಾಗಿರುತ್ತದೆ. ಎಂದು ಪೂಜ್ಯ ಶ್ರೀ ಅಪ್ಪಾಜಿಯವರು ಸಹ ಹೇಳುತ್ತಿದ್ದರು. ನಮ್ಮದೂ ಅದೇ ಊಹೆ.

2. ?. ಮುಗ್ಧ ಶರಣ ಹರಳಯ್ಯ-ಶೀಲವಂತ ಮತ್ತು ಮಧುವರಸರನ್ನು ಆನೆಯ ಕಾಲಿಗೆ ಕಟ್ಟಿ ಎಳೆಸಿ, ಕೊಲ್ಲಿಸಲಾಯಿತು. ಅದರ ಕಡೆಗೆ ಗಮನ ಕೊಡದೆ ಬಸವಣ್ಣನವರು ಕೂಡಲ ಸಂಗಮದತ್ತ, ಚನ್ನ ಬಸವಣ್ಣನವರು ಉಳಿವೆಯತ್ತ ಹೋದುದು ತಪ್ಪಲ್ಲವೆ? ಎಂದು ಕೆಲವರು ಕೇಳಿದರು.

★ ಯಾವಾಗಲೂ ಕಥೆಯನ್ನು, ನಡೆದ ಪ್ರಸಂಗಗಳನ್ನು ಒಂದು ಕ್ರಮದಲ್ಲಿ ಅರ್ಥ ಮಾಡಿಕೊಳ್ಳಬೇಕು. ಕಲ್ಯಾಣ ಕ್ರಾಂತಿಯ ಘಟನೆ ನಡೆದುದು ಫಾಲ್ಗುಣ ಮಾಸದಲ್ಲಿ. ವರ್ಣಾಂತರ ವಿವಾಹವಾದುದರಿಂದ ಶಾಸ್ತ್ರಕ್ಕೆ ಅಪಚಾರವಾಯಿತೆಂದು ವೈದಿಕಶಾಹಿ ಬಿಜ್ಜಳನನ್ನು ಪ್ರಚೋದಿಸಿತು. ಏನೊಂದೂ ನಿರ್ಧಾರ ತೆಗೆದುಕೊಳ್ಳಲಾರದ ಬಿಜ್ಜಳ ಮತಿಭ್ರಾಂತನಾದಾಗ ಗುರು ಬಸವಣ್ಣನವರು ಪ್ರಧಾನಿ ಪಟ್ಟವನ್ನು ತ್ಯಾಗ ಮಾಡಿದರು. ಅದರಿಂದಲೂ ಸಮಾಧಾನಗೊಳ್ಳದ ಪುರೋಹಿತ ಶಾಹಿ ಬಸವಣ್ಣನವರಿಗೆ ಗಡಿಪಾರು ಶಿಕ್ಷೆಯಾಗುವಂತೆ ನೋಡಿಕೊಂಡಿತು. ಅವರು ಕಲ್ಯಾಣದಿಂದ ಗಡಿಪಾರಾದುದು

ದ್ವಾದಶಿ ದಿವಸ. ತ್ರಯೋದಶಿಯಂದು ಶರಣರ ಬಂಧನ ಮತ್ತು ವಿಚಾರಣೆ ನಡೆದವು ಚತುರ್ದಶಿಯಂದು ಅವರ ವಧೆಯಾಯಿತು. ವಧೆಯು ಗುಟ್ಟಾಗಿ ನಡೆದು ಚನ್ನಬಸವಣ್ಣ, ಮಾಚಿದೇವರಿಗೆ ತಪ್ಪಿಸಲಾಗಲಿಲ್ಲ. ವಧೆಯ ವಿಷಯ ಬಹಿರಂಗಗೊಂಡಾಗ ಶರಣರು ಆಕ್ರೋಶ -ದುಃಖಗಳಿಂದ ಜರ್ಝರಿತರಾದರು. ಕಲ್ಯಾಣದ ಬೀದಿ ಬೀದಿಗಳಲ್ಲಿ ಆ ಆಕ್ರೋಶ ವ್ಯಕ್ತವಾಯಿತು. ಚಾಲುಕ್ಯ ರಾಜ್ಯವನ್ನು ಆಕ್ರಮಿಸಿಕೊಂಡು ಆಳುತ್ತಿದ್ದ ಬಿಜ್ಜಳನ ಬಗ್ಗೆ ಚಾಲುಕ್ಯ ನಿಷ್ಠ ಸಾಮಂತರಾದ ಜಗದೇವ, ಮಲ್ಲಣ್ಣ ಬೊಮ್ಮಣ್ಣರಿಗೆ ಅಸಹನೆ ಇದ್ದು, ಹೋಳಿ ಹುಣ್ಣಿಮೆಯಂದು ಬಿಜ್ಜಳನನ್ನು ವಧಿಸಿದರು. ಜಾತಿವಾದಿಗಳ ಕಣ್ಣು ಇದ್ದುದು ವಚನ ಸಾಹಿತ್ಯದ ಬಗ್ಗೆ. ಅದನ್ನು ಉಳಿಸಲೇ ಬೇಕೆಂದು ಚನ್ನಬಸವಣ್ಣ, ಅಕ್ಕನಾಗಲಾಂಬಿಕಾ ತಾಯಿ ಮುಂತಾದವರು ವೀರ ಶರಣ ಮಡಿವಾಳ ಮಾಚಿದೇವರ ನೇತೃತ್ವದಲ್ಲಿ ಸಾಹಿತ್ಯವನ್ನು ತೆಗೆದುಕೊಂಡು ಕಲ್ಯಾಣದಿಂದ ಹೊರಟರು. ಎಂಥ ಕಷ್ಟಕರ ಪ್ರಸಂಗವನ್ನು ಶರಣರು ಎದುರಿಸಿದ್ದಾರೆ ಎಂಬುದನ್ನು ಅರಿಯಬೇಕೆ ವಿನಾ ಇಲ್ಲದ ಅಮಾನವೀಯತೆಯನ್ನ ಹುಡುಕಲು ಹೋಗಬಾರದು.

3.?. ಭಾರತ ಸೇವಾ ದಳದ ಪರವಾಗಿ ತರಬೇತಿ ನೀಡಲು ಅಲ್ಲಿಗೆ ಬಂದವರು ಬಹುದೇವೋಪಾಸಕರಾದ ವೀರಶೈವ ಜಂಗಮರು. ಅವರು ಬಹಳ ಅಸಹನೆಯಿಂದ ನನ್ನೊಡನೆ ವರ್ತಿಸುತ್ತಿದ್ದರು. ವೀರಶೈವವಾದಿಗಳ ಸ್ವಭಾವ ನಮಗೆ ತಿಳಿಯದ್ದೇನಲ್ಲ. ಆದರೆ ಭಾರತ ಸೇವಾದಳದಂತಹ ಜಾತಿ, ಧರ್ಮಾತೀತ ಸಂಸ್ಥೆಯಲ್ಲಿ ತರಬೇತಿ ನೀಡಲು ಬಂದವರು ಸಹ ಅದೇ ಮನೋಭಾವನೆಯಿಂದ ವರ್ತಿಸಿದ್ದು ನಮಗೆ ಬಹಳ ದುಃಖ ತಂದಿತು.

★ ಇಲಿಯು ಹವಾ ನಿಯಂತ್ರಿತ ಕೋಣೆಯಲ್ಲಿದ್ದು ಬೆಲೆ ಬಾಳುವ ಸೋಫಾದ ಕೆಳಗೆ ಮರಿ ಹಾಕಿದರೂ, ಅವು ಕಡಿಯುವ ಕೆಲಸವನ್ನೇ ಮಾಡುವುದು. ಅವುಗಳ ಸ್ವಭಾವದಲ್ಲಿ ಬದಲಾವಣೆಯಾಗದು

4.? ಸರ್ವ ಧರ್ಮ ಪ್ರಾರ್ಥನಾ ಗೀತೆಗಳನ್ನು ಹಾಡುವಾಗ ''ಹೇ ಪರಮಾತ್ಮ ಲೋಕದ ಮಿತ್ರ'' ಎಂಬುದನ್ನು ನಾನು ಹಾಡಿದೆ. ಎಲ್ಲ ಜನರೂ ಬಹಳ ಮೆಚ್ಚಿಕೊಂಡರು. ಶಾಲೆಗಳಲ್ಲಿ ಹಾಡಿಸಲು ಬಹಳ ಸೂಕ್ತವಾಗಿದೆ ಎಂದರು. ಆದರೆ ಮೇಲೆ ತಿಳಿಸಿದ ಆ ವೀರಶೈವ ಜಂಗಮರು ನೀವು ಲಿಂಗದೇವ ಎಂದು ಹಾಡುತ್ತೀರಿ. ನೀವು ಸರ್ವನಾಶವಾಗುತ್ತೀರಿ ಎಂದು ಆಕ್ರೋಶದಿಂದ ನುಡಿದರು.

★. ಬಹುದೇವೋಪಾಸಕರಾದ ವೀರಶೈವವಾದಿಗಳಿಗೆ ಲಿಂಗದೇವನ ಮಹಿಮೆ ಅರ್ಥವಾಗದು. ಅದೇ ಪದದಿಂದಲೇ ಬಸವ ಧರ್ಮ ವಿಶ್ವಧರ್ಮವಾಗಲಿರುವುದು. ಅಂಥವರ ಶಾಪ ಯಾರಿಗೂ ತಟ್ಟದು ಚಿಂತಿಸಬೇಡಿರಿ.

## ಸ್ವಯಂ ಸೇವಕರಿಗೆ ಕರೆ

ತನು ಮನ ಧನಗಳಿಂದ ಸೇವೆ ಮಾಡಿ ಧರ್ಮವನ್ನು ಸಂರಕ್ಷಿಸಬೇಕಾದುದು ಎಲ್ಲರ ಕರ್ತವ್ಯವಾಗಿದೆ. ಶರಣ ಮೇಳ /ಕಲ್ಯಾಣ ಪರ್ವಗಳ ಯಶಸ್ಸು ನಿಂತಿರುವುದೇ ನಿಷ್ಠಾವಂತ ಶರಣರ ಪರಿಶ್ರಮದ ಮೇಲೆ. ಆದ್ದರಿಂದ ಶರಣ ಮೇಳಕ್ಕೆ ಹದಿನೈದು ದಿವಸ, ಹತ್ತು ದಿವಸ ಮೊದಲೇ ಕಾರ್ಯಕರ್ತ ಶರಣ-ಶರಣೆಯರು ಕೂಡಲ ಸಂಗಮಕ್ಕೆ ಆಗಮಿಸಿ ಸೇವಾ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಆಗಮಿಸಬೇಕೆಂದು ಸೂಚಿಸುತ್ತೇನೆ.

ಕಲ್ಯಾಣ ಕಿರಣ ಪತ್ರಿಕೆಯ ಓದುಗರು ನಿಮ್ಮ ಪರಿಚಯದವರು, ಮಿತ್ರರು ಬಂಧು ಬಾಂಧವರ ಜೊತೆಗೆ ಶರಣ ಮೇಳಕ್ಕೆ ಬರುವುದು ಮಾತ್ರವಲ್ಲ ಇನ್ನಿತರರಿಗೂ ಪ್ರಚಾರ ಮಾಡಿ, ಬರಲು ಪ್ರೇರೇಪಿಸಬೇಕೆಂದು ಸೂಚಿಸುತ್ತೇವೆ.

-ಶರಣ ಮೇಳ ಉತ್ಸವ ಸಮಿತಿ.



# ಬಸವ ನಾಣ್ಯದಲ್ಲಿ ಎರಡು ಪ್ರಮಾದ

- ಬಾಲಾ ಚೌಹಾಣ್

ಬೆಂಗಳೂರು: ಕ್ರಾಂತಿಯೋಗಿ ಬಸವಣ್ಣನವರ ನೆನಪಿನಲ್ಲಿ ಬಿಡುಗಡೆ ಮಾಡಲಾದ ನಾಣ್ಯಗಳಲ್ಲಿ ಎರಡು ಪ್ರಮಾದಗಳು ಬೆಳಕಿಗೆ ಬಂದಿವೆ. ನಾಣ್ಯ ಬಿಡುಗಡೆಯಾದ ವರ್ಷ ಹಾಗೂ ಬಸವಣ್ಣನವರ ಜೀವಿತಾವಧಿಯ ವರ್ಷವನ್ನು ಈ ನಾಣ್ಯಗಳಲ್ಲಿ ಮುದ್ರಿಸದೆ ಕೈ ಬಿಡಲಾಗಿದೆ. ಪ್ರಧಾನಿ ಮನಮೋಹನ್ ಸಿಂಗ್ ಅವರು ಜೂನ್ 23ರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಈ ನಾಣ್ಯಗಳನ್ನು ನಾಡಿಗೆ ಅರ್ಪಿಸಿದ್ದಾರೆ.

ನಿಯಮದ ಪ್ರಕಾರ , ಯಾವುದೇ ನಾಣ್ಯಗಳಲ್ಲಿ ಬಿಡುಗಡೆಯಾದ ವರ್ಷ ಮತ್ತು ಅದರಲ್ಲಿ ಬಿಂಬಿಸಲಾಗಿರುವ ವ್ಯಕ್ತಿಯ ಜೀವಿತಾವಧಿಯ ವರ್ಷವನ್ನು ಮುದ್ರಿಸಬೇಕಾಗುತ್ತದೆ. ಇದು ನಾಣ್ಯ ಸಂಗ್ರಹಕಾರರಿಗೂ ಅನುಕೂಲಕರ ; ಆದರೆ, ಬಸವೇಶ್ವರರ ನಾಣ್ಯದಲ್ಲಿ ಇದು ಮಾಯವಾಗಿದೆ. ಈ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಭಾರತೀಯ ನಾಣ್ಯಗಳ ಮುದ್ರಣಾಲಯದ ಪ್ರಧಾನ ವ್ಯವಸ್ಥಾಪಕ ಎಸ್.ಕೆ. ಚೌಧರಿ ಅವರಿಗೆ ಬಸವ ಸಮಿತಿ ಪತ್ರ ಬರೆದಿತ್ತು.

ಈ ನಡುವೆ ಅಮೆರಿಕ ನಾಣ್ಯ ಸಂಗ್ರಹಕಾರರ ಸಂಘದ ಸದಸ್ಯರಾಗಿರುವ ಕರ್ನಾಟಕ ನಾಣ್ಯ ಸಂಗ್ರಹ ಹವ್ಯಾಸಿಗಳ ಸಂಘದ ಸದಸ್ಯ ಪ್ರೊ. ವಿ.ಎಸ್. ಯಳವಿಗಿ ಅವರು ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್‌ಗೆ ಪತ್ರವೊಂದನ್ನು ಬರೆದು, ''ಬಸವೇಶ್ವರ ನಾಣ್ಯ ಅಪೂರ್ಣ'' ಎಂದು ತಿಳಿಸಿದ್ದರು.

''ನಾಣ್ಯದ ಎರಡು ಕಡೆಗಳಲ್ಲಿ ಕಾಲಮಾನವನ್ನು ಸಮರ್ಪಕವಾಗಿ ಉಲ್ಲೇಖಿಸಬೇಕು. ಅನಂತರವಷ್ಟೆ ಈ ನಾಣ್ಯ ಕ್ರಮಬದ್ಧವಾಗುತ್ತದೆ ಮತ್ತು ಜನಕ್ಕೆ ಬಸವೇಶ್ವರ ಕಾಲಮಾನದ ಬಗ್ಗೆ ಅರಿವು ಮೂಡುತ್ತದೆ.'' ಎಂದು ಜುಲೈ 9ರ ಪತ್ರದಲ್ಲಿ ತಿಳಿಸಿದ್ದರು. ಈ ಪತ್ರಗಳಿಗೆ 'ಈವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ' ಎಂದು ಬಸವ ಸಮಿತಿಯ ಅಧ್ಯಕ್ಷ ಅರವಿಂದ ಜತ್ತಿ ಪ್ರಜಾವಾಣಿಗೆ ತಿಳಿಸಿದ್ದಾರೆ.

'ಕಾಲಮಾನವನ್ನು ಸೂಚಿಸದ ಈ ನಾಣ್ಯಗಳು ವಿಶಿಷ್ಟವೇ. ಬಸವಣ್ಣ ಕಾಲಾತೀತ ಎನ್ನುವುದನ್ನು ಇದು ಸೂಚಿಸಬಹುದು. ಆದರೂ ಸ್ಮಾರಕದ ನಾಣ್ಯಗಳು ಕೆಲವು ಗುಣಲಕ್ಷಣಗಳನ್ನು ಹೊಂದಿರಬೇಕು' ಎಂದು ಅವರು ಅಭಿಪ್ರಾಯಪಡುತ್ತಾರೆ. ಫೆಬ್ರವರಿ 2005ರಲ್ಲಿ ಬಸವಣ್ಣನವರ ನೆನಪಿನ ನಾಣ್ಯದ ಪರಿಕಲ್ಪನೆ ಮೂಡಿತು. ಬಸವ ಸಮಿತಿಯ ಸದಸ್ಯರಾದ ಹವ್ಯಾಸಿ ನಾಣ್ಯ ಸಂಗ್ರಹಕಾರ ಮಹಾಲಿಂಗೇಶ್ವರ ಅಥಣಿ ಅವರ ಪರಿಕಲ್ಪನೆಯನ್ನು ಕೇಂದ್ರ ಸಚಿವ ಎಂ. ರಾಜಶೇಖರನ್ ಅವರ ಗಮನಕ್ಕೆ ತರಲಾಯಿತು.

'ಸಚಿವ ಎಂ.ವಿ ರಾಜಶೇಖರನ್ ಅವರು ಹಣಕಾಸು ಸಚಿವರಿಗೆ ಮತ್ತು ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದರು. ಇದಕ್ಕೆ ಸ್ಪಂದಿಸಿದ ಹಣಕಾಸು ಸಚಿವ ಪಿ. ಚಿದಂಬರಂ 2005ರ ಆಗಸ್ಟ್‌ನಲ್ಲಿ ಬೆಂಗಳೂರಿಗೆ ಬಂದಿದ್ದಾಗ ನಾಣ್ಯ ಬಿಡುಗಡೆಯನ್ನು ಪ್ರಕಟಿಸಿದರು. ಎಂದು ಅಥಣಿ ನೆನಪಿಸಿಕೊಳ್ಳುತ್ತಾರೆ.'

ಜತ್ತಿ, ಅಥಣಿ ಅವರಲ್ಲದೆ ಹಿರಿಯ ಸಾಹಿತಿಗಳಾದ ಚನ್ನವೀರ ಕಣವಿ , ಎಂ.ಎಂ. ಕಲಬುರ್ಗಿ ಅವರು ನಾಣ್ಯದ ವಿನ್ಯಾಸವನ್ನು ರೂಪಿಸಿದರು. ಈವರೆಗೆ ದೇಶದಲ್ಲಿ ಇಂಥ 70 ಸ್ಮರಣಿಕೆಯ ನಾಣ್ಯಗಳು ಹೊರಬಂದಿದ್ದರೆ , ಬಸವಣ್ಣನವರು ಈ ಗೌರವ ಪಡೆದಿರುವ ಮೊದಲ ಕನ್ನಡಿಗ.

( ಪ್ರಜಾವಾಣಿ -03-11-06)

## ಅಲ್ಲಮ ಪ್ರಭು ಗಿರಿ ಮತ್ತು ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಸಂಕಲ್ಪ

-ಮಾತಾಜಿ

ಸಂಕೇಶ್ವರದ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ . ಡಾ|| ಶಿವಗೌಡ ಪಾಟೀಲರು ಒಂದು ಸಾಂಕೇತಿಕ ಲೇಖನ ಬರೆದು ಕಳಿಸಿದ್ದರು. ನಾವು 2005ರ ಮೇ 16ರಂದು ಮೊದಲ ಬಾರಿಗೆ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್ ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮ ವಲಯದಲ್ಲಿ ಇರುವ ಅಲ್ಲಮ ಪ್ರಭು ಗಿರಿಯಲ್ಲಿರುವ ಅಲ್ಲಮ ಪ್ರಭು ದಿವ್ಯಾಲಯವನ್ನು ಸಂದರ್ಶಿಸಿದೆವು. ನಂತರ 2006ರ ಜನವರಿ 31ರಂದು ಜಮೀನನ್ನು ಖರೀದಿಸಿದೆವು. ಇದಕ್ಕೂ ಮೊದಲು ಮಹಾರಾಷ್ಟ್ರ ರಾಷ್ಟ್ರೀಯ ಬಸವ ದಳ ಅಧ್ಯಕ್ಷೆ ಶರಣೆ ಮಾಲೂತಾಯಿ ಚಂದ್ರಕಾಂತ ಸ್ವಾಮಿಯವರು ಅಮವಾಸ್ಯೆ ದಿನ ಅಲ್ಲಿಗೆ ಹೋಗಿ ಪ್ರವಚನ ನೀಡುತ್ತಿದ್ದರು. ಒಮ್ಮೆ ಪೂಜ್ಯ ಶ್ರೀ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಜಯಂತಿಯಂದು ಭಾವ ಚಿತ್ರ ಇಟ್ಟು, ಕಾರ್ಯಕ್ರಮವನ್ನು ಆಚರಿಸಿದರಂತೆ. ಆಗ ಇಚಲಕರಂಜಿ, ಸಂಕೇಶ್ವರ ಇತ್ಯಾದಿ ಊರುಗಳ ರಾ.ಬ.ದಳಗಳವರು ಸಮಾವೇಶವಾಗಿದ್ದರಂತೆ. ಇದನ್ನು ಮುಖ್ಯವಾಗಿಟ್ಟುಕೊಂಡು ಡಾ|| ಶಿವಗೌಡರು ನಾವು ಜಾಗವನ್ನು 2006ರಲ್ಲಿ ಖರೀದಿ ಮಾಡುವ ಮೊದಲೇ ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿ ಅಲ್ಲಿ ಪಾದಾರ್ಪಣೆ (ಜಯಂತಿ ಆಚರಣೆ ರೂಪದಲ್ಲಿ ) ಮಾಡಿದರು. ಎಂದು ಬರೆದಿದ್ದರು.

ದಿ. 29-09-2006 ರಂದು ನಾನು ಬೆಂಗಳೂರಿನಿಂದ ಧಾರವಾಡಕ್ಕೆ ಹೋಗುವಾಗ ಶರಣೆ. ಪ್ರೇಮಾ ಮತ್ತು ಶರಣ. ಚಂದ್ರಯ್ಯಾ ಅವರ ಮನೆಯಲ್ಲಿ ನೆನಹು ಕಾರ್ಯಕ್ರಮದಲ್ಲಿ ಭಾಗಿಯಾದೆ. ಆಗ ಅಲ್ಲಿಗೆ ಪೂಜ್ಯ ಅಪ್ಪಾಜಿಯವರ ಕಡೆಯ ತಮ್ಮ ಶರಣ . ರಾಚಪ್ಪ ಕಪ್ಪರದ ಆಗಮಿಸಿದ್ದರು.ಅವರು "ತಮ್ಮ ಗಮನಕ್ಕೆ ಒಂದು ವಿಷಯ ತರಬೇಕು ಎಂದುಕೊಂಡಿದ್ದೆ. ಬರೆದು ತಿಳಿಸಲು ಆಗಲಿಲ್ಲ. ಅದು ಏನೆಂದರೆ, 1964 ಅಥವಾ 1965 ಇರಬಹುದು.ಪೂಜ್ಯ ಗುರುಗಳು ಕೊಲ್ಹಾಪುರಕ್ಕೆ ಹೋಗಿದ್ದರು. ನಾನೂ ಅವರ ಜೊತೆಗೆ ಹೋಗಿದ್ದೆ. ಶರಣ .ಶ್ರೇಷ್ಠಿ ಎಂಬ ಸಮಾಜದ ಗಣ್ಯರು ಮತ್ತು ಜ್ಞಾನ ಪ್ರಸಾದ ಎಂಬ ಪತ್ರಿಕೆ ನಡೆಸುತ್ತಿದ್ದ ಶರಣ .ಸಂಕನವಾಡೆ ಮುಂತಾಗಿ ಕೆಲವರು ಹತ್ತಿರದಲ್ಲಿ ಅಲ್ಲಮ ಪ್ರಭುವಿನ ಒಂದು ಸ್ಥಾನವಿದೆ." ಎಂದು ಹೇಳಿ ಪೂಜ್ಯರನ್ನು ಕರೆದೊಯ್ದರು. ಕೊಲ್ಹಾಪುರದ ಗಣ್ಯರು ಹದಿನೈದು ಜನ , ನಾವು ಎಲ್ಲರೂ ಗುಡ್ಡವನ್ನು ಏರಿದೆವು . ಕೊಲ್ಹಾಪುರ - ಮೀರಜ್ ರಸ್ತೆಯಲ್ಲಿಂದ ಗುಡ್ಡವನ್ನು ಹತ್ತಿದ್ದೆವು. ರಸ್ತೆ ಇರಲಿಲ್ಲ. ವಿಪರೀತ ಹುಲ್ಲು ಎದೆಮಟ್ಟ ಬೆಳೆದಿತ್ತು. ಅದರಲ್ಲೇ ಹತ್ತಿದ್ದೆವು .ಬೆಳಿಗ್ಗೆ ಹತ್ತಕ್ಕೆ ಏರಲು ತೊಡಗಿದೆವು . ಅಲ್ಲಿ ಒಂದು ಚಿಕ್ಕ ಕಲ್ಲಿನ ಗುಡಿ ಇತ್ತು, ಒಂದು ಜ್ಯೋತಿ ಉರಿಯುತ್ತಿತ್ತು. ಅಲ್ಲಮ ಪ್ರಭು ದೇವರು ತಪಸು ಮಾಡಿದ ಜಾಗ ಎಂದು ಹೇಳಿದರು. ಪೂಜ್ಯ ಅಪ್ಪಾಜಿ " ಶರಣರ ಸ್ಥಾನಗಳು ಎಷ್ಟು ನಿರ್ಲಕ್ಷಿತವಾಗಿವೆ ? ಎಂದು ವ್ಯಥೆ ಪಟ್ಟರು. ಅಲ್ಲಿ ಕುಳಿತು ಪೂಜೆ - ಪ್ರಾರ್ಥನೆ ಮಾಡಿ ಬಂದೆವು."ಎಂದು ರಾಚಣ್ಣಾ ಹೇಳಿದರು. ಕೇಳಿ ನನಗೆ ರೋಮಾಂಚನವಾಯಿತು.

ಪೂಜ್ಯ ಅಪ್ಪಾಜಿ ಶಾರೀರಿಕವಾಗಿ ಇಲ್ಲವಾದರೂ ಅವರ ಸಂಕಲ್ಪ ತರಂಗಗಳು ಎಷ್ಟು ಅದ್ಭುತವಾಗಿ ಕೆಲಸ ಮಾಡುತ್ತವೆ. 40 ವರ್ಷಗಳ ಹಿಂದೆ ಅವರು ಹೋಗಿ ಅಲ್ಲಿ ಪೂಜೆ - ಪ್ರಾರ್ಥನೆ ಮಾಡಿ, ಸಂಕಲ್ಪ ಮಾಡಿರಲೇ ಬೇಕು. ಅದು 2006ರಲ್ಲಿ ಕ್ರಿಯಾ ರೂಪಕ್ಕೆ ಬಂದಿತಲ್ಲ ಎಂದು ವಿಸ್ಮಯವಾಯಿತು; ಸಂಕಲ್ಪಗಳಿಗೆ ಸಾವಿಲ್ಲ ಎಂಬುದು ಖಚಿತವಾಯಿತು.

### ಕಲ್ಯಾಣ ಕಿರಣ ಓದುಗ ಅಭಿಮಾನಿಗಳಿಗೆ ವಿಶೇಷ ಸೂಚನೆ

ನಿಮ್ಮ ನೆಚ್ಚಿನವರಿಗೆ ಏನಾದರೂ ಕೊಡುಗೆಯನ್ನು ನೀಡಬೇಕು ಎಂದು ಎನಿಸಿದ್ದರೆ ನಿಮ್ಮ ಸಹಾಯಕ್ಕೆ ಕಲ್ಯಾಣ ಕಿರಣ ಮತ್ತು ಬಸವ ಕಿರಣ ಪತ್ರಿಕೆಗಳ ಸಿಬ್ಬಂದಿ ವರ್ಗ ಮುಂದಾಗಿದೆ. ನೀವು ಸೂಚಿಸುವ ಆತ್ಮೀಯರಿಗೆ, ನೀವು ತಿಳಿಸುವ ಅವಧಿಯವರೆಗೆ ಪತ್ರಿಕೆಗಳನ್ನು ಕಳಿಸುತ್ತಿದ್ದೇವೆ. ನಿಮ್ಮ ಆತ್ಮೀಯರಿಗೆ ನಿಮ್ಮ ಶುಭಾಶಯ ಪತ್ರದ ಮುಖೇನ ತಿಳಿಸುತ್ತೇವೆ.

ತ್ವರೆ ಮಾಡಿರಿ !!! ನಿಮ್ಮ ಹಾಗೂ ನಿಮ್ಮ ಆತ್ಮೀಯರ ಪೂರ್ಣ ವಿಳಾಸವನ್ನು ಹಾಗೂ ಚಂದಾ ಹಣವನ್ನು ನಮ್ಮ ಕಾರ್ಯಾಲಯಕ್ಕೆ ಕಳುಹಿಸಿರಿ.

What so ever may be cause of your suffering do not wound another



## ಬಸವ ನಾಣ್ಯದ ವಿಪರ್ಯಾಸ

(ಶ್ರೀ ಅರವಿಂದ ಜತ್ತಿಯವರ ಹಸಿ ಸುಳ್ಳು)

-ಮಾತಾಜಿ.

" ಮಳೆ ನಿಂತರೂ ಮರದ ಹನಿ ನಿಲ್ಲಲ್ಲ " ಎಂಬ ಗಾದೆಯ ಮಾತಿನಂತೆ ಬಸವ ನಾಣ್ಯದ ಪ್ರೇರಕರೆಂದು ಶ್ರೀ ಅರವಿಂದ ಜತ್ತಿ ಯವರು ಎಡಬಿಡದೆ ಸನ್ಮಾನ ಮಾಡಿಸಿಕೊಳ್ಳುತ್ತಿದ್ದಾರೆ . ಜನವರಿ 2005 ರಲ್ಲೇ ಶರಣ ಮೇಳದ ವೇದಿಕೆಯಿಂದ ಬಸವ ನಾಣ್ಯದ ಪ್ರಸ್ತಾಪವನ್ನು ನಾವು ಶ್ರೀ. ಎಂ.ವಿ. ರಾಜಶೇಖರನ್ ಮುಂದೆ ಇಟ್ಟು, ಅವರಿಂದ ಪ್ರಯತ್ನಿಸುವ ಭರವಸೆ ಪಡೆದುದು ನಿಜವಾದರೂ ಈ ಬಗ್ಗೆ ಎಲ್ಲೆಲ್ಲಿಯೂ ಪ್ರಸ್ತಾಪವಾಗದಂತೆ ಶ್ರೀ ಅರವಿಂದ ಜತ್ತಿಯವರು ಎಚ್ಚರಿಕೆ ವಹಿಸುತ್ತಿರುವುದು ಒಂದು ದೃಷ್ಟಿಯಿಂದ ಉಪಕಾರವೇ ಸರಿ. ಇಲ್ಲದಿದ್ದರೆ ಬಿಡುವು ಮಾಡಿಕೊಂಡು ಸನ್ಮಾನ ಮಾಡಿಸಿ ಕೊಳ್ಳಲು ಅಡ್ಡಾಡಲು ಸಮಯ ಒದಗಿಸಿಕೊಳ್ಳುವುದು ಬಹಳ ಕಷ್ಟಕರವಾಗುತ್ತಿತ್ತು.

ಫೆಬ್ರವರಿ 2005ರಲ್ಲಿ ಬಸವಣ್ಣನವರ ನೆನಪಿನ ನಾಣ್ಯದ ಪರಿಕಲ್ಪನೆ ಅವರಲ್ಲಿ ಮೂಡಿತಂತೆ. ಮಹಾಲಿಂಗೇಶ್ವರ ಅಥಣಿ ಅವರ ಪರಿಕಲ್ಪನೆಯನ್ನು ಕೇಂದ್ರ ಸಚಿವ ಎಂ.ವಿ. ರಾಜಶೇಖರನ್ ಅವರ ಗಮನಕ್ಕೆ ತರಲಾಯಿತಂತೆ. 2005ನೆಯ ಇಸವಿಯ ಜನವರಿ 13ರಂದು ಶರಣ ಮೇಳದ ಉದ್ಘಾಟನೆಯ ಗೋಷ್ಠಿಯ ನನ್ನ ಪ್ರಾಸ್ತಾವಿಕ ಭಾಷಣದಲ್ಲಿ ಬಸವ ನಾಣ್ಯ ಮಾಡಿಸುವ ಮತ್ತು ಕೂಡಲ ಸಂಗಮ ಹಾಗೂ ಬಸವ ಕಲ್ಯಾಣಕ್ಕೆ ರೇಲ್ವೆ ಲೈನ್ ಹೊಂದುವ ಪ್ರಸ್ತಾಪವನ್ನು ಮುಂದಿಡಲಾಯಿತು. ಪ್ರಯತ್ನಿಸುವುದಾಗಿ ಕೇಂದ್ರ ಸಚಿವ ಎಂ.ವಿ. ರಾಜಶೇಖರನ್ ಭರವಸೆ ಕೊಟ್ಟರು. ದಿ. 14-1-2005ರ ಪತ್ರಿಕೆಗಳಲ್ಲಿ ಈ ವಿಷಯ ಪ್ರಕಟವಾಯಿತು. ಸಹಸ್ರಾರು ಜನ ಸಾಕ್ಷಿಯಾಗಿಯೂ ಇದ್ದಾರೆ.

ಕೆಲವು ಮಾದರಿ ಮಾಡಿಸಿಕೊಂಡು ಒಂದು ದಿನ ಶ್ರೀ ಅರವಿಂದ ಜತ್ತಿ ಮತ್ತು ಶ್ರೀ ಡಾ|| ಹೆಚ್. ಚಂದ್ರಶೇಖರ್ ಆಗಮಿಸಿದರು.ಅದನ್ನು ನೋಡುತ್ತಲೇ ಕೇಳಿದೆ, ಹುಟ್ಟಿದ ವರ್ಷ ಲಿಂಗೈಕ್ಯ ವರ್ಷ ಕಾಣಿಸದಿದ್ದರೆ ಅದು ಅಸಂಬದ್ಧ; ಹೀಗೇಕೆ ಬರೆಸಿದ್ದೀರಿ ?

"ಇನ್ನೂ ಈ ಬಗ್ಗೆ ಒಮ್ಮತವಿಲ್ಲ, ಒಬ್ಬೊಬ್ಬರು ಒಂದು ರೀತಿ ಹೇಳುತ್ತಾರೆ." ಎಂದು ಅರವಿಂದ ಜತ್ತಿ ಹೇಳಿದರು. ಯಾವುದಾದರೂ ಒಂದು ನಿರ್ಧಾರಕ್ಕೆ ಬರಬೇಕು .ಚಿತ್ರದುರ್ಗ ಸ್ವಾಮಿಗಳು 9ನೆಯ ಶತಮಾನೋತ್ಸವ ಆಚರಿಸಿ ಪ್ರಚಾರ ತಗೊಳ್ಳಲು ಬಯಸಿದ್ದಾರೆ . ಹಿಂದೆ ಮೈಸೂರು ಸರ್ಕಾರದವರು ಅಷ್ಟ ಶತಮಾನೋತ್ಸವ ಆಚರಿಸಲು ಬಯಸಿ 1967 -68 ಆಯ್ಕೆ ಮಾಡಿದರು. ಆಗ ಜನನ ವರ್ಷ 1106 ಲಿಂಗೈಕ್ಯ ವರ್ಷ 1168 ಎಂದು ಊಹಿಸಿದರು. ಆದರೆ ಆ ಲೆಕ್ಕಾಚಾರ ಸರಿಯಲ್ಲ. ಧರ್ಮ ಗುರು ಬಸವಣ್ಣನವರ ಜೀವಿತಾವಧಿ ಸುಮಾರು 63 ವರ್ಷ ಎಂಬುದರಲ್ಲಿ ಒಮ್ಮತವಾಗಿದೆ. ರಾಕ್ಷಸ ನಾಮ ಸಂವತ್ಸರದಲ್ಲಿ ಕಲ್ಯಾಣ ಕ್ರಾಂತಿಯಾದುದು; ಅದು 1196 ರಲ್ಲಿ ಬರುತ್ತದೆ.ಬಿಜ್ಜಳನು 1196 ರವರೆಗೆ ಜೀವಂತವಿದ್ದುದು ಮತ್ತು ಆಂಧ್ರದ ಮಲ್ಲಿಕಾರ್ಜುನ ಪಂಡಿತಾರಾಧ್ಯರು 1197ರಲ್ಲಿ ಲಿಂಗೈಕ್ಯರಾದುದು ಕಾಲವನ್ನು ನಿರ್ಣಯಿಸಲು ನೆರವಾಗಿದೆ. ಇದನ್ನೆಲ್ಲ ಸವಿವರವಾಗಿ ನಾನು ಬಸವಣ್ಣನವರ ಜೀವನದ ಕಾಲ ನಿರ್ಣಯ ಎಂಬ ಪುಸ್ತಕದಲ್ಲಿ ಬರೆದಿದ್ದೇನೆ. "ಎಂದು ಹೇಳಿದೆ. ಆಗ ಶ್ರೀ ಅರವಿಂದ ಜತ್ತಿಯವರು, "ಆ ಪುಸ್ತಕವನ್ನು ನಾವು ನೋಡಿದ್ದೇವೆ. ಅದರ ಬಗ್ಗೆ ಒಂದು ವಿಚಾರ ಸಂಕಿರಣ ಸಹ ಮಾಡಿದೆವು ಡಾ|| ಎಂ.ಎಂ. ಕಲಬುರ್ಗಿಯವರದೂ ಇದೇ ವಿಚಾರ ." ಎಂದರು "ಹಾಗಿದ್ದ ಮೇಲೆ ಇನ್ನೇಕೆ ಹೊಯ್ದಾಟ ? ನಿರ್ದಿಷ್ಟ ಇಸವಿ ಕೊಡಿರಿ .ಎಂದು ನಾನು ಹೇಳಿದೆ.ಧರ್ಮಗುರು ಬಸವಣ್ಣನವರ ಜೀವಿತಾವಧಿ 1134 ರಿಂದ 1196 ಎಂದು ನಮ್ಮ ಸ್ಪಷ್ಟ ಅಭಿಪ್ರಾಯ ."

"Every successfull man must have behind him some where Tremendous sincerity and that is the cause of success in his Life"

ಇಷ್ಟು ಚರ್ಚೆಯಾದ ನಂತರವೂ ಅರವಿಂದ ಜತ್ತಿಯವರು ಇಸವಿಯನ್ನು ಕೊಡದೆ ಅಪಚಾರವೆಸಗಿದ್ದಾರೆ. ಈ ಲೋಪವನ್ನು ಎಲ್ಲರೂ ಮಾತಾಡಿಕೊಳ್ಳಲು ,ಟೀಕಿಸಲು ಅವಕಾಶ ಮಾಡಿಕೊಟ್ಟಿದ್ದಾರೆ .ಜನರು ಟೀಕಿಸಲು ತೊಡಗಿದ ಮೇಲೆ ಈ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಭಾರತೀಯ ನಾಣ್ಯಗಳ ಮುದ್ರಣಾಲಯದ ಪ್ರಧಾನ ವ್ಯವಸ್ಥಾಪಕ ಎಸ್.ಕೆ. ಚೌಧರಿ ಅವರಿಗೆ ಬಸವ ಸಮಿತಿ ಪತ್ರ ಬರೆದಿತ್ತು ಎಂದು ಸುಳ್ಳು ಬೇರೆ ಹೇಳಲು ಅರವಿಂದ ಜತ್ತಿ ತೊಡಗಿದ್ದಾರೆ . ದೆಹಲಿಯಲ್ಲೇ ಎಲ್ಲವೂ ನಿರ್ಧಾರಗೊಂಡು ಕೇವಲ ನಾಣ್ಯ ಮುದ್ರಣ ಕಾರ್ಯ ಮಾತ್ರ ಟಂಕಸಾಲೆಯಲ್ಲಿ ನಡೆಯುತ್ತದೆ. ಇವರಿಗೆ ಪತ್ರ ಬರೆದು ಏನೂ ಪ್ರಯೋಜನವಿಲ್ಲ . ಡಿಸೈನ್ ಸಿದ್ಧಪಡಿಸಿದಾಗಲೇ ಈ ಲೋಪವನ್ನು ನಾನು ಸ್ಪಷ್ಟವಾಗಿ ಹೇಳಿದರೂ ,ಲಕ್ಷ್ಯಕ್ಕೆ ತಂದು ಕೊಳ್ಳದೆ ತಾವು ಸಿದ್ಧಪಡಿಸಿದ್ದನ್ನೇ ಕಳಿಸಿಕೊಟ್ಟಿದ್ದಾರೆ . ನಾವು ಇದೆಲ್ಲ ಸರಿಪಡಿಸಿ ಹಲವಾರು ಮಾದರಿಗಳನ್ನು ಅರ್ಥಮಂತ್ರಿಗಳ ಕಾರ್ಯಾಲಯಕ್ಕೆ ಕೊಟ್ಟಿದ್ದೆವು. ಆದರೆ ರಾಜಶೇಖರನ್ ಅವರ ರಾಜಕೀಯ ಪ್ರಭಾವದಿಂದ ಬಸವ ಸಮಿತಿಯವರ ಮಾದರಿ ಸ್ವೀಕೃತವಾಗಿರಬಹುದು.ಅಥವಾ ಸಂಬಂಧ ಪಟ್ಟವರಿಗೆ ನಾವು ತಯಾರಿಸಿ ಕೊಟ್ಟ ಮಾದರಿ ಗಮನಕ್ಕೆ ಬಂದಿರಲಿಕ್ಕಿಲ್ಲ ಅಥವಾ ಕೆಲವರು ಸಂಬಂಧಿಸಿದ ಪ್ರಮುಖರ ಗಮನಕ್ಕೆ ಬರಗೊಟ್ಟಿಲ್ಲದಿರಬಹುದು.

ಅರವಿಂದ ಜತ್ತಿಯವರು ಮತ್ತು ಬಸವ ಸಮಿತಿಯವರು ತಾವು ಮಾಡಿದ , ಉದ್ದೇಶ ಪೂರ್ವಕ ಲೋಪದಿಂದ ಬಸವೇಶ್ವರರ ನಾಣ್ಯ ಅಪೂರ್ಣ ಎಂಬ ಅಪಕೀರ್ತಿಗೆ ಪಾತ್ರವಾಗುವಂತಾಯಿತು. ಈ ಲೋಪವನ್ನು ಮುಚ್ಚಿಕೊಳ್ಳಲು ಈಗ ಯಾರ ಮೇಲೋ ತಪ್ಪು ಹೊರಿಸುವ ಸುಳ್ಳು ಬೇರೆ ಅರವಿಂದ ಜತ್ತಿಯವರು ಹೇಳತೊಡಗಿರುವುದು ಖಂಡನಾರ್ಹ. ತುಂಬಾ ಆಶ್ಚರ್ಯಕರ ಸಂಗತಿ ಎಂದರೆ ನಾಣ್ಯದ ವಿನ್ಯಾಸ ರೂಪಿಸುವುದರಲ್ಲಿ ಹಿರಿಯ ಸಾಹಿತಿಗಳಾದ ಶ್ರೀ ಚನ್ನವೀರ ಕಣವಿ ಮತ್ತು ಶ್ರೀ ಎಂ.ಎಂ.ಕಲಬುರ್ಗಿ ಸಹ ಭಾಗಿಗಳಾಗಿದ್ದು ಅವರಿಗೂ ಇಸವಿ ಹಾಕಬೇಕೆಂಬ ವಿಚಾರ ಹೊಳೆಯದಿರುವುದು ಆಶ್ಚರ್ಯಕರ ಮತ್ತು ವಿಷಾದದ ಸಂಗತಿ .

---

### ಕಲ್ಯಾಣ ಕಿರಣದ ಆಜೀವ ಸದಸ್ಯರಲ್ಲಿ ಹೃತ್ಪೂರ್ವಕ ವಿನಂತಿ

ಕಲ್ಯಾಣ ಕಿರಣವು 1970ರಲ್ಲಿ ಪ್ರಾರಂಭವಾದಾಗ ವಾರ್ಷಿಕ ಚಂದಾ 10ರೂ, ಆಜೀವ ಸದಸ್ಯತ್ವ 100 ರೂ ಇದ್ದಿತು. 36 ವರ್ಷಗಳ ಕಾಲ ನಿರಂತರವಾಗಿ ಕಲ್ಯಾಣ ಕಿರಣವನ್ನು ಕಳಿಸುತ್ತಿರುವುದು ಯಾರಿಗಾದರೂ ಹಾಸ್ಯಾಸ್ಪದ ಎನಿಸುವುದು. ಆದರೆ ಇದನ್ನು ಜ್ಞಾನ ದಾಸೋಹದ ಒಂದು ಅಂಗವೆಂದು ನಾವು ಕಳಿಸುತ್ತಿದ್ದೇವಾದರೂ, ನಿರಂತರವಾಗಿ ಕಲ್ಯಾಣ ಕಿರಣವನ್ನು ಪಡೆಯುತ್ತಿರುವ ಆಜೀವ ಸದಸ್ಯರು ತಮ್ಮ ಕರ್ತವ್ಯದ ಬಗ್ಗೆ ಆಲೋಚಿಸಬೇಕು. ಈಗ ಆಜೀವ ಸದಸ್ಯತ್ವ 600 ರೂ ಇದೆ. ಆದ್ದರಿಂದ ತಾವು ಮೊದಲು ಕಟ್ಟಿದ್ದ ಹಣಕ್ಕಿಂತ ಹೆಚ್ಚಿನ ಹಣವನ್ನು ಕಲ್ಯಾಣ ಕಿರಣದ ಆಜೀವ ಸದಸ್ಯತ್ವಕ್ಕೆ ಕಟ್ಟಬೇಕೆಂದು ವಿನಂತಿಸುತ್ತೇವೆ. ಒಂದು ವೇಳೆ ಪತ್ರಿಕೆ ಬೇಡವಾದರೆ ತಮ್ಮ ಕ್ರಮ ಸಂಖ್ಯೆ ತಿಳಿಸಿ ರದ್ದು ಮಾಡಲು ಸೂಚನೆ ನೀಡಿರಿ.

- ಸಂಪಾದಕರು, ಕಲ್ಯಾಣ ಕಿರಣ

### ಕಲ್ಯಾಣ ಕಿರಣ ವಾರ್ಷಿಕ ಸದಸ್ಯರಲ್ಲಿ ಮನವಿ

ತಮ್ಮ ವಿಳಾಸ ಅಂಟಿಸಿರುವ ಭಾಗವನ್ನು ಗಮನಿಸಿ ಮೇಲೆ ತಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿದೆ. ಅದನ್ನು ನೋಡಿ ತಮ್ಮ ಚಂದಾ ಅವಧಿ ಮುಗಿಯುವುದಕ್ಕಿಂತ ಮುಂಚೆ ನವೀಕರಣಕ್ಕಾಗಿ ಚಂದಾ ಹಣವನ್ನು ಮನಿಯಾರ್ಡರ್ ಮುಖಾಂತರವಾಗಿ ಕಳುಹಿಸಿಕೊಡಬೇಕಾಗಿ ವಿನಂತಿ.



# ಕಾಯಕ

-ಮಾತೆ ಕಸ್ತೂರಿದೇವಿ

ಕಾಯಕವ ಕಲಿಸುದಕೆ ನಾಯಕನು ಬಸವಯ್ಯ
ಜೀಯ ಹೊಸ ಮತಕೆ ಶಿವ ಭಕ್ತಿ । ಸಾರುದಕೆ
ರಾಯ ಜೀವನದ ಹೊಸನುಡಿಗೆ ॥

ಬಸವ ಭಕ್ತಿಯ ಬೀಜ । ಬಸವ ಮುಕ್ತಿಯ ತೇಜ
ಬಸವ ಕಾಯಕದ ಗುರು ಬೀಜ । ಶಿವೆ ಮತಕೆ
ಬಸವ ಓಂಕಾರ ಶಿವನಾಮ ॥

-ಜನಪದ ಗೀತೆ

ಕನ್ನಡ ನಾಡಿನ ಜನಪದ ಸಾಹಿತ್ಯ ಮತ್ತು ವಚನ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವ , ಬಸವ ಧರ್ಮದ ಇತಿಹಾಸದಲ್ಲಿ ತೊಳಗಿ ಬೆಳಗಿದ, ಲಿಂಗಾಯತ ಸಮಾಜದ ಗರ್ಭದಲ್ಲಿ ಹುದುಗಿಕೊಂಡು ಜೀವನದ ಸಾಮಾಜಿಕ ,ಆರ್ಥಿಕ ,ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳನ್ನು ಶಕ್ತಿ ಶಾಲಿಯಾಗಿ , ಶ್ರೀಮಂತವಾಗಿ ಬಿಂಬಿಸುತ್ತಿರುವ ತತ್ವಗಳ ಬಗ್ಗೆ ಚಿಂತಿಸಿದಾಗ , ಮನನ ಮಾಡಿದಾಗ , ಮತ್ತು ಅನುಷ್ಠಾನಕ್ಕೆ ತಂದಾಗಲೆಲ್ಲ ಈ ಅವಳಿ ಮಂತ್ರಗಳ ಪಾವಿತ್ರ್ಯತೆ ಸರ್ವಾಂಗವನ್ನು ವ್ಯಾಪಿಸುತ್ತದೆ! ವಚನ ಸಾಹಿತ್ಯ ಸೃಷ್ಟಿಯ ಸುವರ್ಣ ಕಾಲವಾಗಿದ್ದ ಹನ್ನೆರಡನೆಯ ಶತಮಾನದಲ್ಲಿ ಈ ತತ್ವಗಳಿಗೆ ಜೀವ ತುಂಬಿ , ಸಮಾಜದಲ್ಲಿ ಅಳವಡಿಸಿ, ತಮ್ಮ ಜೀವಿತ ಕಾಲದಲ್ಲಿಯೇ ಯಶಸ್ಸನ್ನು ಕಂಡು, ಬೇಡುವವರಿಲ್ಲದ ಎಲ್ಲರೂ ನೀಡುವವರೇ ತುಂಬಿದ್ದ ಕಲ್ಯಾಣ ರಾಜ್ಯವನ್ನು ಕಟ್ಟಿ ತೋರಿಸಿದ ನೇತಾರರು ಗುರು ಬಸವಣ್ಣನವರು ಎಂದು ಜನಪದರು ಗುರುತಿಸಿ ಘಂಟಾ ಘೋಷವಾಗಿ ಹೃದಯ ತುಂಬಿ ಹಾಡುತ್ತಿದ್ದರಲ್ಲದೆ; ಕೊಂಡಾಡುತ್ತಿದ್ದರು.

ಸಮಾಜ ಸುಧಾರಕರೂ, ರಾಷ್ಟ್ರ ನಿರ್ಮಾಪಕರೂ , ಧಾರ್ಮಿಕ ನೇತಾರರೂ ಆಗಿದ್ದ ಗುರು ಬಸವಣ್ಣನವರು ಕೇವಲ ಕಾಯಕ ಸಿದ್ಧಾಂತವನ್ನು ಬೋಧಿಸಿ ಸುಮ್ಮನಾದರೆ? ಇಲ್ಲ. ಚಿನ್ನದ ಹೂವಿಗೆ ಪರಿಮಳ ಬೆರೆತಂತೆ ಕಾಯಕದೊಂದಿಗೆ ಭಕ್ತಿಯನ್ನು ಬೆರೆಸಿ ಅದರ ಮಹತ್ವವನ್ನು ಪ್ರಚಾರ ಮಾಡಿದರು. ತತ್ಪರಿಣಾಮವಾಗಿ <u>ಕಾಯಕ</u> ಎಂಬ ಹೊಸ ಶಬ್ದ, ಹೊಸ ಮಾತು ಹುಟ್ಟಿತು. ಈ ಹೊಸ ನುಡಿಗೆ ಮಾರುಹೋದ ಜನ ತಮ್ಮ ಜೀವನದಲ್ಲೂ ಅಳವಡಿಸಿಕೊಂಡು ಸಂತೃಪ್ತಿ, ಸಂವೃದ್ಧಿ, ಸುವಿಧಾನದಿಂದ ಕೂಡಿದ ನೆಮ್ಮದಿಯ ಬಾಳನ್ನು ಅನುಭವಿಸಿದರು.

ಜನಪದ ಕವಿಗಳು ಮಾತ್ರವಲ್ಲ, ಸಮಕಾಲೀನ ಶರಣರು , ವಚನಕಾರರು ಸಹ ಕಾಯಕ ಸಿದ್ಧಾಂತದ ಮೂಲ ಕರ್ತೃ ಗುರು ಬಸವಣ್ಣನವರೇ ಎಂಬುದನ್ನು ದೃಢವಾಗಿ ಪ್ರತಿಪಾದಿಸಿರುವ ವಚನಗಳನ್ನು ಈಗ ನೋಡೋಣ. ವಿವಿಧ ವೇಷ ಭೂಷಣ ಧರಿಸಿ ಜನರಿಗೆ ಮನರಂಜನೆಯ ಮೂಲಕ ತತ್ವ ಬೋಧಿಸುತ್ತಿದ್ದು ,ತನ್ಮೂಲಕ ಜನಮನದ ಅಜ್ಞಾನ ,ಆತಂಕ ,ಚಿಂತೆ ,ಒತ್ತಡಗಳನ್ನು ದೂರ ಮಾಡುತ್ತಿದ್ದ ಬಹುರೂಪಿ ಚೌಡಯ್ಯನವರು ತಮ್ಮ ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ.

------------------ ಬಸವಣ್ಣನು ಎನ್ನ ಬಹುರೂಪಕ್ಕೆ ಸೂತ್ರಧಾರಿಯಾದನು
-------------------ರೇಕಣ್ಣ ಪ್ರಿಯ ನಾಗಿನಾಥ

ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲಾ!

ವ್ಯಕ್ತಿ, ಸಮಾಜದ ಸರ್ವಾಂಗೀಣ ಉದ್ಧಾರದ ಬಗ್ಗೆ ಚಿಂತಿಸಿ ಪರಿಹಾರ ಕಂಡು ಹಿಡಿದು, ಪ್ರಾಯೋಗಿಕ ರೂಪಕ್ಕೆ ತಂದು ತನ್ಮೂಲಕ ಆತ್ಮ- ಲೋಕ ಕಲ್ಯಾಣವೆರಡನ್ನೂ ಗೈಯಲು ಶ್ರಮಿಸುತ್ತಿದ್ದ , ವಿಶ್ವ ವಿನೂತನವಾದ <u>ಅನುಭವ ಮಂಟಪ</u> ಎಂಬ ಬಸವ ಗುರು ಸಂಸ್ಥಾಪಿತ

ಸಂಸ್ಥೆಯಲ್ಲಿ ಸ್ವಾಗತಕಾರರಾಗಿ ಸೇವೆ ಸಲ್ಲಿಸುತ್ತಿದ್ದ ಉಗ್ಘಡಿಸುವ ಕಾಯಕದ ಶರಣ .ಬಿಬ್ಬಿದೇವಯ್ಯನವರು ಹೇಳುತ್ತಾರೆ:-

---------------ಎನಗೆ ಕೊಟ್ಟ ಕಾಯಕ
ಕೂಡಲ ಸಂಗಮದೇವರಲ್ಲಿ ಬಸವಣ್ಣ.......ಎಂದು

ಬೊಕ್ಕಸ ( ಕೋಶಾಗಾರ ) ದ ಕಾಯಕ ಮಾಡುತ್ತಿದ್ದ ಶರಣ ಬೊಕ್ಕಸದ ಚಿಕ್ಕಣ್ಣನವರು ಗುರು ಬಸವಣ್ಣನವರನ್ನು ಸ್ತುತಿಸಿರುವುದು ಹೀಗೆ:

ಎಲ್ಲರ ಪರಿಯಂತಲ್ಲ ಎನ್ನ ಊಳಿಗ
ಬಸವಣ್ಣ, ಚನ್ನ ಬಸವಣ್ಣ ಕೊಟ್ಟ ಕಾಯಕ

ಬಾಚಿ (ಬಡಗಿ) ಕಾಯಕ ಮಾಡುತ್ತಾ ಜೀವನ ನಿರ್ವಹಣೆ ಮಾಡುತ್ತಿದ್ದ ಬಾಚಿ ಕಾಯಕದ ಬಸವಣ್ಣ ಎಂಬ ಶರಣರು ತಮ್ಮ ವಚನದಲ್ಲಿ ಸದ್ಭಕ್ತರ ಸಂಗದಲ್ಲಿ, ಆಶ್ರಯದಲ್ಲಿ ಕಾಯಕ ನಿರತರಾದರೆ ನುಡಿಮುತ್ತುಗಳಿಗೆ ಮತ್ತು ಲಿಂಗಾನುಭೂತಿಗೆ ಕೊರತೆಯಿಲ್ಲ ಎಂದು ತಮ್ಮ ಸ್ವಾನುಭವವನ್ನು ಇಲ್ಲಿ ಬಿತ್ತರಿಸಿದ್ದಾರೆ.

ಭಾಷೆಗೆ ಊಣಯವಿಲ್ಲದ ಸದ್ಭಕ್ತರು ಆಶ್ರಯಕ್ಕೆ
ನಿಜನಿವಾಸವ ಮಾಡುವ ಕಾಯಕ
ಈ ಗುಣ ಬಾಚಿಯ ಬಸವಣ್ಣನ ನೇಮ
ಇದು ಸಂಗನ ಬಸವಣ್ಣ ಕೊಟ್ಟ ಕಾಯಕದಂಗ

ಹೀಗೆ ಶ್ರಮಿಕವರ್ಗ ಕಾಯಕ ಯೋಗಿ ಗುರು ಬಸವಣ್ಣನವರನ್ನು ಜಗತ್ತಿಗೆ ಪರಿಚಯಿಸುವ ಮೂಲಕ ,ತಮ್ಮ ಹೃದಯದಲ್ಲಿಟ್ಟುಕೊಂಡು ,ಕೊಂಡಾಡುತ್ತಿದ್ದಾರೆ; ಕೃತಜ್ಞತೆ ಸೂಸುತ್ತಿದ್ದಾರೆ. ಬನ್ನಿ ನಾವೂ ಅವರೊಂದಿಗೆ ದನಿಗೂಡಿಸೋಣ

ಉತ್ತಿ ಬಿತ್ತುವ ಮಂತ್ರ। ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವ ಮಂತ್ರ ನಿನ್ಹೆಸರು। ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ॥

ಸಮಾಜದ ಆಂತರಿಕ ಮತ್ತು ಬಹಿರಂಗದ ಶುದ್ಧೀಕರಣಕ್ಕೆ ಅತಿ ಅವಶ್ಯಕವೆಂದು ಪಂಚಾಚಾರಗಳನ್ನು ಬಸವಾದಿ ಪ್ರಮಥರು ಪ್ರತಿಪಾದಿಸಿದರು.ಅದರಂತೆ ದೇವರು ಒಬ್ಬನೇ ಪರಮೋನ್ನತ ಶಕ್ತಿ ಎಂದು ನಂಬಿ ಅನ್ಯ ಕಾಕು ಪೋಕು ದೈವಂಗಳಿಗೆ ಎರಗದಿರುವುದೇ ಲಿಂಗಾಚಾರ ಎಂದು ಕರೆದರು. ಎರಡನೆಯದಾದ ಸದಾಚಾರ ಅಂದರೆ ಸತ್ಯ ಶುದ್ಧ ಕಾಯಕದಿಂದ ಧನವನ್ನು ಸಂಪಾದಿಸಿ ಗುರು ಲಿಂಗ ಜಂಗಮಕ್ಕೆ ದಾಸೋಹದ ಮೂಲಕ ಸವೆಸುವುದು. ಮೂರನೆಯದು ಭಕ್ತರಲ್ಲಿ ಜಾತಿ ವರ್ಗ ವರ್ಣವನ್ನರಸದೆ ಅವರೊಕ್ಕುದ ಕೊಂಬುದೇ ಶಿವಾಚಾರ. ಸಮಯಾಚಾರದ ನಿಂದೆ ಕೇಳದಿಹುದೇ ಗಣಾಚಾರ. ಕೊನೆಯದು ಸಮಷ್ಟಿಯನ್ನು ಹಿರಿದಾಗಿ ಭಾವಿಸಿ, ತಾನೇ ಕಿರಿಯನಾಗಿ ಸೇವೆ ಸಲ್ಲಿಸುವ ಕಿಂಕರ ಭಾವಕ್ಕೆ ಭೃತ್ಯಾಚಾರ ಎಂದು ಕರೆದು ಸಮಾಜಕ್ಕೆ ಪಂಚಾಚಾರಗಳನ್ನು ಅಳವಡಿಸಿದರು.

ಅದರಂತೆ ಲಿಂಗಾಯತ ಸಮಾಜದಲ್ಲಿ ಅನುಷ್ಠಾನ ಯೋಗ್ಯವಾದ, ಪಂಚಾಚಾರಗಳಲ್ಲಿ ಎರಡನೆಯದಾದ ಸದಾಚಾರದಲ್ಲಿ ಕಾಯಕ ಮತ್ತು ದಾಸೋಹ ಎಂಬ ಎರಡು ಅಮೂಲ್ಯ ರತ್ನಗಳು ಒಂದೇ ನಾಣ್ಯದ ಎರಡು ಮುಖಗಳಂತೆ ಅಡಗಿವೆ ಎಂಬುದನ್ನು ಮೊಟ್ಟ ಮೊದಲ ಬಾರಿಗೆ ಗುರುತಿಸಿ, ಬೆಳಕಿಗೆ ತಂದು ಪ್ರಚಾರ ಮಾಡಿದವರು ಕೂಡಲ ಸಂಗಮ ಸುಕ್ಷೇತ್ರದ ಬಸವ ಧರ್ಮ ಪೀಠದ ಪ್ರವಚನ ಪಿತಾಮಹರೆನಿಸಿದ್ದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ;ಅದನ್ನು ಪೂಜ್ಯರ ವಾಣಿಯಿಂದಲೇ ಆಲಿಸೋಣ.

ಸದಾಚಾರದ ಲಕ್ಷ್ಯಾರ್ಥವೆಂದರೆ ಕಾಯಕ. ಏಕೆಂದರೆ ಸತ್ ಅಂದರೆ Existence-ಅಸ್ತಿತ್ವ; ಸದಾಚಾರವೆಂದರೆ ಯಾವ ಕ್ರಿಯೆಯಿಂದ ಮಾನವನು ತನ್ನ ಅಸ್ತಿತ್ವವನ್ನು ಸಮ್ಯಕ್‌ಮಾರ್ಗದಲ್ಲಿ



ಕಾಪಾಡಿಕೊಳ್ಳಬಲ್ಲನೋ ಅಂಥ ಸತ್ಕ್ರಿಯೆಯೇ ಕಾಯಕ. ಚನ್ನಾಗಿ ಬಾಳಿ -ಬದುಕಲಿಕ್ಕೆ ಬೇಕಾದ ಜೀವನಾವಶ್ಯಕ ವಸ್ತುಗಳಾದ ಅನ್ನ -ಅರಿವೆ , ಆಶ್ರಯ -ಔಷಧ - ಅರಿವು ಗಳೆಂಬ ಶಿವ ಪಂಚಾಯತನಗಳನ್ನು ಮಾನವನು ಯಾವ ಸತ್ಕ್ರಿಯೆಗಳಿಂದ ಸಂಪಾದಿಸಿಕೊಳ್ಳಬಲ್ಲವನೋ ಅಂಥ ಸತ್ಕ್ರಿಯೆಯೇ ಸದಾಚಾರ. ಇದುವೇ ಕಾಯಕ. ಈ ಕಾಯಕದಲ್ಲಿ ಸುಖ -ಶಾಂತಿ-ಪ್ರಗತಿ-ಸಂತೃಪ್ತಿ ಸುಯಿಧಾನಗಳ ಸಾರ ಸರ್ವಸ್ವವಾದ ಕೈಲಾಸವಿದೆ. ಆದ್ದರಿಂದ ಶರಣರು 'ಕಾಯಕವೇ ಕೈಲಾಸ' ಎಂದು ಘೋಷಿಸಿದ್ದಾರೆ.

ಕಾಯಕ ಶಬ್ದವು ವಚನ ಶಾಸ್ತ್ರ ಪ್ರಕ್ರಿಯೆಯ ಅರ್ಥಪೂರಿತವಾದ ಪರಮ ಪವಿತ್ರವಾದ ಪದವು. ಮೈ ಮಣಿಸಿ , ಮನ ತಣಿಸಿ , ಹೃದಯವನ್ನು ಹದಗೊಳಿಸಿ , ದಾಸೋಹ ಭಾವನೆಯಿಂದ ಜೀವನ ನಿರ್ವಹಣೆಗಾಗಿ ಮಾಡುವ ಶೀಲಯುತ ಮಾಟವೇ ಕಾಯಕ ಎಂದು ವ್ಯಾಖ್ಯಾನಿಸಬಹುದು.

ಅಪೂರ್ವ ವಾಗ್ಮಿಗಳೂ , ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುಗಳು ಎಂದು ಖ್ಯಾತಿವೆತ್ತಿರುವ, ವಚನ ಸಾಹಿತ್ಯವನ್ನು ಉಸಿರಾಗಿ ಮಾಡಿಕೊಂಡಿರುವ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ತಾಯಿಯವರು ಹೀಗೆ ಹೇಳುತ್ತಾರೆ: ``ಬಸವ ಧರ್ಮದಲ್ಲಿ ಬರುವ ಕಾಯಕವು ಕೇವಲ ಶ್ರದ್ಧೆಯಿಂದ ಮಾಡುವ ಕೆಲಸ ಮಾತ್ರವಲ್ಲ. ಅದಕ್ಕೆ ಧಾರ್ಮಿಕ, ಸಾಮಾಜಿಕ,ಆರ್ಥಿಕ ಮುಖಗಳಿವೆ. ಕಾಯಕವೆಂದರೆ ಕೇವಲ ಶರೀರವನ್ನು ತೊಡಗಿಸಿ ಕಾಟಾಚಾರಕ್ಕೆ ಮಾಡುವ ಯಾಂತ್ರಿಕ ದುಡಿತವಲ್ಲ. ತಾನು ಮಾಡುವ ಕಾಯಕದಲ್ಲಿ ಸಂತೋಷ , ಸಂತೃಪ್ತಿಯನ್ನು ವ್ಯಕ್ತಿಯು ಪಡೆಯದಿದ್ದರೆ ಆಗ ಅದು ದುಡಿತವೇ ವಿನಾ ಕಾಯಕವೆನಿಸುವುದಿಲ್ಲ. ಮಾಡುವ ಕೆಲಸದಲ್ಲಿ ಶ್ರದ್ಧೆ, ನೀತಿವಂತಿಕೆ , ಕುಶಲತೆ ಮತ್ತು ದೈವೀ ಶರಣಾಗತಿ ಇದ್ದಾಗ ಮಾತ್ರ ಅದು ಕಾಯಕ ಎನಿಸಿಕೊಳ್ಳುತ್ತದೆ. ಕಾಯಕದಲ್ಲಿ ಶರೀರ ಶ್ರಮದೊಡನೆ ಆಧ್ಯಾತ್ಮಿಕ ಮೌಲ್ಯಗಳಿರಬೇಕು.ಶಾರೀರಿಕವಾಗಿ ಮಾಡುವ ಕೆಲಸ ಸಾಮಾನ್ಯ ಸುಖ, ಒಳ್ಳೆಯ ಕೆಲಸ ಮಾಡಿದಾಗ 'ಸಿಗುವ ಮಾನಸಿಕ' ಸಂತೋಷ, ಮತ್ತು ಆಧ್ಯಾತ್ಮಿಕ ಸಾಧನೆಯಿಂದ ಸಿಗುವ ಆನಂದ -ಇವು ಮೂರು 'ಕಾಯಕವೇ ಕೈಲಾಸ ಎಂಬ ತತ್ತ್ವದಲ್ಲಿ ಅಡಗಿದೆ ಎಂಬುದನ್ನು ಮನಗಾಣಬೇಕು ಎಂದು ತಮ್ಮ ಅನುಭವಾಮೃತವನ್ನು ಚಲ್ಲವರಿದಿದ್ದಾರೆ.

ಸರ್ವಜ್ಞ ಸಾಹಿತಿ ಎಂದೇ ಹೆಸರಾಗಿದ್ದ ಉತ್ತಂಗಿ ಚನ್ನಪ್ಪನವರು ಕಾಯಕ ತತ್ವದ ಬಗ್ಗೆ ಹೇಳಿರುವ ಉತ್ತುಂಗ ವಿಚಾರಗಳನ್ನು ಈಗ ನೋಡೋಣ . ಕಾಯಕ ಪದಕ್ಕೆ ಎರಡು ಮುಖ್ಯ ಅರ್ಥಗಳನ್ನು ಕೊಡಬಹುದು. ಒಂದನೆಯದಾಗಿ ಕಾಯ ಕಷ್ಟ ವೃತ್ತಿ, ಕೆಲಸ, ಉದ್ಯೋಗ ,ದುಡಿದುಣ್ಣುವುದು ಇತ್ಯಾದಿ. ಇಲ್ಲಿಯೂ ಸಹ ಲಿಂಗಾಯತ ಧರ್ಮ ತತ್ತ್ವದ ಪ್ರಕಾರ ಇನ್ನೂ ಸೂಕ್ಷ್ಮವಾದ ಅರ್ಥ ಕೊಡಬೇಕಾಗುತ್ತದೆ. ಕಾಯಕದಿಂದಲೇ ಜೀವಿಸಬೇಕೆಂಬ ಕಟ್ಟುನಿಟ್ಟಿದೆ. ಸಮಾಜಕ್ಕೆ ಅಹಿತವನ್ನುಂಟು ಮಾಡುವ ಅನ್ಯಾಯದ ಗಳಿಕೆಗೆ ಆಸ್ಪದವನೀಯುವ ಉದ್ಯೋಗವನ್ನು ಮಾಡಕೂಡದು. ಅಂತಹ ಉದ್ಯೋಗಕ್ಕೆ ಕಾಯಕ ಎಂದು ಕರೆಯುತ್ತಾರೆ . ಕುಳಿತುಣ್ಣುವವರಿಗೆ ಇಲ್ಲಿ ಆಸ್ಪದವಿಲ್ಲ .ಅನ್ಯಾಯ ಅನೀತಿಗಳಿಂದ ಸಮಾಜವನ್ನು ಸಂರಕ್ಷಿಸಿ ಚಿರಂತನ ಕಾಲ ಧರ್ಮವನ್ನು ಉಳಿಸಿಕೊಂಡು ಹೋಗುವ ಒಂದು ಉಪಾಯವನ್ನು ಲಿಂಗಾಯತ ಧರ್ಮದಲ್ಲಿ ಕಲ್ಪಿಸಿಕೊಡಲಾಗಿದೆ. ಈ ಉಪಾಯಕ್ಕೆ ಕಾಯಕ ಪದ್ಧತಿ ಎಂದು ಕರೆಯುತಾರೆ.

ಎರಡನೆಯ ಪ್ರಯೋಗದಲ್ಲಿ ಬರುವ ಕಾಯಕ ಶಬ್ದದ ಅರ್ಥವನ್ನು ಇಂದಿನ ಮನ್ವಂತರಕ್ಕೆ ಹೋಲಿಸಿದರೆ ಸತ್ಯಾಗ್ರಹ ಎಂದಾಗುತ್ತದೆ. ಸಮಾಜದಲ್ಲಿ ನಡೆಯುವ ಅನ್ಯಾಯದ ವಿರುದ್ಧ ಸತ್ಯಾಗ್ರಹವನ್ನು ಹೂಡಿ ಅದನ್ನು ತಡೆಯುವುದು ಎಂಬ ಅರ್ಥವನ್ನು ಹೇಳಬಹುದು . ಅಂದರೆ ಸಮಾಜದಲ್ಲಿರುವ ಆಲಸ್ಯತನ , ದುಶ್ಚಟಗಳನ್ನು ಬಿಡಿಸುವುದನ್ನೇ ಗುರಿಯಾಗಿಸಿಕೊಂಡು ಎಚ್ಚರಿಕೆ ಕಾಯಕ ,ಗಂಟೆ ಕಾಯಕ ,ಜಂಗಿನ ಕಾಯಕ , ತಕ್ಕೆಯ ಕಾಯಕ , ಮುಳ್ಳಾವಿಗೆಯ ಕಾಯಕ ,ಶಸ್ತ್ರದ ಕಾಯಕ ಮುಂತಾದ ವಿನೂತನ ಬಗೆಯ ಕಾಯಕಗಳು ಪರಿಣಾಮಕಾರಿಯಾಗಿಯೇ ಪ್ರಾಯೋಗಿಕ ರೂಪ ತಳೆದವು. ಬಸವಾದಿ ಪ್ರಮಥರು ಕಾಯಕ ಶಬ್ದಕ್ಕೆ ವಿಶೇಷಾರ್ಥವನ್ನು ತುಂಬಿ ಆಚಾರದಲ್ಲಿ

ತಂದರು. ಇದರ ಶ್ರೇಯಸ್ಸು ಬಸವಾದಿ ಪ್ರಮಥರಿಗೆ ಸಲ್ಲಬೇಕು.

ಒಟ್ಟಾಗಿ ಹೇಳುವುದಾದರೆ ವ್ಯಕ್ತಿ,ಸಮಾಜ ಮತ್ತು ರಾಷ್ಟ್ರಗಳ **ಕಲ್ಯಾಣವೇ** ಕಾಯಕವೇ ಕೈಲಾಸದ ಮೂಲ ಉದ್ದೇಶ ಎಂದು ಅರಿತೆವು. ಈಗ ಕಾಯಕ ದುಡಿಮೆ ಇಲ್ಲದ **ಸೋಮಾರಿತನ** ತುಂಬಿದ ವ್ಯಕ್ತಿ ಸಮಾಜ, ದೇಶಗಳ ಲಕ್ಷಣವನ್ನು ಕೆಲವು ವಚನಗಳಲ್ಲಿ ನೋಡೋಣ.

ಕಾಯಕ ಮಾಡದ ಮೈಸೊಂಬತನದಿಂದ ಬೇರೆ
ಕೂಳ ಗಳಿಸಲಾರದೆ ಹಸಿದಿಪ್ಪರಯ್ಯಾ!
ಒಡಲು ಸೀರೆಯ ಗಳಿಸಲಾರದೆ
ಕಚ್ಚುಟವ ಕಟ್ಟಿಕೊಂಡಿಪ್ಪರಯ್ಯಾ!
ಮೀಯಲು ಎಣ್ಣೆಯ ಗಳಿಸಲಾರದೆ
ಮಂಡೆಯು ಬೋಳಾಗಿಪ್ಪರಯ್ಯಾ!
ದಿಟದಿಂದ ಬಿಡಿಸಲರಿಯದೆ ಸಂಸಾರದ
ಶತೆಯನವಧರಿಸಿಕೊಂಡಿಪ್ಪವರಿಗೆ
ನಾನಂಜುವೆನಯ್ಯಾ ಸಕಲೇಶ್ವರ! - ಸಕಲೇಶ ಮಾದರಸ

ದೇವರು ,ಧರ್ಮ, ಅಧ್ಯಾತ್ಮದ ಹೆಸರಿನಲ್ಲಿ ಕೆಲವು ಭಕ್ತಿ ಯೋಗಿಗಳು ಕೇವಲ ಭಜನೆ ಮಾಡುತ್ತಾ,ಹಾಡುತ್ತಾ,ಉಪವಾಸ - ವನವಾಸ ಮಾಡುತ್ತ ತಾವು ಮತ್ತು ತಮ್ಮನ್ನು ನಂಬಿದ ಪತ್ನಿ - ಮಕ್ಕಳನ್ನು ಉಪವಾಸ ಒಣಗಿಸುವರು. ದುಡಿಮೆಯ ಬದುಕನ್ನು ಉಪಾಧಿಯೆಂದು ತಿಳಿದು ,ಕರ್ಮವೆಂದು ಭಾವಿಸುವರು. ಆದರೆ ಶರಣರು ಸತ್ಯ ಶುದ್ಧವಾದ ದುಡಿಮೆಯಿಂದಲೂ **ದೇವರನ್ನು** ಒಲಿಸಲು ಬರುತ್ತದೆ ಎಂದು ಸಾಧಿಸಿ ತೋರಿಸಿದರು.

ಮೇಲಿನ ವಚನವು ದುಡಿಯದೆ ಬದುಕುವ ಕೆಲವು ಜನರ ಲಕ್ಷಣವನ್ನು ನಮ್ಮ ಮುಂದೆ ಇರಿಸುತ್ತದೆ. ಇತರರನ್ನು ಸಾಕದಿದ್ದರೆ ಹೋಗಲಿ,ತನ್ನ ಸ್ವಂತ ಶರೀರವನ್ನು ಸದೃಢವಾಗಿ, ಆರೋಗ್ಯವಾಗಿ ಪೋಷಿಸಲಿಕ್ಕಾದರೂ ಅಗತ್ಯವಾದ ಆಹಾರವನ್ನು ಸಹ ಗಳಿಸಲಾರದೆ ಸೋಮಾರಿಯಾಗಿ ಬದುಕುವ ಪರಾವಲಂಬಿಗಳನ್ನು ಕಂಡು ಈ ವಚನಕ್ಕೆ ಆಶ್ಚರ್ಯವಾಗುತ್ತದೆ !ಅದು ಸೋಜಿಗ ಪಡುತ್ತಿದೆ. ಬುದ್ಧಿ ಭ್ರಮೆಯಿಂದಲೋ, ಅಂಗಾಂಗಗಳನ್ನು ಪ್ರದರ್ಶಿಸಬೇಕೆಂಬ ಹುಚ್ಚು ಹಂಬಲದಿಂದಲೋ ಅತಿ ಕಡಿಮೆ ವಸ್ತ್ರ ಧರಿಸುವವರನ್ನು ಕಂಡು ವಸ್ತ್ರ ಗಳಿಸಲಾರದ ಆಲಸಿಗಳು ಎಂದು ವ್ಯಾಖ್ಯಾನಿಸುತ್ತದೆ. ತಲೆ ತುಂಬ ನಿಸರ್ಗದತ್ತವಾದ ಸೊಂಪಾದ ಕೂದಲಿದ್ದರೂ,ಅದನ್ನು ಎಣ್ಣೆ ಹಚ್ಚಿ, ಸ್ನಾನ ಮಾಡಿ, ಅದಕ್ಕೆ ಪೋಷಿಸಿ ಆರೋಗ್ಯವಾಗಿಡಲು ಶ್ರಮಿಸಬೇಕಾಗುತ್ತದೆ ಎಂಬ ಕಾರಣಕ್ಕಾಗಿ ನಿರಂತರವಾಗಿ ತಲೆ ಬೋಳಿಸಿಕೊಂಡು ಓಡಾಡುವವರನ್ನು ಕಂಡು ಮೀಯಲು ಎಣ್ಣೆ ಗಳಿಸಲಾರದ ಮೈಗಳ್ಳರು ಎಂದು ಜರಿಯುತ್ತಿದೆ!

ಅಂಥವರ ಜೀವನ ಶೈಲಿಗೆ ಕಾರಣವೇನೇ ಇರಲಿ ಹುಟ್ಟು-ಸಾವಿನ ಭವ ಬಂಧನಕ್ಕೆ ಒಳಗಾಗುವ ಶರೀರದಂದುಗವನ್ನು ಸತ್ಯ -ಸದಾಚಾರ -ಸುಜ್ಞಾನ -ಸನ್ಮಾರ್ಗದಿಂದ ಬಿಡಿಸಲು ಶ್ರಮಿಸದೆ ಗೆಲ್ಲಲು ಅರಿಯದೆ ಏಕಕಾಲದಲ್ಲಿ ದೇವರನ್ನು -ಪ್ರಪಂಚವನ್ನು ತಸ್ನಾತ್ಮವನ್ನು ವಂಚಿಸುತ್ತ ಬದುಕುವ ಮೋಸಗಾರರನ್ನು ವಂಚಕರು ಎಂದು ಕರೆದು ಅಂಥವರಿಂದ **ದೂರವಿರಲು** ಹೇಳುತ್ತಿದ್ದ ಸಮಾಜದ ಒಳಹೊಕ್ಕು ನೋಡಿ ಅನಾಚಾರ -ಅಜ್ಞಾನ ಬಡತನದ **ಕಾರಣದಿಂದ** ಕಾಯವಿಕಾರದ ಒಂದು ಲಕ್ಷಣವಾದ ಮೈಗಳ್ಳ ನೆಪದಿಂದ ಸೊರಗಿದ ಶರೀರ ,ಬೋಳುತಲೆ ,ಅರೆಬತ್ತಲೆಯವರನ್ನು ತೋರಿಸಿ ನಂಬಬೇಡಿ ಎಂದು ಎಚ್ಚರಿಸುತ್ತಿದೆ. ಸೋಮಾರಿಗಳ ದುಃಸ್ಥಿತಿಯನ್ನು ಸರ್ವಜ್ಞ ಕವಿ ಹೀಗೆ ವರ್ಣಿಸುತ್ತಾರೆ.

ಕಾಯಕವು ಉಳ್ಳನಕ। ನಾಯಕನು ಎನಿಸಿಪ್ಪ
ಕಾಯಕವು ತೀರ್ದುಸಿ ಮರುದಿನವೆ । ಸುಡಗಾಡು
ನಾಯಕನು ಎನಿಸಿಪ್ಪ ಸರ್ವಜ್ಞ ॥



ಕಾಯಕದ ಭಕ್ತನ ಆಯತವ ನೋಡಿರೋ
ಕಾಯಕವ ಬಿಟ್ಟ ಮರುದಿನ। ಕಪ್ಪರದ
ಕಾಯಕವೆ ಬಕ್ಕು ಸರ್ವಜ್ಞ ॥

ಒಬ್ಬ ವ್ಯಕ್ತಿ ಎಲ್ಲಿಯವರೆಗೆ ಕಾಯಕ ನಿರತನಾಗಿರುತ್ತಾನೋ ಅಲ್ಲಿಯವರೆಗೆ ಅವನು ಎಲ್ಲರಿಂದಲೂ ಗೌರವಿಸಲ್ಪಡುತಾನೆ. ಆದರೆ ಕಾಯಕವನ್ನು ಬಿಟ್ಟು ಮನೆಯಲ್ಲಿ ಕುಳಿತ ದಿನದಿಂದಲೇ ಆ ವ್ಯಕ್ತಿಯನ್ನು ಎಲ್ಲರೂ ಕಡೆಗಾಣಿಸುತ್ತಾ ಅಂದಿನಿಂದ ಮನೆ, ಮಠ ಎಲ್ಲವೂ ಹಾಳಾಗಲು ,ಕರಗಲು ಪ್ರಾರಂಭವಾಗುತ್ತದೆ. ಶ್ರಮ ಜೀವಿಗಳು ವಾಸ ಮಾಡುವ ಮನೆ ,ನಾಡು, ಊರು ಎಲ್ಲವೂ ದಿನೇ ದಿನೇ ಸಂಪದಭಿವೃದ್ಧಿಯಿಂದ ತುಂಬಿ ತುಳುಕುತ್ತವೆ.

ಅದೇ ರೀತಿ ಕಾಯಕ ನಿಷ್ಠೆಯಿಂದ ದುಡಿಯುವವನು ಲಕ್ಷಾಧಿಪತಿಯಾಗಿ ಮೆರೆಯುತ್ತಾನೆ. ಕಾಯಕ ಮಾಡದೆ ದುಡಿಯದೆ , ಗಳಿಸಿದ ಸಂಪತ್ತೆಲ್ಲ ಕರಗಿ ಹೋಗಿ ಮಣ್ಣಿನ ಪಾತ್ರೆಯೊಂದಿಗೆ ಭಿಕ್ಷಾಧಿಪತಿಯಾಗಲು ಬಹಳ ದಿನ ಬೇಕಿಲ್ಲ ಎಂದು ಕಾಯಕ ಜೀವಿಗಳಿಗೂ ಸೋಮಾರಿಗಳಿಗೂ ಇರುವ ವ್ಯತ್ಯಾಸವನ್ನು ಸರ್ವಜ್ಞ ಕವಿ ಮೂರು ಸಾಲುಗಳಲ್ಲಿ ಮಾರ್ಮಿಕವಾಗಿ ಹೇಳಿದ್ದಾರೆ.

ಆದ್ದರಿಂದಲೇ ಕುಳಿತು ಉಣ್ಣುವವನಿಗೆ ಕುಡಿಕೆ ಹಣ ಸಾಲದು, ದುಡಿಯದೆ ಕೊಳೆಯುವುದಕ್ಕಿಂತ ದುಡಿದು ಸವೆಯುವುದು ಲೇಸು ಎಂಬ ಗಾದೆ ಮಾತುಗಳು ಹುಟ್ಟಿಕೊಂಡಿರುವುದು.ಹೇಡಿಯೂ, ಸೋಮಾರಿಯೂ ಆದವನನ್ನು ಹೆಂಡತಿ, ಮಕ್ಕಳೂ ದೂರ ಮಾಡುತ್ತಾರೆ. ಎನ್ನುತ್ತದೆ ಚಾಣಕ್ಯನ ಅರ್ಥ ನೀತಿ. ಕಾಯಕ ಯೋಗಿಯೂ ಶ್ರಮಜೀವಿಯೂ, ಶೂರನು ಆದವನು ಎಲ್ಲರ ಮನ್ನಣೆಗೂ ಪಾತ್ರನಾಗುತ್ತಾನೆ ಎಂಬುದು ನಿಸ್ಸಂದೇಹ.

ಇದುವರೆಗೂ ಕಾಯಕದ ಮಹತ್ವವನ್ನು, ಕಾಯಕದ ತತ್ತ್ವದ ಬಗ್ಗೆ ಶರಣರ ಅಭಿಮತವನ್ನು ಮತ್ತು ಮೈಗಳ್ಳರ ಜೀವನ ಶೈಲಿಯನ್ನು ನೋಡಿದ್ದಾಯಿತು. ''ಉದ್ಯೋಗಂ ಪುರುಷ ಲಕ್ಷಣಂ '' ಎಂಬ ಪುರುಷ ಪ್ರಧಾನ ವ್ಯವಸ್ಥೆಯನ್ನು ಹುಸಿಗೊಳಿಸಿ ''ಕಾಯಕವೇ ಕೈಲಾಸ '' ಎಂಬ ಸಮಾಜದ ಸರ್ವತೋಮುಖ ಪ್ರಗತಿಗೆ ಸಾಧನವಾದ ತತ್ತ್ವ ಸಮುಚ್ಚಯವನ್ನು ಕೊಟ್ಟ ಕೀರ್ತಿ ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದ ಗುರು ಬಸವಣ್ಣನವರಿಗೆ ಸಲ್ಲುತ್ತದೆ ಎಂದು ಸಮಸ್ತ ಕನ್ನಡಿಗರು ಭಾರತೀಯರು ಎದೆ ತಟ್ಟಿ ಹೇಳಿಕೊಳ್ಳಬೇಕು.

## ಶರಣ ಸಚ್ಚಿದಾನಂದ ಲಿಂಗಾಯತ್ ರಾಷ್ಟ್ರೀಯ ಬಸವ ದಳದ ರಾಜ್ಯ ಮಟ್ಟದ ಸಂಘಟನಾ ಕಾರ್ಯದರ್ಶಿ

ರಾಷ್ಟ್ರೀಯ ಬಸವ ದಳದ ಸಂಘಟನೆಗಳಿಗೆ ಪುನಶ್ಚೇತನ ಗೊಳಿಸುವ ಉದ್ದೇಶದಿಂದ ಹಾಗೂ ಸಂಘಟನೆ ಮಾಡಲು ಎಲ್ಲರಿಗೂ ಅವಕಾಶ ಕೊಡುವ ಉದ್ದೇಶದಿಂದ ಸಂಘಟನಾ ಕಾರ್ಯದರ್ಶಿಗಳನ್ನು ಬದಲಾಯಿಸಬೇಕು ಎಂದು ನಿರ್ಧರಿಸಿ, ಶರಣ. ಸಚ್ಚಿದಾನಂದ ಲಿಂಗಾಯತ್ ಅವರನ್ನು ಒಂದು ವರ್ಷದ ಅವಧಿಗೆ ರಾಜ್ಯ ಮಟ್ಟದ ಸಂಘಟನಾ ಕಾರ್ಯದರ್ಶಿ ಎಂದು ಆಯ್ಕೆ ಮಾಡಲಾಗಿದೆ.

ಆದ್ದರಿಂದ ರಾ.ಬ.ದಳಕ್ಕೆ ಸಂಬಂಧಿಸಿದಂತೆ ಪತ್ರ ವ್ಯವಹಾರ ಮಾಡುವವರು,ಸಲಹೆ -ಸೂಚನೆ ಪಡೆಯಬೇಕೆನ್ನುವವರು ಮತ್ತು ಹೊಸ ರಾ.ಬ.ದಳ ಸ್ಥಾಪನೆ ಮಾಡುವವರು , ಶರಣ. ಸಚ್ಚಿದಾನಂದ ಲಿಂಗಾಯತ್ ಸಂಘಟನಾ ಕಾರ್ಯದರ್ಶಿ , ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳ, ಬಸವ ಮಂಟಪ, 2035, 2ನೇ ಬ್ಲಾಕ್, 20ನೇ ಮುಖ್ಯರಸ್ತೆ ,ರಾಜಾಜಿ ನಗರ, ಬೆಂಗಳೂರು-560010,ದೂರವಾಣಿ 080-23325335, ಇಲ್ಲಿಗೆ ಪತ್ರ ವ್ಯವಹಾರ ಮಾಡಬೇಕು. ಕರ್ನಾಟಕ ರಾಜ್ಯ ರಾ.ಬ.ದಳ.ಅಧ್ಯಕ್ಷ ಶರಣ. ವೀರಣ್ಣ ಲಿಂಗಾಯತ್ ಇವರನ್ನಾಗಲೀ ಸಂಘಟನಾ ಕಾರ್ಯದರ್ಶಿ ಶರಣ. ಸಚ್ಚಿದಾನಂದ ಲಿಂಗಾಯತ್ ಅವರನ್ನಾಗಲಿ ಆಹ್ವಾನಿಸಿ ಉಪನ್ಯಾಸ ಏರ್ಪಡಿಸಿ, ಮಾರ್ಗದರ್ಶನ ಪಡೆಯಬೇಕೆಂದು ಸೂಚಿಸುತ್ತೇವೆ.

-ಬಸವ ಧರ್ಮ ಪೀಠ, ಕೂಡಲ ಸಂಗಮ.

1.ಶರಣ. ವೀರಣ್ಣ ಲಿಂಗಾಯತ (ಕೊರ್ಲಹಳ್ಳಿ)
ಅಧ್ಯಕ್ಷರು ,ಕರ್ನಾಟಕ ರಾಜ್ಯ ,ರಾ.ಬ.ದಳ
ಜಂಗಮ ದೂರವಾಣಿ :9448649014

2. ಶರಣ. ಸಚ್ಚಿದಾನಂದ ,ಲಿಂಗಾಯತ್
ಸಂಘಟನಾ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ,ರಾ.ಬ.ದಳ
ಜಂಗಮ ದೂರವಾಣಿ :9886694454

## ವಚನ ಸಾಹಿತ್ಯ ಬಿತ್ತಿದಲ್ಲಿ ವೀರಶೈವದ ಬೆಳೆ ಬರುವುದೆ..?

ಹೊನ್ನ ನೇಗಿಲಲುತ್ತು ಎಕ್ಕೆಯ ಬೀಜವ ಬಿತ್ತುವರೆ?
ಕರ್ಪೂರದ ಮರನ ಕಡಿದು ಕಳ್ಳಿಗೆ ಬೇಲಿಯನಿಕ್ಕುವರೆ?
ಶ್ರೀಗಂಧದ ಮರನ ಕಡಿದು ಬೇವಿಂಗೆ ಅಡೆಯನಿಕ್ಕುವರೆ?
.................................................... (ಬ.ವ.ದೀ.೫೯೨)

ಈ ವಚನದಲ್ಲಿ ಧರ್ಮಪಿತರು ವಿಶಿಷ್ಟವಾದ ಒಂದು ತತ್ತ್ವವನ್ನು ಹೇಳುತ್ತಾರೆ. ಮರದ ಅಥವಾ ಕಬ್ಬಿಣದ ನೇಗಿಲನ್ನು ಸಾಮಾನ್ಯವಾಗಿ ರೈತರು ಕೃಷಿಯಲ್ಲಿ ಬಳಸುತ್ತಾರೆ. ಇಂಥ ನೇಗಿಲನ್ನು ಉಪಯೋಗಿಸಿ ಜೀವನಾವಶ್ಯಕವಾದ ಬೀಜಗಳನ್ನು ಬಿತ್ತಿ ಬೆಳೆ ತೆಗೆಯುತ್ತಾರೆ. ಆದರೆ ಹೊನ್ನಿನ ನೇಗಿಲಿನಿಂದ ಉತ್ತು ಎಕ್ಕೆಯ ಬೀಜ ಬಿತ್ತಿದರೆ.....?! ಅಪಚಾರ, ಆತ್ಮವಂಚನೆ ಮಾಡಿಕೊಂಡಂತಾಗುತ್ತದೆ. ಎಕ್ಕೆಯ ಗಿಡ ಅಷ್ಟೊಂದು ಪ್ರಯೋಜನವಿಲ್ಲ ಬದಲಾಗಿ ಅದು ವಿಷಪೂರಿತವಾದ ಗಿಡ ಅದರ ರಸ ಮೈ ಮೇಲೆ ಬಿದ್ದರೆ ಹುಣ್ಣಾಗುತ್ತದೆ. ಅದು ಭೂಮಿಯ ಫಲವತ್ತತೆಯನ್ನು ಹಾಳು ಮಾಡುತ್ತದೆ. ಅದೇ ರೀತಿ ಇಂದು ಅನೇಕರು, ಅದರಲ್ಲೂ ಹೆಚ್ಚಿನ ಮಠಾಧೀಶರು, ಸ್ವಾಮಿಗಳು ಎನ್ನುವವರು ಅಧ್ಯಾತ್ಮ ಕೃಷಿಕರಾಗಿ, ಸಮಾಜವೆಂಬ ಹೊಲದಲ್ಲಿ ಅನೇಕ ಅನಿಷ್ಟಗಳೆಂಬ ಕಳೆಯನ್ನು ತೆಗೆದು, ಶೋಷಣೆ ಮುಕ್ತ ಸಮಾನತೆಯ ಧರ್ಮವಂತ ಸಮಾಜವನ್ನು ನಿರ್ಮಾಣ ಮಾಡಬೇಕಿತ್ತು. ಆದರೆ ಅವರು ಗುರು ಬಸವಣ್ಣನವರು ಎನ್ನುವ ಹೊನ್ನ ನೇಗಿಲನ್ನು ಉಪಯೋಗಿಸಿ, ವಚನಗಳು ಅವರ ತತ್ವಗಳು ಎನ್ನುವ ಮನುಕುಲಾವಶ್ಯಕ ಬೀಜಗಳನ್ನು ಬಿತ್ತದೆ, ಜಾತೀಯತೆ ಮೂಢನಂಬಿಕೆ,ಆಕ್ರಮಣಕಾರಿ ಮನೋಭಾವನೆಗಳಂತಹ ಸಮಾಜಕ್ಕೆ ಕಂಟಕ ಪ್ರಾಯವಾದ ಎಕ್ಕೆಯ ಬೀಜಗಳನ್ನು ಬಿತ್ತಿದರು. ಇಂದು ಸಮಾಜವನ್ನು ಒಡೆದು ಛಿದ್ರ ಛಿದ್ರ ಮಾಡುತ್ತಿದ್ದಾರೆ. ಮೇಲೆ ನೋಡಲಿಕ್ಕೆ ಬಸವ ತತ್ತ್ವ ಬೋಧಿಸುತ್ತಿದ್ದೇವೆ ಎನ್ನುತ್ತಾರೆ. ಇದೆಲ್ಲವನ್ನೂ ಅವರು ಗುರು ಬಸವಣ್ಣನವರು ಎನ್ನುವ ಹೊನ್ನ ನೇಗಿಲನ್ನು ಹಿಡಿದುಕೊಂಡು ಮಾಡುತ್ತಿರುವುದು ಅತ್ಯಂತ ವಿಪರ್ಯಾಸವಾದ ದುಃಖಕರವಾದ ಸಂಗತಿ.

ಇಂದು ದೇಶ, ಸಮಾಜವು ಜನಾಂಗ ಹಾಗೂ ಜಾತೀಯತೆಯ ಬೆಂಕಿಯಲ್ಲಿ ಉರಿಯುತ್ತಿವೆ. ಇದಕ್ಕೆ ಅನೇಕ ಮಠಗಳ ಅನಿಷ್ಟ ಕೊಡುಗೆ ಅಪಾರವಾಗಿದೆ. ಇಂದು ಅನೇಕ ಮಠಗಳು ಬಸವಾದಿ ಪ್ರಮಥರ ಮೂಲ ಸಿದ್ಧಾಂತಗಳನ್ನು ಕಳೆದುಕೊಂಡು ಜಂಗಮ ತತ್ತ್ವದಿಂದ ದೂರ ಸರಿದು ದೇವಸ್ಥಾನಗಳಿಗಿಂತ ಸ್ಥಾವರಗೊಂಡಿವೆ. ಇಂದು ಯಾವ ಮಠಗಳು ಗುರು ಬಸವಣ್ಣನವರೆಂಬ ಹೊನ್ನಿನ ನೇಗಿಲಿನಿಂದ ಗುರು ಬಸವಣ್ಣನವರು ಕಲಿಸಿದ ವೈಚಾರಿಕ ಭಕ್ತಿಯ ಬೀಜಗಳನ್ನು ಜ್ಞಾನದ ಸಸಿಗಳನ್ನು ನೆಡಬೇಕಿತ್ತೋ ಅಂತಹ ಮಠಗಳೆ ಇಂದು ಮೌಢ್ಯತೆಯ ಬೀಜಗಳನ್ನು ಬಿತ್ತಿ ಜನರಲ್ಲಿ ಇರುವ ಆತ್ಮ ವಿಶ್ವಾಸವನ್ನು ಅಜ್ಞಾನದ ವಿಷದಿಂದ ಬತ್ತುವಂತೆ ಮಾಡಿದ್ದಾರೆ. ಅನೇಕ ಮಠಗಳಲ್ಲಿ ಗುರು ಬಸವಣ್ಣನವರ ತತ್ತ್ವಕ್ಕೆ ವಿರುದ್ಧವಾದ ಕಾರ್ಯಗಳೆ ನಡೆಯುತ್ತಿವೆ.ಇವರಲ್ಲಿ ಸಮಾಜವನ್ನು ತಿದ್ದುವ ಕಳಕಳಿಯೇ ಬತ್ತಿಹೋಗಿದೆ. ತಮ್ಮ ಸ್ವಾರ್ಥಕ್ಕಾಗಿ ತಮ್ಮ ಮಠದ ಆಸ್ತಿಯನ್ನು ಬೆಳೆಸಲಿಕ್ಕೆ, ಒಣ ಪ್ರತಿಷ್ಠೆಯನ್ನ ಬೆಳಸಲಿಕ್ಕೆ ಈ ಬಸವ ತತ್ತ್ವದ ಹೊನ್ನಿನ ನೇಗಿಲನ್ನು ಬಳಸುತ್ತಿದ್ದಾರೆ.

ಇಂದು ಮನುಕುಲ ಎದುರಿಸುತ್ತಿರುವ ಬಹುದೊಡ್ಡ ಆತಂಕವೆಂದರೆ: ೧.ಸುಜ್ಞಾನದ ಕೊರತೆ ೨. ಜ್ಞಾನವಿದ್ದೂ ಮಾಡಿಕೊಳ್ಳುತ್ತಿರುವ ಆತ್ಮವಂಚನೆ. ಅಜ್ಞಾನದ ಕೊರತೆಯಿಂದ ಆಗುವ ಅಪಾಯಕ್ಕಿಂತ ಜ್ಞಾನವಿದ್ದೂ ಮಾಡಿಕೊಳ್ಳುವ ಆತ್ಮ ವಂಚನೆ ಅಪಾಯಕಾರಿಯಾದ್ದುದ್ದು. ಸಮಾಜಕ್ಕೆ ಆಘಾತಕಾರಿಯಾದುದು. ಕುವೆಂಪುರವರ ಮಾತು



ಕೇಳಿ "ನಮ್ಮ ಸಮಾಜ ಗುರು ಬಸವಣ್ಣನವರ ತತ್ತ್ವಗಳನ್ನು ಅಂದಿನಿಂದಲೇ ಆಚರಿಸಿದ್ದರೆ ಈ ದೇಶಕ್ಕೆ ಮುಸ್ಲೀಮರು ಬರುತ್ತಿರಲಿಲ್ಲ, ಬ್ರಿಟಿಷರು ಬರುತ್ತಿರಲಿಲ್ಲ. ಭವ್ಯವಾದ ಭಾರತ ದೇಶ ನಿರ್ಮಾಣವಾಗುತ್ತಿತ್ತು" ಎನ್ನುತ್ತಾರೆ. ಇಂದು ಪಂಜಾಬ್ ಎಂದರೆ ಗುರುನಾನಕರು ಮತ್ತು ಸಿಖ್ಖ ಎನ್ನುವ ಪದ ನೆನಪಾಗುವಂತೆ ಕರ್ನಾಟಕ ಎಂದರೆ, ಗುರುಬಸವಣ್ಣನವರು ಮತ್ತು ಲಿಂಗಾಯತ ಎನ್ನುವ ಪದ ನೆನಪಾಗುವಂತೆ ಆಗಬೇಕಿತ್ತು. ಅಂದಿನಿಂದ ಇಂದಿನವರೆಗೆ ಇಲ್ಲಿ ಸಾವಿರಾರು ಮಠಾಧೀಶರು ಆಗಿ ಹೋದರೂ, ಸಿಖ್ಖ ಧರ್ಮದ ೧೦ ಗುರುಗಳು ಮಾಡಿದಷ್ಟು ಕಾರ್ಯ ಇವರು ಮಾಡಲಿಲ್ಲ. ಅಲ್ಲಿ ಅವರು ಧರ್ಮ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಕೊಟ್ಟರೆ, ಇಲ್ಲಿ ಇವರು ಸ್ವಾರ್ಥಕ್ಕಾಗಿ ಇನ್ನೊಬ್ಬರ ಪ್ರಾಣ ತೆಗೆಯುವಂಥ, ಕಾಲುಗಳನ್ನು ಕಡಿಯುವಂಥ ನೀಚ ಕಾರ್ಯಗಳನ್ನು ಮಾಡಿದ್ದಾರೆ. ಎಷ್ಟೊಂದು ದುರ್ದೈವದ ಸಂಗತಿ ಇದು. ಸ್ವಾರ್ಥ ಪರಂಪರೆಯ ಮಠಾಧೀಶರಿಂದ ಪುರೋಹಿತ ಶಾಹಿಗಳಿಂದ ಪೀಠಾಧೀಶರಿಂದ, ಲಿಂಗಾಯತವನ್ನು ಒಂದು ಮೂಲೆಗುಂಪಾಗಿ ಮಾಡಿ, ಗುರು ಬಸವಣ್ಣನವರು ಎನ್ನುವ ಹೊನ್ನ ನೇಗಿಲನ್ನು ಹಿಡಿದುಕೊಂಡ ಲಿಂಗಾಯತ ಧರ್ಮ ಎನ್ನುವ ಜನ ಬದುಕುವ ಜಗಬದುಕುವ ಬೀಜಗಳನ್ನು ಬಿತ್ತಬೇಕಿತ್ತು. ಆದರೆ ವೀರಶೈವ ಎನ್ನುವ ವಿಷಬೀಜವನ್ನು ಬಿತ್ತಿದರು. ಎಂಥಾ ವಿಪರ್ಯಾಸ! ಕಳೆಯಾವುದು, ಬೆಳೆಯಾವುದು ಎಂದು ಗುರುತಿಸಲಾರದಷ್ಟು ಮೂಢರಾಗಿದ್ದಾರೆಯೇ ಈ ಸ್ವಾರ್ಥ ಪರಂಪರೆಯ ಮಠಾಧೀಶರು? ಇವರಲ್ಲಿ ಜ್ಞಾನವಿದ್ದೂ ಆತ್ಮವಂಚನೆ ಮಾಡಿಕೊಂಡವರೇ ಹೆಚ್ಚು. ಎಷ್ಟೊಂದು ಉದಾತ್ತವಾದ, ಶ್ರೇಷ್ಠವಾದ ತತ್ತ್ವವನ್ನು ಗುರು ಬಸವಣ್ಣನವರು ಕೊಟ್ಟಿದ್ದಾರೆ. ಜಾತೀಯತೆಯನ್ನು ಬೇರು ಸಹಿತ ಕಿತ್ತು ಹಾಕಿ ಸಮಾನತೆಗಾಗಿ ತಮ್ಮ ಅಧಿಕಾರ, ಸ್ವಹಿತಾಸಕ್ತಿ ಎಲ್ಲವನ್ನೂ ಬದಿಗೊತ್ತಿದ ಗುರು ಬಸವಣ್ಣನವರ ತತ್ತ್ವಗಳನ್ನು ಹಿಡಿದುಕೊಂಡೇ ಅಧಿಕಾರಕ್ಕಾಗಿ, ಸ್ವಾರ್ಥಕ್ಕಾಗಿ ಕಚ್ಚಾಡುವ, ಲಿಂಗಾಯತರಲ್ಲೇ ಇರುವ ಒಳ ಪಂಗಡಗಳನ್ನು ಪೋಷಿಸುತ್ತಾ, ಅವುಗಳ ಮಧ್ಯೆ ಅಡ್ಡಗೋಡೆಯನ್ನು ನಿರ್ಮಾಣ ಮಾಡುತ್ತಿರುವ ಮಠಾಧೀಶರನ್ನು ನೋಡಿ ಕೆಲವೊಮ್ಮೆ ನೋವಾಗುತ್ತದೆ. ಮತ್ತೆ ಕೆಲವೊಮ್ಮೆ ರೋಷ ಉಕ್ಕಿ ಬರುತ್ತದೆ.

**ಕರ್ಪೂರದ ಮರವನ್ನು ಕಡಿದು ಕಳಗೆ ಬೇಲಿಯನಿಕ್ಕುವರೆ..?** ಹಿಂದಿನ ಕಾಲದಲ್ಲಿ ಕರ್ಪೂರವನ್ನು ಒಂದು ಬಗೆಯ ಮರದ ರಸದಿಂದ ಮಾಡುತ್ತಿದ್ದರು. ಪೂಜೆಗಾಗಿ ಮತ್ತು ಸುವಾಸನೆ ಬೀರುವುದಕ್ಕಾಗಿ ಕರ್ಪೂರವನ್ನು ಉಪಯೋಗಿಸುತ್ತಾರೆ. ಅದಕ್ಕಾಗಿ ಇಂಥ ಮರಗಳನ್ನು ಉಳಿಸುವುದು ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯವಾಗಿರುತ್ತದೆ. ಆದರೆ ಇಂಥ ಶ್ರೇಷ್ಠ ಮರವನ್ನು ಕಡಿದು ಹೆಚ್ಚು ಪ್ರಯೋಜನಕಾರಿಯಲ್ಲದೆ ಮಾತ್ರವಲ್ಲ ವಿಷಪೂರಿತವಾದ ಕಳ್ಳಿಯ ಗಿಡಗಳನ್ನು ಪೋಷಿಸಲು ಅವುಗಳಿಗೆ ಬೇಲಿಹಾಕಲಿಕ್ಕೆ ಉಪಯೋಗಿಸಿದರೆ? ಬಹು ದೊಡ್ಡ ತಪ್ಪಾಗುತ್ತದೆ. ಅದೇ ರೀತಿ ವಚನ ಸಾಹಿತ್ಯವೆಂಬ ಕರ್ಪೂರದ ಮರವನ್ನು ತುಂಡು ಮಾಡಿ ಪುನಃ ಜಾತೀಯತೆ ಮೂಢನಂಬಿಕೆ, ಬಹುದೇವತೋಪಾಸನೆ, ಹೋಮ-ಹವನಗಳೆಂಬ ವಿಷದ ವೃಕ್ಷಗಳನ್ನು ಬೆಳೆಸಲಿಕ್ಕೆ ಪ್ರಯತ್ನಿಸಿದರು. ಇಂದು ಕೂಡ ಬೆಳೆಸುತ್ತಲೇ ಇದ್ದಾರೆ. ಆದರೆ ನಮ್ಮ ಸುದೈವ ಹಾಗೂ ಶರಣರ ತ್ಯಾಗ ಬಲಿದಾನ ಮತ್ತು ತನ್ನ ಸ್ವಯಂ ಅಂತಃಸತ್ವದಿಂದಾಗಿ ವಚನ ಸಾಹಿತ್ಯ ಉಳಿಯಿತು.ಇಂಥ ವಚನ ಸಾಹಿತ್ಯದ ಕರ್ಪೂರದ ಮರವನ್ನು ಇಟ್ಟುಕೊಂಡಿರುವ ಮಠಗಳು, ಗುರುಬಸವಣ್ಣನವರ ಹೆಸರಿನಲ್ಲಿ ಇರುವ ಸಂಘಟನೆಗಳು ವಚನ ಸಾಹಿತ್ಯದ ಅಂತರಂಗದಲ್ಲಿ ಅಡಗಿರುವ ಸುಜ್ಞಾನದ ಪರಿಮಳವನ್ನು ಜನತೆಗೆ ಕೊಟ್ಟು,ಪ್ರೌಢವಾದ ಧರ್ಮವಂತರಾದ,ಅರಿವುಳ್ಳ ಜನಾಂಗವನ್ನು ನಿರ್ಮಾಣ ಮಾಡಬೇಕಿತ್ತು. ಆದರೆ... ಸ್ವಾರ್ಥಿಗಳು ದುಷ್ಟ ರಾಜಕಾರಣಿಗಳು, ಅಧರ್ಮಿಯರು, ಅನೀತಿವಂತರು ಎನ್ನುವ ಕಳ್ಳಿಯ ಗಿಡಗಳನ್ನು ಪೋಷಿಸುತ್ತಿದ್ದಾರೆ. ವಚನ ಸಾಹಿತ್ಯದ ಹೆಸರು ಹೇಳಿಕೊಂಡು ಇದರ ಆಶ್ರಯದಲ್ಲಿ

ಅಂತಃಸತ್ವವೇ ಇಲ್ಲದ, ಆತ್ಮ ಬಲವೇ ಇಲ್ಲದ ಸುಜ್ಞಾನದ ಬೆಳಕನ್ನು ಕೊಡದ, ಜಾತೀಯತೆಯನ್ನು ಹರಡುವ ಮೂಢನಂಬಿಕೆಯನ್ನು ಬೆಳೆಸುವ ವೀರಶೈವ ಎನ್ನುವ ನಿಷ್ಪ್ರಯೋಜಕವಾದ ಕಳ್ಳಿಗೆ ವಚನ ಸಾಹಿತ್ಯದ ಆಶ್ರಯದಲ್ಲಿ ಪೋಷಣೆ ನೀಡುತ್ತಿರುವುದು ಎಷ್ಟೊಂದು ಅಜ್ಞಾನವಲ್ಲವೇ? ಈ ರೀತಿ ಮಾಡುತ್ತಿರುವ ಇವರು ಅಜ್ಞಾನಿಗಳೋ ಅಥವಾ ಅಜ್ಞಾನಿಗಳಂತೆ ವರ್ತಿಸುತ್ತಿದ್ದಾರೋ? ತಿಳಿಯದದಾಗಿದೆ.

**ಶ್ರೀಗಂಧ ಮರವನ್ನು ಕಡಿದು ಬೇವಿಂಗೆ ಅಡೆಯನಿಕ್ಕುವರೇ..?** ಶ್ರೀಗಂಧದ ಮರಕ್ಕೆ ಇರುವ ಬೆಲೆಯಲ್ಲಿ? ಬೇವಿಗಿರುವ ಬೆಲೆಯಲ್ಲಿ? ಸುವಾಸನೆಯನ್ನು ಬೀರುವ ತನ್ನ ಸಂಪರ್ಕಕ್ಕೆ ಬಂದ ಇತರ ಮರಗಳಿಗೂ ಸುವಾಸನೆಯನ್ನು ನೀಡುವ, ಶ್ರೀಗಂಧದ ಮರವನ್ನು ಕಡಿದು ಹಾಕಿ ಬೇವಿನ ಮರದ ತುಂಡುಗಳಿಗೆ ಅಡೆಯನ್ನಾಗಿ ಇಡುವುದೇ? ಸಲ್ಲದು. ಸುಜ್ಞಾನದ ಪರಿಮಳವನ್ನ ನೀಡುವ ತನ್ನ ಸಂಪರ್ಕಕ್ಕೆ ಬಂದವರನ್ನು ಇವನಾರು ಇವನಾರು ಎನ್ನದೇ ಎಲ್ಲರನ್ನು ಇಂಬಿಟ್ಟುಕೊಂಡು ಪಾವನರನ್ನಾಗಿ ಮಾಡಿದ ಗುರುಬಸವಣ್ಣನವರು ಎನ್ನುವ ಶ್ರೀಗಂಧದ ಮರವನ್ನು ಬಳಸಿ ತಮ್ಮ ಮಠ ಪರಂಪರೆಯ ಗುರುಗಳ ಹುಟ್ಟು ಹಬ್ಬಗಳನ್ನು ಮಾಡುವುದೇ? ಸಲ್ಲದು. ಆದರೆ ಇಂದು ನಡೆಯುತ್ತಿರುವುದೇ ಹೀಗೆ ಗುರುಬಸವಣ್ಣನವರನ್ನು ಕುದುರೆಯಾಗಿ ಮಾಡಿ ತಾವು ಮೇಲೆ ಕುಳಿತು ಮೆರೆಯುವವರೇ ಹೆಚ್ಚು. ತಾವು ಕುದುರೆಯಾಗಿ ಗುರುಬಸವಣ್ಣನವರನ್ನು ಮೆರೆಸುವವರು ವಿರಳ. ಇದೆಲ್ಲವನ್ನು ನೋಡಿ ನೋಡಿ ತಾಳಲಾರದೆ ತಾವು ಬಿತ್ತಿ ಬೆಳೆದ ಈ ಶ್ರೇಷ್ಠ ತತ್ತ್ವವು ನಾಶವಾಗಬಾರದೆಂದು ತಿಳಿದು ಗುರುಬಸವಣ್ಣನವರು ತಮ್ಮ ಕಾರುಣ್ಯದ ಕಿರಣಗಳನ್ನು ಈ ತತ್ತ್ವದ ಪುನರುತ್ಥಾನಕ್ಕಾಗಿ ಇಬ್ಬರು ಮಹಾನ್ ವ್ಯಕ್ತಿಗಳನ್ನು ಆಯ್ದುಕೊಂಡರು. ಅವರೇ ಧರ್ಮ ಕ್ರಾಂತಿಯ ಧೀರಯೋಗಿ ಪ್ರವಚನ ಪಿತಾಮಹ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರು ಮತ್ತು ಭಾರಿ ಅಬ್ಬರ ಹೊತ್ತು ಆರೂಢ ಭಿಕ್ಷೆಯನ್ನು ಬೇಡುತ್ತಿರುವ ಮಹಾಮಾತೆ ಜಗದ್ಗುರು ಮಾತೆ ಮಹಾದೇವಿ ತಾಯಿಯವರು.

ಬಸವ ಭಕ್ತಿಯ ಬೀಜ। ಬಸವ ಮುಕ್ತಿಯ ತೇಜ।
ಬಸವ ಕಾಯಕದ ಗುರು ಬೀಜ। ಹೊಸಮತಕೆ
ಬಸವ ಓಂಕಾರ ಶಿವನಾಮ॥

ಎನ್ನುವ ಜಾನಪದರ ನುಡಿಯಂತೆ ಬಸವ ಭಕ್ತಿಯ ಬೀಜ, ಬಸವ ತತ್ತ್ವದ ಬೀಜವನ್ನು ಬಿತ್ತಿದರು. ಪ್ರವಚನದ ಮಳೆ ಸುರಿಸಿದರು. ಗುರು ಬಸವಣ್ಣನವರು ಹೊಸ ಧರ್ಮ ಲಿಂಗಾಯತ ಧರ್ಮ ಕೊಟ್ಟಿದ್ದಾರೆ ಎಂದು ಸಾರಿ ಸಾರಿ ಹೇಳಿದ್ದಾರೆ. ಅದರಲ್ಲಿ ಮಾತೆಯವರು ವೀರಾವೇಶದಿಂದ ವೀರಶೈವ ಎನ್ನುವ ಎಕ್ಕೆಯ ಗಿಡಗಳನ್ನು ಕಿತ್ತು ಹಾಕಿ, ಗುರುಬಸವಣ್ಣನವರು ಎನ್ನುವ ಹೊನ್ನ ನೇಗಿಲನ್ನು ಹಿಡಿದುಕೊಂಡು ಲಿಂಗಾಯತ ಧರ್ಮವೆಂಬ ಬೀಜವನ್ನು ಬಿತ್ತಿದರು. ಇಂದು ಪ್ರಜ್ಞಾವಂತ ಲಿಂಗಾಯತ. ಬಸವ ಭಕ್ತ ಜನಾಂಗದ ನಿರ್ಮಾಣ ಮಾಡಿದ್ದಾರೆ. ಇನ್ನು ಮುಂದೆ ವೀರಶೈವ ಎನ್ನುವ ಎಕ್ಕೆ ಗಿಡಕ್ಕೆ ಸ್ಥಳವಿಲ್ಲ . ಆದರೂ ಪದೇ ಪದೇ ಇನ್ನೂ ಕೆಲವರು ವೀರಶೈವ ಎನ್ನುವ ಎಕ್ಕೆಯ ಬೀಜಗಳನ್ನು ಬೆಳೆಸಲು ಪ್ರಯತ್ನಿಸುತ್ತಲೇ ಇದ್ದಾರೆ, ಇಂಥ ಕಳೆಯನ್ನು ಕಿತ್ತು ಹಾಕಿ ಲಿಂಗಾಯತ ಧರ್ಮದ ಬೆಳೆಯನ್ನು ಬೆಳೆಸುವುರಲ್ಲಿಯೇ ನಮ್ಮ ಅಪ್ಪಾಜಿಯವರ ಜೀವನ ಶ್ರೀಗಂಧದಂತೆ ಸವೆದು ಹೋಯಿತು. ಇದರಲ್ಲೇ ಅರಿವಿನ ಮೂರ್ತಿ ನಮ್ಮ ಮಾತಾಜಿಯವರಿಗೆ ೬೦ ವರ್ಷಗಳಾದವು ಇನ್ನೂ ಎಷ್ಟು ವರ್ಷ ಇವರೇ ಮಾಡಬೇಕು..?ಇದರಲ್ಲಿ ನಮ್ಮದೇನು ಪರಿಶ್ರಮ ಬೇಡವೇ? ಅದಕ್ಕಾಗಿ ಬನ್ನಿ ನಾವು ನಮ್ಮ ಮನದಲ್ಲಿರುವ ಸೂಕ್ಷ್ಮವಾದ ಅಹಂಕಾರವನ್ನು ಬಿಟ್ಟು ರಾಷ್ಟ್ರೀಯ ಬಸವ ದಳಗಳನ್ನು ಸಂಘಟನೆ ಮಾಡೋಣ. ಇದರಿಂದ ಲಿಂಗಾಯತ ಧರ್ಮವನ್ನು ಬೆಳೆಸೋಣ.

ಸಾವಿರಾರು ಮಠಾಧೀಶರು ೮೦೦ ವರ್ಷಗಳ ಕಾಲ ಮಾಡಲಿಕ್ಕೆ



ಸಾಧ್ಯವಾಗದಂತಹ. ಸಿಖ್ ಧರ್ಮದ ೧೦ ಗುರುಗಳು ೪೦೦ ವರ್ಷಗಳಲ್ಲಿ ಮಾಡಿದಂತಹ ಸಾಧನೆಯನ್ನು ಅಪ್ಪಾಜಿ ಮತ್ತು ಮಾತಾಜಿಯವರು ಕೇವಲ ೪೦ ವರ್ಷಗಳಲ್ಲಿ ಮಾಡಿದ್ದಾರೆ. ಅಪ್ಪಾಜಿ ಮತ್ತು ಮಾತಾಜಿಯವರು ವಚನ ಸಾಹಿತ್ಯ ಎನ್ನುವ ಶ್ರೀಗಂಧವನ್ನು ತಮ್ಮ ತಾತ್ವಿಕ ಜ್ಞಾನದ ಕಲ್ಲಿನ ಮೇಲೆ ತೇಯ್ದು ಶುದ್ಧ ಬಸವ ತತ್ವದ ಶ್ರೀಗಂಧವನ್ನು ಕನ್ನಡ ಜನತೆಗೆ ಮಾತ್ರವಲ್ಲದೆ ಇಡೀ ಜಗತ್ತಿಗೇ ನೀಡಿದ್ದಾರೆ. ಇದನ್ನು ಅರ್ಥ ಮಾಡಿಕೊಳ್ಳದೇ ಇರುವ ದುರ್ದೈವಿಗಳು, ರವಿಯನ್ನು ಕಂಡು ಗೂಗೆ ಮತ್ಸರಿಸುವಂತೆ, ಚಂದ್ರನನ್ನು ಕಂಡು ಕಾಗೆ ಮತ್ಸರಿಸುವಂತೆ, ಮಾತೆಯವರನ್ನು ಕಂಡು ಮತ್ಸರಿಸುತ್ತಾರೆ. ಆದರೆ ಲೋಕ ಬೆಳಗುವ ಕಾರ್ಯ ಮಾತಾಜಿ ಮಾಡುತ್ತಲೇ ಸಾಗುತ್ತಾರೆ.

ಒಂದು ವೇಳೆ ನಿಜವಾಗಿಯೂ ಮಠಾಧೀಶರಲ್ಲಿ ಬಸವ ತತ್ವದ ಬಗ್ಗೆ ಕಳಕಳಿಯಿದ್ದರೆ, ಮಾತಾಜಿಯವರ ಮೇಲೆ ಇವರಿಗೇಕೆ ಮತ್ಸರ? ಗುರುಬಸವಣ್ಣನವರ ವಚನದಲ್ಲಿದೆ ಇದಕ್ಕೆ ಉತ್ತರ.

ಕಬ್ಬಿನ ಮೇಲೆ ಜೇನನಿಟ್ಟಿತ್ತೆಂಬರು
ಅವು ಒಂದರ ಸಿಹಿಯನೊಂದು ಅರಿಯವು
ಭಕ್ತ ಮತ್ತು ಜಂಗಮದ ನಡುವೆ ಅರ್ಥ ಪ್ರಾಣ ಅಭಿಮಾನವೆಂಬ
ಸಿಗುರು ಕಾಡಿತ್ತು ಕಾಣಾ ಲಿಂಗದೇವ.........(ಬ.ವ.ದೀ.೯೬೪)

ಮಾತಾಜಿಯವರು ಇಂದು ಬಸವ ತತ್ವದ ಸಿಹಿ ಜೇನನ್ನು ಎಲ್ಲರಿಗೂ ಕೊಡುತ್ತಲಿದ್ದಾರೆ. ಆದರೆ ಕಬ್ಬು ನಾನೇ ಸಿಹಿ ನನಗಿಂತ ಸಿಹಿಯಾದುದು ಮತ್ತೊಂದಿಲ್ಲ ಎಂದು ಅಹಂಕಾರದಿಂದ ಅದರ ಮೇಲೆ ಸಿಗುರನ್ನು ಮುಚ್ಚಿಕೊಂಡು ಜೇನಿನ ಸಿಹಿಯನ್ನು ಸವಿಯಲು ಅಸಮರ್ಥವಾಗಿದೆ. ಕಬ್ಬಿನ ಮೇಲೆ ಜೇನು ಹಚ್ಚಿದರೂ ಅದಕ್ಕೆ ತನಗಿಂತ ಸಿಹಿಯಿರುವ ಜೇನಿನ ಸಿಹಿ ಗೊತ್ತಾಗದಿರುವುದಕ್ಕೆ ಕಾರಣ...? (ಸಿಗುರು) ಸಿಪ್ಪೆ. ಅದೇ ರೀತಿ ಮಠಾಧೀಶರು ನಾವೇ ಬಸವ ಭಕ್ತರು ನಮ್ಮಷ್ಟು ಕಾರ್ಯ, ಪ್ರವಚನ ಬೇರೆ ಯಾರೂ ಮಾಡುವುದಿಲ್ಲ. ನಾವೇ ನಿಜವಾದ ಸೇವೆಯನ್ನು ಮಾಡುತ್ತಿದ್ದೇವೆ. ಎನ್ನುವ ಅಹಂಕಾರದ (ಸಿಪ್ಪೆ) ಸಿಗುರನ್ನು ಮುಚ್ಚಿಕೊಂಡಿದ್ದಾರೆ. ಅದನ್ನು ತೆಗೆದಾಗ ಮಾತ್ರ ಮಾತಾಜಿಯವರ ಅಂತರಂಗದಲ್ಲಿರುವ ಉದಾತ್ತ ಉದ್ದೇಶದ, ಸಮಾಜ ಕಳಕಳಿಯ, ಬಸವ ಭಕ್ತಿಯ ಸಿಹಿ ಗೋಚರವಾಗುತ್ತದೆಯೇ ಹೊರತು ಇಲ್ಲದಿದ್ದರೆ ಸಾಧ್ಯವೇ ಇಲ್ಲ.

ಊರಿಗೆ ಹೊಸಬರು ಬಂದರೆ ಪುರದೊಳಗಣ ಶ್ವಾನ ನೋಡಿ
ಬೊಗಳದೇ ಸುಮ್ಮನೇ ಬಿಡುವುದೇ? ಊರಿಗೆ ಹೊರಗಾದ ಶರಣರು
ಊರುಗಳ ಮಧ್ಯದೊಳಿರಲು ದೂಷಕರು ದೂಷಿಸದಿಪ್ಪರೇ ಅಯ್ಯಾ ?
ದೂಷಕರ ಧೂಮಕೇತುಗಳು ನಿಮ್ಮ ಶರಣರು ಲಿಂಗದೇವಾ. (ಬ.ವ.ದೀ.೧೩೬೯)

ಎನ್ನುವ ಧರ್ಮಪಿತರ ವಾಣಿಯಂತೆ, ಹೊಸದನ್ನು .ಹೊಸಬರನ್ನು ನೋಡಿ ನಾಯಿಗಳು ಬೊಗಳುವಂತೆ . ಮಾತಾಜಿಯವರ ಹೊಸ ಹೊಸ ಕಾರ್ಯಗಳನ್ನು ನೋಡಿ ಮತ್ಸರಿಸತೊಡಗುತ್ತಾರೆ. ಇವರಿಗೆ ಹೆದರದೆ ಆನೆಯೋಪಾದಿಯಲ್ಲಿ ಕಾರ್ಯ ಮಾಡುತ್ತಲೇ ಸಾಗುತ್ತಾರೆ. ಅದಕ್ಕಾಗಿ ಎಲ್ಲಾ ಮಠಾಧೀಶರಿಗೂ ಮಾತಾಜಿಯವರನ್ನು ಅರ್ಥಮಾಡಿಕೊಳ್ಳುವಂತಹ ವಿವೇಕ ಉಂಟಾಗಲಿ. ಅವರ ಕಾರ್ಯ ಕಂಡು ಮತ್ಸರ ಪಡಲಾರದಂಥ ಜ್ಞಾನವನ್ನು ಗುರು ಬಸವಣ್ಣನವರು ಕರುಣಿಸಲಿ ಎಂದು ಭಕ್ತಿಯಿಂದ ಬೇಡಿಕೊಳ್ಳುತ್ತೇನೆ.

-ಶರಣ ಸಚ್ಚಿದಾನಂದ ಲಿಂಗಾಯತ್

**ಕಲ್ಯಾಣ ಕಿರಣ ಓದುಗರಿಗೆ ಸೂಚನೆ**

ಆತ್ಮೀಯ ಓದುಗರೇ, ತಮಗೆ ಕಲ್ಯಾಣ ಕಿರಣ, ತಲುಪದಿದ್ದಲ್ಲಿ, ವಿಳಾಸ ಬದಲಾವಣೆ ಆಗಿದ್ದಲ್ಲಿ, ಅಥವಾ ತಮಗೆ ಒಂದಕ್ಕಿಂತ ಹೆಚ್ಚು ಕಲ್ಯಾಣ ಕಿರಣ ಬರುತ್ತಿದ್ದಲ್ಲಿ, ಮತ್ತು ಕಲ್ಯಾಣ ಕಿರಣಕ್ಕೆ ಸಂಬಂಧಿಸಿದ ಇತರ ವಿವರಗಳಿಗಾಗಿ, 23325335, 9886694454 ನ್ನು ಸಂಪರ್ಕಿಸಿರಿ.

# ಛತ್ರಪತಿ ಶಿವಾಜಿ ಮೂಲ ಕನ್ನಡ ನೆಲ

-ಮಾತಾಜಿ

ಕಲ್ಯಾಣ ಪರ್ವಕ್ಕೆ ಬಂದ ಶರಣ ಡಾ|| ಶಿವಗೌಡ ಪಾಟೀಲರು ಛತ್ರಪತಿ ಶಿವಾಜಿ ಮಹಾರಾಜರನ್ನು ಕುರಿತು ಬರೆಯಲ್ಪಟ್ಟ ಒಂದು ಸುದ್ದಿಯ ತುಣುಕನ್ನು ತಂದರು. ಮಹಾರಾಜರ ಮೂಲ ಪುರುಷರು ಕನ್ನಡದ ನೆಲೆಯವರು, ಗದಗ್ ಬಳಿಯ ಸೋರಟೂರು ಗ್ರಾಮದವರು. ಲಿಂಗಾಯತ ಗೌಳಿ ಸಮಾಜಕ್ಕೆ ಸೇರಿದ ಬಳಿಯಪ್ಪ ಎಂಬ ವ್ಯಕ್ತಿಯು ಮಹಾರಾಷ್ಟ್ರ ಕಡೆಗೆ ವಲಸೆ ಹೋದರು. ಅವರ ವಂಶಸ್ಥರೇ ಛತ್ರಪತಿ ಶಿವಾಜಿ ಮಹಾರಾಜರು. ಈ ವಿವರವನ್ನು ಸಭೆಯಲ್ಲಿ ಓದಿ ನಾವೆಲ್ಲ ಹರ್ಷಿಸಿದೆವು. ಬಸವ ಕಲ್ಯಾಣದಲ್ಲಿ ದಿ 7-10-2006ರಂದು ಜರುಗಿದ ಅಕ್ಕನಾಗಲಾಂಬಿಕಾ ಪೌರ್ಣಿಮೆಯ ಕಾರ್ಯಕ್ರಮದಲ್ಲಿ ಇದನ್ನು ನಾನು ಪ್ರಾಸಂಗಿಕವಾಗಿ ಹೇಳಿದೆ. ಪ್ರಜಾವಾಣಿಯಲ್ಲಿ ಇದು ಬಸವ ಕಲ್ಯಾಣ ತಾಲ್ಲೂಕು ಪುಟದಲ್ಲಿ ಪ್ರಕಟವಾಯಿತು. ಮಾಜಿ ಶಾಸಕರಾದ ಶ್ರೀ ಎಂ.ಜಿ. ಮುಳೆಯವರು ಮತ್ತು ಮರಾಠಾ ಕ್ಷತ್ರಿಯ ಪರಿಷತ್ತಿನವರು ಇದನ್ನು ವಿರೋಧಿಸಿದರು. ಛತ್ರಪತಿ ಶಿವಾಜಿ ಮಹಾರಾಜರನ್ನು (ಕ್ಷತ್ರಿಯರಾದರೂ) ಶೂದ್ರರೆಂದು ನಾವು ಅವಮಾನಿಸಿದ್ದೇವೆಂದು ಆಕ್ಷೇಪ ವ್ಯಕ್ತಪಡಿಸಿದರು. ಅವರು ಪ್ರಕಟಿಸಿದ ಆಕ್ಷೇಪಗಳಿಂದ ಈ ಸುದ್ದಿಯು ಬಸವ ಕಲ್ಯಾಣ ನಂತರ ಬೀದರ್, ನಂತರ ಗುಲಬರ್ಗಾ ವಿಭಾಗ, ನಂತರ ಉತ್ತರ ಕರ್ನಾಟಕದ ಪತ್ರಿಕೆಗಳಲ್ಲಿ ವ್ಯಾಪಕವಾಗಿ ಪ್ರಚಾರವಾಯಿತು.

ವಿಜಯ ಕರ್ನಾಟಕದ ದಿ-24-9-2006ರ ಸಂಚಿಕೆಯಲ್ಲಿ ಶ್ರೀಮತಿ ಶಶಿಕಲಾ ವೀರಯ್ಯ ಸ್ವಾಮಿಯವರ ಲೇಖನವನ್ನು ಓದಿದ್ದು ನಮ್ಮ ಉತ್ಸಾಹವನ್ನು ಇನ್ನಷ್ಟು ಗರಿಗೆದರಿಸಿತ್ತು. ನಾನು ದೆಹಲಿಗೆ ಹೋಗಬೇಕಾದ್ದರಿಂದ ಅಲ್ಲಿರುವಾಗಲೇ ಕರ್ನಾಟಕದಲ್ಲಿ ಈ ವಿರೋಧದ ಸುದ್ದಿ ವ್ಯಾಪಕಗೊಳ್ಳುತ್ತಿರುವುದು ತಿಳಿದು ಬೆಳಗಾಂ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ ಕೆ. ಬಸವರಾಜಪ್ಪ ಅವರಿಗೆ ಪುಸ್ತಕ ಬೇಕೆಂದು ದೂರವಾಣಿಯಲ್ಲಿ ಮಾತನಾಡಿದೆ. ಅವರು ಪುಸ್ತಕದ ಪ್ರತಿಯೊಂದನ್ನು ಪಡೆದು ಕೊರಿಯರ್‌ದಲ್ಲಿ ದೆಹಲಿಗೇ ಕಳಿಸಿದರು. ಪುಸ್ತಕವನ್ನು ಸಮಗ್ರವಾಗಿ ಓದಿದ ಬಳಿಕ ಬಹಳಷ್ಟು ವಿಷಯಗಳು ಸ್ಪಷ್ಟವಾದವು.

ಇಡೀ ರಾಷ್ಟ್ರವೇ ಹೆಮ್ಮೆ ಪಡುವಂತಹ ಮಹಾಪುರುಷ, ವೀರ, ಶೂರ, ಛತ್ರಪತಿ ಶಿವಾಜಿ ಮಹಾರಾಜರು. ಅವರ ತಂದೆ ಶಹಾಜಿ (1594-1664). ಶಹಾಜಿಯವರಿಗೆ (1630-1680) ಮೂವರು ಮಕ್ಕಳು, ಸಂಭಾಜಿ, ಶಿವಾಜಿ, ವೆಂಕೋಜಿ. ಶಹಾಜಿಯ ತಂದೆ ಮಾಲೋಜಿ ಭೋಸಲೆ (1573-1620), ಮಾಲೋಜಿಯ ತಂದೆ ಬಾಬಾಜಿ ಭೋಸಲೆ (ಕ್ರಿ.ಶ. 1553), ಅವರ ತಂದೆ ಪರಸೋಜಿ ಭೋಸಲೆ, ಅವರ ತಂದೆ ಖೇಳೋಜಿ ಭೋಸಲೆ (1490), ಇವರ ತಂದೆ ಬಳಿಯಪ್ಪ (1250). ಛತ್ರಪತಿ ಶಿವಾಜಿ ಮಹಾರಾಜರ ವಂಶವೃಕ್ಷವನ್ನು ಬಳಿಯಪ್ಪನಿಂದ ಹಿಡಿದು ಡಾ|| ಆರ್.ಸಿ. ಢೇರೆಯವರು ಚಿತ್ರಿಸಿದ್ದಾರೆ. 'ಅಪ್ಪ' ಎಂಬ ಪದ ಪ್ರಯೋಗ ಕನ್ನಡದ್ದು ಎಂಬುದು ಸ್ಪಷ್ಟ, ಮರಾಠಿಯಲ್ಲಿ ಅದು ಬಳಿಪ ಎಂಬುದಾಗಿ ರೂಪಾಂತರಗೊಂಡಿದೆ. ಶಿವಾಜಿ ಮಹಾರಾಜರ ವಂಶ ಮೂಲವನ್ನು ಅರಸುತ್ತ ಹೊರಟಾಗ ಹಿರಿಯ ಸಂಶೋಧಕರಾದ ಡಾ|| ರಾ. ಚಂ. ಢೇರೆಯವರಿಗೆ ಹಲವಾರು ಸತ್ಯ ಸಂಗತಿಗಳು ಪ್ರಾಪ್ತವಾದವು. ಇವನ್ನು ಅವರು ''ಶಿಖರ ಶಿಂಗಣಾಪುರಚಾ ಶಂಭು ಮಹಾದೇವ'' ಕೃತಿಯಲ್ಲಿ ಪ್ರಕಾಶಕ್ಕೆ ತಂದರು. ಈ ಕೃತಿಯ ಆಧಾರದ ಮೇಲೆ ಡಾ|| ಸರಜೂ ಕಾಟ್ಕರ್ ''ಶಿವಾಜಿ ಮೂಲ ಕನ್ನಡ ನೆಲ'' ಎಂಬ ಕೃತಿಯನ್ನು ರಚಿಸಿದ್ದಾರೆ. ಇದು ಬಳ್ಳಾರಿಯ ಲೋಹಿಯಾ ಪ್ರಕಾಶನದ 100ನೆಯ ಪ್ರಕಟಣೆಯಾಗಿ 2006ರಲ್ಲಿ ಹೊರಬಂದಿದೆ. ನಿಜಕ್ಕೂ ''ಶಿವಾಜಿ ಮೂಲ ಕನ್ನಡ ನೆಲ'' ಎಂಬ ಈ ಕೃತಿ ಡಾ|| ಸರಜೂ ಕಾಟ್ಕರರ ಅಮೂಲ್ಯ ಅನುವಾದ ಬರಹ. ಮೂಲಮರಾಠಿಯ ಕೃತಿ ''ಶಿಖರ ಶಿಂಗಣಾಪುರಚಾ ಶಂಭು



ಮಹದೇವ'' ರಚಿಸಿದ ಡಾ|| ರಾ.ಚಿಂ. ಢೇರೆ, ಕನ್ನಡದಲ್ಲಿ ''ಶಿವಾಜಿ ಮೂಲ ಕನ್ನಡ ನೆಲ'' ಕೃತಿ ರಚಿಸಿದ. ಡಾ|| ಸರಜೂ ಅವರು, ಇಂಥ ಕೃತಿಯನ್ನು ದಿಟ್ಟತನದಿಂದ ಪ್ರಕಟಿಸಿದ ಬಳ್ಳಾರಿಯ ಲೋಹಿಯಾ ಪ್ರಕಾಶನದ ಸಿ. ಚನ್ನಬಸವಣ್ಣ ಬಹಳ ಅಭಿನಂದನಾರ್ಹರು. ಸತ್ಯವನ್ನು ನುಡಿಯಲು, ಬರೆಯಲು, ಹಿಂಜರಿಯುವವರೇ ಬಹಳಷ್ಟು ಲೇಖಕರು ಇರುವ ಕಾಲದಲ್ಲಿ ಜೊತೆಗೆ ಅಧ್ಯಯನ ಶೀಲ ಸಂಶೋಧಕರ ವಿರುದ್ಧ ಪ್ರತಿಭಟನೆಯ ಖಡ್ಗ ಹಿರಿಯುವ, ಓದದೆ ನಿರ್ಧಾರ ತೆಗೆದು ಕೊಳ್ಳುವ ಸಂಘ-ಸಂಸ್ಥೆಗಳು, ಸಂಘಟನೆಗಳು ಇರುವ ಕಾಲದಲ್ಲಿ ಮರಾಠಿ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಈ ಕೃತಿಗಳು ಹೊರಬಂದಿರುವುದು ಮಹತ್ವಪೂರ್ಣ ಸತ್ಯ ಸಂಗತಿಗಳನ್ನು ಅನಾವರಣಗೊಳಿಸಿದೆ ಎಂಬುದು ಗಮನಾರ್ಹ .

ಗುರು ಬಸವಣ್ಣನವರಂಥ ಅನೇಕ ಐತಿಹಾಸಿಕ ಕ್ರಾಂತಿ ಪುರುಷರನ್ನು ಭೂಮಿಯ ಸಂಬಂಧ ಕತ್ತರಿಸಿ ಕೈಲಾಸಕ್ಕೆ ಜೋಡಿಸಿ ಪೌರಾಣಿಕ ವ್ಯಕ್ತಿಗಳನ್ನಾಗಿ ಮಾಡಿದಂತೆ ಶಿವಾಜಿ ಮಹಾರಾಜರಂಥವರನ್ನು ಕ್ಷತ್ರಿಯರನ್ನಾಗಿ ಮೇಲಕ್ಕೇರಿಸುವ ಪ್ರಯತ್ನ ಹೇಗೆ ನಡೆಯಿತು ಎಂಬುದನ್ನು ಡಾ|| ಸರಜೂ ಕಾಟ್ಕರ್ ಅತ್ಯಂತ ಅಧಿಕೃತವಾಗಿ ದಾಖಲೆ ಸಹಿತವಾಗಿ ಬರೆದಿದ್ದಾರೆ. ಇದು ಮಹಾರಾಜರ ಅನುಮತಿಯಿಂದಲೇ ನಡೆಯಿತಾದರೂ ಹೇಗೆ ಇದು ಅನಿವಾರ್ಯವಾಯಿತು ಎಂಬುದನ್ನು ಮನಂಬುಗುವಂತೆ ಡಾ|| ಸರಜೂ ವಿವರಿಸಿದ್ದಾರೆ. ಶೌರ್ಯ, ವ್ಯಕ್ತಿತ್ವ ರಾಷ್ಟ್ರಪ್ರೇಮ, ಉದಾತ್ತ ಉದ್ದೇಶ, ಪ್ರತಿಭೆ, ಅರ್ಹತೆ ಎಲ್ಲ ಇದ್ದೂ ಸಹ ಶಿವಾಜಿ ಮಹಾರಾಜರು ಕೆಲವೊಮ್ಮೆ ವೈದಿಕರಿಂದ, ಕ್ಷತ್ರಿಯ ರಾಜರಿಂದ ಶೂದ್ರತ್ವದ ಅವಮಾನದ ಮಾತುಗಳನ್ನು ಕೇಳಬೇಕಾಯಿತು ಎಂಬುದನ್ನು ಓದುವಾಗ ಹೃದಯ ಕಲಕಿ, ಕಣ್ಣೀರು ಜಾರದೆ ಇರುವುದಿಲ್ಲ. ವೈದಿಕ ಪುರೋಹಿತಶಾಹಿಯ ಪ್ರಭಾವ ಹೇಗೆ ವಂಶವಾದವನ್ನು ಹಿಡಿದು ಅರ್ಹರನ್ನು ಅವಮಾನಿಸುತ್ತದೆ ಎಂಬುದನ್ನು ಪ್ರಸ್ತುತ ಕೃತಿಯಲ್ಲಿ ಬಿಂಬಿಸಿದ್ದಾರೆ. ಧಾರ್ಮಿಕ ರಂಗದಲ್ಲಿ ಜನ್ಮತಃ ಬ್ರಾಹ್ಮಣನಾದವನಿಗೆ ಅರ್ಹತೆ ಇರಲಿ ಬಿಡಲಿ ಕೆಲವು ಧಾರ್ಮಿಕ ಹಕ್ಕುಗಳು ಪ್ರಾಪ್ತವಾಗುವಂತೆ, ಕ್ಷತ್ರಿಯನಿಗೂ ರಾಜಕೀಯ ಸವಲತ್ತು ಸಿಗುತ್ತವೆ. ಸಂಪ್ರದಾಯ ಏನೇ ಬೊಬ್ಬೆ ಇಡಲಿ ಗೌಳಿ ಕಾಯಕ ಕುಲ ಸಂಜಾತ ಶಿವಾಜಿ ಮಹಾರಾಜರು, ಕುರುಬ ಜನಾಂಗದಲ್ಲಿ ಹುಟ್ಟಿದ ಅಹಲ್ಯಾಬಾಯಿ ಹೋಳ್ಕರ್, ಕ್ಷೌರಿಕ ತಾಯಿಯಿಂದ ಹುಟ್ಟಿದ ಬಿಜ್ಜಳ ಮಹಾರಾಜ, ನಾಯಕ ಜನಾಂಗದಲ್ಲಿ ಹುಟ್ಟಿದ ವೀರ ಮದಕರಿ ನಾಯಕ ಮುಂತಾದವರು ರಾಜರಾಗಿ ಮೆರೆದಿದ್ದಾರೆ, ಚರಿತ್ರಾರ್ಹರಾಗಿದ್ದಾರೆ. ಇದೇ ದೇವ ಲೀಲೆ !

ಭಾರತೀಯ ಸಮಾಜಗಳಲ್ಲಿ ಕೆಟ್ಟ ಜಾಡ್ಯವಿದೆ. ಹುಟ್ಟಿನಿಂದ ಯಾರೂ ಶ್ರೇಷ್ಠರಲ್ಲ, ಕನಿಷ್ಠರೂ ಅಲ್ಲ. ವೈದಿಕ ಸಮಾಜ ಶಾಸ್ತ್ರದನ್ವಯ ಚತುರ್ವರ್ಣಗಳೆಂದು ವರ್ಗೀಕರಣ ಮಾಡಿರುವುದೇ ಅಲ್ಲದೆ ಅಸ್ಪೃಶ್ಯ ಎಂಬ ಐದನೆಯ ವರ್ಣವನ್ನು ಸಹ ಸೃಷ್ಟಿಸಲಾಗಿದೆ. ಹುಟ್ಟಿನಿಂದಲೇ ಈ ವರ್ಣಗಳು, ಜೊತೆಗೆ ಧಾರ್ಮಿಕ ವಿಧಿ ನಿಷೇಧಗಳು, ವರ್ಣ ವ್ಯವಸ್ಥೆಗೆ ಅನುಗುಣವಾಗಿ ಅವರ ಸ್ಥಾನಮಾನ ಕರ್ತವ್ಯಗಳನ್ನು ನಿಶ್ಚಯಿಸಲಾಗಿದೆ. ''ಸ್ವಧರ್ಮೇ ನಿಧನೇ ಶ್ರೇಯಃ ಪರಧರ್ಮೋ ಭಯಾ ವಹ'' ಎಂದು ಭಯ ಹುಟ್ಟಿಸಿ ಬೇರೆ ರೀತಿ ಆಲೋಚಿಸಲು ಅವಕಾಶ ಸಹ ನೀಡಲಾಗಿಲ್ಲ. ಈ ವ್ಯವಸ್ಥೆಯ ವಿರುದ್ಧ ಕ್ರಾಂತಿಪುರುಷ ಬಸವಣ್ಣನವರು ಹೋರಾಡಿದರು. ಇದನ್ನು ಎದುರಿಸಲಾರದ ಅನೇಕರು ಒಳಮಾರ್ಗದಿಂದ ಉತ್ತಮ ವರ್ಣೀಯರಾಗಲು ಪೈಪೋಟಿ ನಡೆಸಿ ಬೇರೆ ಬೇರೆ ವಿಧಾನ ಅನುಸರಿಸಿದ್ದಾರೆ, ಅನುಸರಿಸುತ್ತಿದ್ದಾರೆ. ಉಳಿದ ಜನಾಂಗಗಳವರ ಸುದ್ದಿ ಅತ್ತಲಿರಲಿ ಮಹಾರಾಷ್ಟ್ರದ ಪರಳಿ ವೈಜನಾಥನ ಪೂಜೆಯ ವಿಷಯದಲ್ಲಿ ವೈದಿಕರು, ''ಲಿಂಗಾಯತರನ್ನು ಶೂದ್ರರೆಂದು ಕರೆದು, ಅವರಿಗೆ ಪೂಜೆಯ ಹಕ್ಕು ಇಲ್ಲ'' ಎಂದು ನ್ಯಾಯಾಲಯಕ್ಕೆ ಹೋದಾಗ, ''ನಮ್ಮದು ಸ್ವತಂತ್ರ ಧರ್ಮ, ವರ್ಣವ್ಯವಸ್ಥೆ ನಮಗೆ ಅನ್ವಯವಾಗದು. ನಾವು ಅತಿ ವರ್ಣಾಶ್ರಮಿಗಳು'' ಎಂದು ಹೇಳುವ ಧೈರ್ಯ, ಆತ್ಮವಿಶ್ವಾಸ ತೋರದೆ ಪೂಜಾರಿಕೆಯ ಆಸೆಗಾಗಿ ಎದೆಯ ಮೇಲಿನ ಲಿಂಗವನ್ನು ಪಕ್ಕಕ್ಕೆ, ಉದ್ದನೆಯ ದಾರದ ತುದಿಗೆ ಕಟ್ಟಿ, ತಾವೂ ಲಿಂಗಿ ಬ್ರಾಹ್ಮಣರು ಎಂದು ಕೆಲವು ಜಂಗಮರು ವಾದಿಸಿದರು. ಇದೇ

ಲಿಂಗಾಯತ ಪುರೋಹಿತ ಶಾಹಿಯವರು ತಾವು ಬೇಡ ಜಂಗಮರು ಎಂದು ಪರಿಶಿಷ್ಟ ಜಾತಿಯವರ ಸವಲತ್ತು ಪಡೆಯಲು ಈಗ ಪೈಪೋಟಿ ನಡೆಸಿರುವುದು ಹಾಸ್ಯಾಸ್ಪದ.

ಇಂಥ ವಿಪರ್ಯಾಸಕ್ಕೆ ಪಕ್ಕಾಗಿರುವ ಮರಾಠ ಕ್ಷತ್ರಿಯ ಪರಿಷತ್ ಮುಂತಾದ ಸಂಘಟನೆಗಳವರು ಛತ್ರಪತಿ ಶಿವಾಜಿ ಮಹಾರಾಜರ ಮನೆತನದ ಮೂಲಪುರುಷ ಬಳಿಯಪ್ಪ ಗವಳಿ ರಾಜ ಎಂಬುದನ್ನು ಅರಿತುಕೊಳ್ಳುವಲ್ಲಿ ಸೋಲುತ್ತಿದ್ದಾರೆ. ಶಿವಾಜಿ ಮಹಾರಾಜರನ್ನು ನಾವು ಶೂದ್ರರೆಂದು ಕರೆದಿಲ್ಲ. ಏಕೆಂದರೆ ನಾವು ಚತುರ್ವರ್ಣ ವರ್ಗೀಕರಣವನ್ನೇ ವಿರೋಧಿಸಿ ವರ್ಣಾನಾಂ ಕಿಂ ಪ್ರಯೋಜನಂ ? ಎಂದು ವ್ಯವಸ್ಥೆಯನ್ನು ಪ್ರತಿಭಟಿಸಿದ ಬಸವ ಪಥಿಕರು. ಛತ್ರಪತಿ ಶಿವಾಜಿ ಮಹಾರಾಜರು ಪಟ್ಟಾಭಿಷೇಕ ಮಾಡಿಸಿಕೊಳ್ಳಲೆಳಸಿದಾಗ ನಿರಾಕರಿಸಿ, ಶೂದ್ರನು ಕ್ಷತ್ರಿಯನಾಗಲಾರ ಎಂದು ಆಕ್ಷೇಪಿಸಿ, ಪಟ್ಟಾಭಿಷೇಕ ಮಾಡಲು ನಿರಾಕರಿಸಿದವರು ವೈದಿಕರು. ಅದಕ್ಕಾಗಿ ಮಹಾರಾಜರು ಬೇರೆ ಕಡೆಯಿಂದ ಗಾಗಾ ಭಟ್ಟನೆಂಬ ಪುರೋಹಿತನನ್ನು ಕರೆಸಿ, ಹೊಸ ಜಾತಕ, ಕಥೆ, ವಂಶಾವಳಿ ತಯಾರಿಸಬೇಕಾಯಿತು. ಇದು ಕ್ಷತ್ರಿಯತ್ವದ ಮೋಹದಿಂದಲ್ಲ. ಅಂದು ಪಟ್ಟಾಭಿಷೇಕ ಅನಿವಾರ್ಯವಾದ ಅಗತ್ಯವಾಯಿತು. ನಂತರ ಅವರು ಈ ಕೃತಕ ಕ್ಷತ್ರಿಯತ್ವದ ಬಗ್ಗೆ ಎಲ್ಲಿಯೂ ಮೋಹವನ್ನು ತಾಳಿಲ್ಲ ಎಂಬುದನ್ನು ಡಾ|| ಸರಜೂ ಕಾಟ್ಕರ್ ಬಹಳ ಹೃದಯಂಗಮವಾಗಿ ವಿವರಿಸಿದ್ದಾರೆ. ಡಾ|| ಆರ್.ಸಿ. ಢೇರೆ ಮತ್ತು ಡಾ|| ಸರಜೂ ಕಾಟ್ಕರ ಅವರ ಕೃತಿಗಳ ಸಾರಾಂಶವನ್ನು ಹೀಗೆ ವಿವರಿಸಬಹುದು.

1. ಗಾಗಾ ಭಟ್ಟನು ಕೃತಕವಾಗಿ ತಯಾರಿಸಿದ ವಂಶವೃಕ್ಷದಂತೆ ಛತ್ರಪತಿ ಶಿವಾಜಿ ಮಹಾರಾಜರು ರಾಜಸ್ಥಾನದ ಸಿಸೋದಿಯ ವಂಶದವರಲ್ಲ. ಆ ರಾಜರು ಕ್ಷತ್ರಿಯ ರಜಪೂತರಿದ್ದು ವೈಷ್ಣವ ಸಂಪ್ರದಾಯದ ಕೃಷ್ಣಭಕ್ತರು. ಶಿವಾಜಿ ಮಹಾರಾಜರ ಮನೆತನದ ಮೂಲ ಪುರುಷ ಬಳಿಯಪ್ಪ ಗವಳಿ ಕಾಯಕದವರು, ಮತ್ತು ಅಪ್ಪಟ ಶಿವ ಭಕ್ತರು.

2. ಶ್ರೀಶೈಲ ಮಲ್ಲಿಕಾರ್ಜುನ ಬಳಿಯಪ್ಪನವರ ಮನೆ ದೇವರು. ಅದರ ಪ್ರತೀಕವಾಗಿಯೇ ಶಿಖರ ಶಿಂಗಾರಾಪುರದಲ್ಲಿ ಬಳಿಯಪ್ಪನವರು ಶಂಭು ಮಹಾದೇವನ ಗುಡಿ ಕಟ್ಟಿಸಿದರು.

3. ಬಳಿಯಪ್ಪನವರು ಗವಳಿ ರಾಜ. ಅವರ ಬಳಿ ನೂರಾರು ಆಕಳು, ಎಮ್ಮೆ ಇದ್ದವು. ಶಿವಾಜಿ ಮೂಲ ಪುರುಷರು ರಾಜಸ್ಥಾನದವರೂ ಅಲ್ಲ ಸೌರಾಷ್ಟ್ರದವರೂ ಅಲ್ಲ. ಅಪ್ಪಟ ಕನ್ನಡ ನೆಲ ಗದಗ ಬಳಿಯ ಸೋರಟೂರಿನವರು.

4 ಸೋರಟೂರು ಸುತ್ತಮುತ್ತ 12 ವರ್ಷ ಸತತವಾಗಿ ಮಳೆಯಾಗದೆ ಭಯಂಕರವಾದ ಬರಗಾಲ ಬಂದಾಗ ಬಳಿಯಪ್ಪನ ಮನೆತನದವರು ಸೋರಟೂರು ತೊರೆದು ಮಹಾರಾಷ್ಟ್ರದ ಕಡೆಗೆ ನೀರು, ಹುಲ್ಲುಗಾವಲು ಅರಸಿ, ತಮ್ಮ ಪಶು ಸಂಪತ್ತಿನೊಡನೆ ವಲಸೆ ಹೋದರು.

5. ಇವರು ಯಾದವರು, ಅರ್ಥಾತ್ ಗೊಲ್ಲರು. ಹೊಯ್ಸಳ ಎಂಬ ಕನ್ನಡ ರಾಜರ ಅಡ್ಡ ಹೆಸರು 'ಭೋಸಲೆ' ಎಂದಾಗಿ ಬಳಿಯಪ್ಪನವರ ನಂತರದವರೊಡನೆ ಸೇರಿಕೊಂಡಿತು.

6. ಮಹಾರಾಜರು ತಮ್ಮ ಅಸಾಮಾನ್ಯ ಸಾಹಸ, ಚತುರತೆಯಿಂದ ಸಾಮ್ರಾಜ್ಯ ಕಟ್ಟಿದರೂ ಪಟ್ಟಗಟ್ಟಿಸಿಕೊಳ್ಳದ ಹೊರತು ಸಾಂಪ್ರದಾಯಿಕ ಮನ್ನಣೆ ಸಿಗದು ಎಂದು ಪಟ್ಟಾಭಿಷೇಕ ಮಾಡಿಸಿಕೊಳ್ಳಲು ಮುಂದಾದರು. ಛತ್ರಪತಿಯಾದ ನಂತರವೂ ಕೆಲವು ಕ್ಷತ್ರಿಯ ರಾಜರು ಅವರನ್ನು ಬೇರೆಯಾಗಿಯೇ ಕಾಣುತ್ತಿದ್ದರು. ಎಲ್ಲರಿಗೂ ಸಾಮಾನ್ಯ ಶತ್ರುವಾದ ಮೊಗಲರನ್ನು ಸ್ವದೇಶಿ ರಾಜರು ಒಗ್ಗಟ್ಟಾಗಿ ಎದುರಿಸಿದರೆ ಅವರು ಹಿಮ್ಮೆಟ್ಟುವರೆಂದು



ಮಹಾರಾಜರು ಕ್ಷತ್ರಿಯ ರಾಜರುಗಳಿಗೆ ಪತ್ರ ಬರೆದರೂ ಅವರು ತಿರಸ್ಕಾರದಿಂದ ಶಿವಾಜಿಯವರ ಆಹ್ವಾನ ತಿರಸ್ಕರಿಸಿದರು.

ಭಾರತ ದೇಶದೊಳಗಣ ವಿವಿಧ ಸಂಸ್ಥಾನಗಳವರು ತಮ್ಮ ತಮ್ಮಲ್ಲೇ ಯುದ್ಧ ಮಾಡಿ ಶಕ್ತಿಯನ್ನು ಹ್ರಾಸ ಮಾಡಿಕೊಳ್ಳುವುದರ ಜೊತೆಗೆ ಸ್ವದೇಶಿ ರಾಜರನ್ನು ಎದುರಿಸಲು ವಿದೇಶಿಯರ ಮಿತ್ರತ್ವ ಪಡೆಯುತ್ತಿದ್ದುದು ಈ ದೇಶದ ಮತ್ತೊಂದು ದುರಂತ. ಆಂತರಿಕ ಕಲಹಗಳಿಂದಲೇ ಭಾರತ ದೇಶವು ದುರ್ಬಲಗೊಂಡಿತಲ್ಲದೆ ನಿರಂತರವಾಗಿ ಪರಕೀಯರ ದಾಳಿಗೆ ಮತ್ತು ಆಳ್ವಿಕೆಗೆ ತುತ್ತಾಯಿತು ಎಂಬುದು ಅಷ್ಟೇ ಶೋಚನೀಯ ಸಂಗತಿ.

ಶಿಖರ ಶಿಂಗಣಾಪುರದ ಶಂಭು ಮಹಾದೇವ ಶಿವಾಜಿ ವಂಶಸ್ಥರ ಮನೆದೇವರು. ಈ ಜಾಡನ್ನು ಹಿಡಿದು ಹೊರಟ ಡಾ|| ಆರ್.ಸಿ. ಢೇರೆಯವರಿಗೆ ಸಿಕ್ಕ ಮಾಹಿತಿ ಅತ್ಯಂತ ಆಶ್ಚರ್ಯಕಾರಕ. ಅವರು ಕೇವಲ ನಂಬಿಕೆ, ಊಹೆಗಳ ಮೇಲೆ ಬರೆಯದೆ ಅಧಿಕೃತ ಅಧ್ಯಯನದೊಡನೆ ಬರೆದಿದ್ದಾರೆ. ಆದ್ದರಿಂದ ಮರಾಠಾ ಸಮಾಜವು ಛತ್ರಪತಿ ಶಿವಾಜಿ ಮಹಾರಾಜರ ಬಗ್ಗೆ ಗೌರವ ಭಾವ ಹುಟ್ಟಿಸುವ ಆ ಗ್ರಂಥವನ್ನು ಅರ್ಥಾತ್ ಢೇರೆಯವರ ಸಂಶೋಧನೆಯನ್ನು ಮೆಚ್ಚಿಕೊಳ್ಳಬೇಕು. ಪುಸ್ತಕವನ್ನು ನಿಷೇಧಿಸಬೇಕು ಎಂದು ಒತ್ತಾಯಿಸುವುದು ಸೂಕ್ತವಲ್ಲ ಮತ್ತು ನಾನು ಪ್ರತಿಪಾದಿಸಿದ ಕೆಲವು ವಿಚಾರಗಳಿಂದ ಮರಾಠಾ ಸಮಾಜಕ್ಕೆ ನೋವಾಗಿದೆ ಎಂದು, ಅದಕ್ಕಾಗಿ ನನ್ನ ಮಾತುಗಳನ್ನು ಹಿಂತೆಗೆದುಕೊಂಡು ಕ್ಷಮೆ ಕೇಳಬೇಕೆಂದು, ಇಲ್ಲವಾದರೆ ಬಹುದೊಡ್ಡ ಪ್ರತಿಭಟನಾ ರ್‍ಯಾಲಿಯನ್ನು ದಿನಾಂಕ 19ರಂದು ಹಮ್ಮಿಕೊಳ್ಳಲಾಗುವುದೆಂದು ಪತ್ರಿಕೆಗಳಲ್ಲಿ ಹೇಳಿಕೆ ನೀಡಿದ್ದಾರೆ. ಕನ್ನಡ ನಾಡಿನಲ್ಲಿರುವ ಮರಾಠ ಸಮಾಜದವರು ಢೇರೆಯವರ ಸಂಶೋಧನೆಯ ಬಗ್ಗೆ ಸಂತೋಷಪಡಬೇಕೇ ವಿನಾ ನೋವು ಪಡುವ ಅವಶ್ಯಕತೆಯಿಲ್ಲ.

1. ಶಿವಾಜಿ ಮಹಾರಾಜರ ಮೂಲಪುರುಷರನ್ನು ದೂರದ ರಾಜ್ಯವಾದ ರಾಜಸ್ಥಾನದಿಂದಾಗಲಿ, ಗುಜರಾತಿನಿಂದಾಗಲೀ (ಸೌರಾಷ್ಟ್ರ) ಕರೆತರುವುದಕ್ಕಿಂತ ಪಕ್ಕದ ರಾಜ್ಯವೇ ಆದ ಕರ್ನಾಟಕ ರಾಜ್ಯದ ಗದಗ ಸಮೀಪದ ಸೋರಟೂರಿನವರು ಎಂಬುದು ಸಂತೋಷ ಮತ್ತು ಹೆಮ್ಮೆಯ ಸಂಗತಿಯಲ್ಲವೆ?

2. ಶಿವಾಜಿ ಮಹಾರಾಜರ ಮೂಲಪುರುಷರಾದ ಬಳಿಯಪ್ಪ ಗವಳಿ ಕುಲ ಅಥವಾ ಉದ್ಯೋಗದವರಾಗಿದ್ದರು ಎಂದು ನಾನು ಹೇಳಿದುದು ಮರಾಠಾ ಸಮಾಜಕ್ಕೆ ನೋವನ್ನುಂಟು ಮಾಡಬೇಕೇಕೆ ?ಅದು ಅತ್ಯಂತ ಪರಿಶುದ್ಧ ಕಾಯಕ. ವರ್ಣಾಶ್ರಮ ವ್ಯವಸ್ಥೆ ಎಲ್ಲವನ್ನೂ ತಿರುಗಾಮುರುಗವಾಗಿ ಭಾವಿಸಿದೆ. ಶೂದ್ರರು ಎನ್ನಿಸಿಕೊಂಡವರು ಮಾಡುವ ಕೃಷಿ, ಹೈನುಗಾರಿಕೆ, ಕುಂಬಾರಿಕೆ, ಕಮ್ಮಾರಿಕೆ ಇತ್ಯಾದಿ ಅತ್ಯಂತ ಜೀವನಾವಶ್ಯಕ ಕಾಯಕಗಳು, ಕ್ಷತ್ರಿಯನ ಶಸ್ತ್ರಕಾಯಕ, ಪುರೋಹಿತನ ಪೂಜಾರಿಕೆ ಇಲ್ಲದೆ ಸಮಾಜ ಬದುಕಬಲ್ಲುದು. ಕೃಷಿ, ಹೈನುಗಾರಿಕೆ, ಮಡಿವಾಳಿಕೆ ಇತ್ಯಾದಿ ಇಲ್ಲದೆ ಸಮಾಜವು ಬದುಕಲಾರದು. ಅಂಥ ಕಾಯಕಗಳನ್ನು ವೈದಿಕರು ಕೀಳೆಂದು ಕರೆದರೆ ನಾವೇಕೆ ಹಾಗೆ ಭಾವಿಸಬೇಕು ?

2. ನೂರಾರು ಆಕಳು, ಎಮ್ಮೆ, ಎತ್ತು ಇತ್ಯಾದಿ ಹೊಂದಿದ್ದ ಗವಳಿ ರಾಜ ಬಳಿಯಪ್ಪನವರು ಸತತವಾಗಿ 12 ವರ್ಷ ಮಳೆಯಾಗದೆ ಭಯಂಕರ ಬರ ಬಂದಾಗ ತಮ್ಮ ಪಶುಸಂಪತ್ತಿನೊಡನೆ ನೆಲ, ನೀರನ್ನು ಅರಸುತ್ತ ಮಹಾರಾಷ್ಟ್ರದ ಕಡೆ ಬಂದು, ಶಿಖರ ಸಿಂಗಣಾಪುರದ ಬಳಿ ಬೀಡುಬಿಟ್ಟರು.

3.ನಾನು ನನ್ನ ಭಾಷಣದಲ್ಲಿ ಶಿವಾಜಿ ಮಹಾರಾಜರನ್ನು ಶೂದ್ರರೆಂದು ಕರೆದು ಅವಮಾನ ಮಾಡಿದ್ದೇನೆ ಎಂದು ಕೆಲವರು ಮರಾಠಾ ಮುಖಂಡರು ಆಕ್ಷೇಪಿಸಿ ಪತ್ರಿಕಾ ಹೇಳಿಕೆ ಕೊಟ್ಟರು.

ನಾವು ಅಂದರೆ ಬಸವ ಪಥಿಕರು, ಯಾರನ್ನೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಸ್ಪೃಶ್ಯ ಎನ್ನುವುದಿಲ್ಲ ಶಿವಾಜಿ ಮಹಾರಾಜರನ್ನು ಹಾಗೆಂದು ಅವಮಾನಿಸಿದವರು ವೈದಿಕರು.

ಸ್ವಂತ ಶಕ್ತಿ ಪ್ರತಿಭೆಯ ಬಲದಿಂದ ಶಿವಾಜಿ ಮಹಾರಾಜರು "ಮಾವಳ" ಎಂಬ ಸ್ಥಳೀಯ ಯುವಕರನ್ನು ಹುರಿದುಂಬಿಸಿ, ಸೈನ್ಯವನ್ನು ಕಟ್ಟಿ ಶತ್ರುರ್‍ಾಜರು ಈ ತರುಣ ಶಕ್ತಿಯ ಕ್ಷಾತ್ರ ತೇಜವನ್ನು "ಬೆಟ್ಟದ ಇಲಿ" ಎಂದು ವ್ಯಂಗ್ಯವಾಡಿದರೂ ನಂತರ ಅದೇ ಶಕ್ತಿ ಬೆಟ್ಟದ ಹುಲಿಯಾಗಿ ಗರ್ಜಿಸಿದಾಗ ತತ್ತರಿಸಿ ಹೋದರು. ಯಶಸ್ಸಿನ ಹಾದಿಯಲ್ಲಿ ನಡೆದ ಶಿವಾಜಿ ಮಹಾರಾಜರು ವಿಧ್ಯುಕ್ತವಾಗಿ ಪಟ್ಟಾಭಿಷೇಕ ಮಾಡಿಸಿಕೊಳ್ಳಬೇಕು ಎಂದಾಗ ಅವರದೇ ಋಣ ತಿನ್ನುತ್ತ ಅವರ ಆಶ್ರಯದಲ್ಲೇ ಇದ್ದ ಬ್ರಾಹ್ಮಣ ಪಂಡಿತರು ಶಿವಾಜಿ ಜನ್ಮತಃ ಕ್ಷತ್ರಿಯ ಕುಲ ಸಂಜಾತರಲ್ಲ, ಶೂದ್ರರು ಎಂದುದಲ್ಲದೆ ಅವರು ಪಟ್ಟಾಭಿಷೇಕಕ್ಕೆ ಅನರ್ಹರು ಎಂದರು. ಇದರಿಂದ ಶಿವಾಜಿ ಮಹಾರಾಜರಿಗೆ ಎಂತಹ ದುಃಖ, ಮಾನಸಿಕ ಆಘಾತ ಮತ್ತು ಆತ್ಮಾಭಿಮಾನಕ್ಕೆ ಪೆಟ್ಟು ಆಗಿರಬಹುದು ? ಇದನ್ನು ಮರಾಠ ಮುಖಂಡರು ಅರಿತುಕೊಳ್ಳಬೇಕು.

ಸಾಮಾಜಿಕ, ರಾಜಕೀಯ ಸ್ಥಾನ ಮಾನ ಅನಿವಾರ್ಯವಾಗಿ ಬೇಕಾಗಿತ್ತು. ಆಗ ಶಿವಾಜಿ ಮಹಾರಾಜರು ಉತ್ತರದಿಂದ ಗಾಗಾ ಭಟ್ಟನೆಂಬ ಬ್ರಾಹ್ಮಣ ಪಂಡಿತನನ್ನು ಕರೆಸಿದರು. ಆತ ಹೊಸದಾಗಿ ಕುಂಡಲಿ, ಜಾತಕ, ವಂಶವೃಕ್ಷ ತಯಾರಿಸಿ ಶಿವಾಜಿ ಮಹಾರಾಜರ ಮೂಲ ಪುರುಷರು ರಾಜಸ್ಥಾನದಿಂದ ವಲಸೆ ಬಂದ ಕ್ಷತ್ರಿಯರು. ಸಿಸೋದಿಯ ಎಂಬ ರಾಜವಂಶಕ್ಕೆ ಸೇರಿದವರು ಎಂದು ಕೃತಕ ಚರಿತ್ರೆಯನ್ನು ತಯಾರಿಸಿದನು. ಇಷ್ಟಕ್ಕೆ ಆತ ಸಮಾಧಾನಗೊಳ್ಳದೆ ಶೂದ್ರನನ್ನು ಕ್ಷತ್ರಿಯರನ್ನಾಗಿ ಮಾಡಲು ಎಂತಹ ಕಸರತ್ತು ಮಾಡಿ ಭಂಡಾರವೇ ಖಾಲಿಯಾಗುವಂತೆ ಮಾಡಿದನು. ಇದನ್ನು ಡಾ|| ಸರಜೂ ಕಾಟಕರ್ ಸವಿವರವಾಗಿ ಚಿತ್ರಿಸಿದ್ದಾರೆ ಮಾತ್ರವಲ್ಲ ನಾನೂ ಈ ಮೊದಲು ಓದಿದ ಕೆಲವು ಪುಸ್ತಕಗಳ ಮೂಲಕ ವೈದಿಕರ ಹಗರಣದ ಬಗ್ಗೆ ತಿಳಿದಿದ್ದೆ.

ಶಿವಾಜಿ ಮಹಾರಾಜರು ಈ ಕೃತಕ ಕ್ಷತ್ರಿಯತ್ವಕ್ಕೆ ಏಕೆ ಕೈಹಾಕಿದರು ? ಒಂದನೆಯದಾಗಿ ಅವರಿಗೆ ಪಟ್ಟಾಭಿಷೇಕ ಅನಿವಾರ್ಯ ಅಗತ್ಯವಾಗಿತ್ತು. ಸಂಪ್ರದಾಯ ಬದ್ಧ ಸಮಾಜದಿಂದ ಮನ್ನಣೆ ಸಿಗಬೇಕಾದರೆ ಅದು ಅವಶ್ಯವೆನಿಸಿತ್ತು. ಅಂಥ ಕ್ಷತ್ರಿಯತ್ವವನ್ನು ಪಡೆದ ಬಳಿಕವೂ ಸಹ ಅಂದರೆ 1. ಅರ್ಹತೆ 2. ವಿಧ್ಯುಕ್ತ ಕ್ಷತ್ರಿಯತ್ವ - ಎರಡನ್ನು ಹೊಂದಿದ ನಂತರವೂ ಸಹ ಸಾಂಪ್ರದಾಯಿಕ ಕ್ಷತ್ರಿಯ ರಾಜರು ಶಿವಾಜಿ ಮಹಾರಾಜರನ್ನು ನಿಜ ಕ್ಷತ್ರಿಯ ಎಂಬುದಾಗಿ ಗೌರವಿಸಲಿಲ್ಲ. ಇದನ್ನು ನೋಡಿದಾಗ ಭಾರತೀಯ ವೈದಿಕ ಸಾಮಾಜಿಕ ವ್ಯವಸ್ಥೆ ಎಷ್ಟು ಅಸಂಗತ ಮತ್ತು ಅಮಾನವೀಯ ಎನ್ನಿಸದಿರದು.

ಎರಡನೆಯದಾಗಿ ಶಿವಾಜಿ ಮಹಾರಾಜರು (ನಂತರ ಆಗಿ ಹೋದ ಛತ್ರಪತಿ ಶಾಹು ಮಹಾರಾಜರಂತೆ) ಸಮಾಜ ಸುಧಾರಕರಲ್ಲ. ಯಥಾ ಸ್ಥಿತಿಯಲ್ಲಿಯೇ ಹಿಂದು ಸಂಸ್ಕೃತಿಯನ್ನು ಸಂರಕ್ಷಿಸುವ ಧ್ಯೇಯ ಹೊತ್ತವರು. ಆದ್ದರಿಂದ ಅವರು ವ್ಯವಸ್ಥೆಯಲ್ಲಿನ ಕುಂದುಕೊರತೆ ಲೋಪ ದೋಷಗಳನ್ನು ಪ್ರಶ್ನಿಸಲು ಹೋಗಲಿಲ್ಲ. ಆದರೆ ನಂತರದಲ್ಲಿ ಅವರು ಈ ಕೃತಕ ಕ್ಷತ್ರಿಯತ್ವದ ಬಗ್ಗೆ ಹೆಚ್ಚಿನ ಅಭಿಮಾನವನ್ನೇನೂ ತಾಳಿರಲಿಲ್ಲ ಎಂಬುದನ್ನು ಡಾ|| ಸರಜೂ ಕಾಟಕರ್ ಸಾಕಷ್ಟು ವಿವರಗಳೊಡನೆ ಬರೆದಿದ್ದಾರೆ.

ಈಗಿನ ಮರಾಠ ಸಂಘ ಸಂಸ್ಥೆಗಳವರು ಪುನಶ್ಚಿಂತನೆ ಮಾಡಬೇಕಾದ ಸಮಯ ಸನ್ನಿಹಿತವಾಗಿದೆ. ಮಹಾರಾಷ್ಟ್ರದಲ್ಲಿ ಅಂಥ ಒಂದು ಚಳುವಳಿ ಆರಂಭವಾಗಿದೆ ಎಂದು ಬಹಳ ಜನರು ನನಗೆ ಹೇಳಿದ್ದಾರೆ. ಸಾಮಾನ್ಯವಾಗಿ ಯಾವುದೇ ಅದಕ್ಕಾಗಿ ರಾಜರಿಗೆ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಸ್ಥಾನ ಮಾನ ಅನಿವಾರ್ಯವಾಗಿ ಬೇಕಾಗುತ್ತದೆ. ಶಿವಾಜಿ ಮಹಾರಾಜರು ಉತ್ತರದಿಂದ ಗಾಗಾಭಟ್ಟನ್ನು ಕರೆಸಿಕೊಂಡರು. ಭಾಷೆಯ ಹೆಸರಿನ ಮೇಲೆ ಜಾತಿ ಪಂಗಡಗಳು ಇಲ್ಲ. ಉದಾಹರಣೆಗೆ ಕನ್ನಡಿಗರು, ತಮಿಳರು, ತೆಲುಗರು ಇತ್ಯಾದಿ. ಆದರೆ ಮರಾಠಾ ಎಂಬ ಒಂದು ಪಂಗಡ ಇರುವುದು, ಅವರನ್ನು ಸಾಂಪ್ರದಾಯಿಕವಾಗಿ 'ಶೂದ್ರ'ರ ಗುಂಪಿನಲ್ಲಿ ವರ್ಣಾಶ್ರಮಿ





ವೈದಿಕರು ಸೇರಿರುವುದು ಅರಿತುಕೊಳ್ಳಬೇಕಾದ ಸಂಗತಿ.

ನಾನು ಈವರೆಗೆ ಮರಾಠಿ ಮಾತನಾಡುವವರೆಲ್ಲ ಮರಾಠರು ಎಂಬ ತಪ್ಪು ಕಲ್ಪನೆ ಹೊಂದಿದ್ದು, ಈಗ ಅದು ನಿವಾರಣೆಯಾಗಿ, ಮರಾಠಿ ಮಾತನಾಡುವ ಜನರಲ್ಲಿ ಎಲ್ಲ ಜಾತಿಜನಾಂಗಗಳು ಇರುವುದೇ ಅಲ್ಲದೇ ಮರಾಠಾ ಎನ್ನುವ ಒಂದು ಪಂಗಡವೂ ಇದೆ ಎಂಬುದನ್ನು ತಿಳಿದುಕೊಂಡೆ. ನಮ್ಮ ಅನುಯಾಯಿಗಳಲ್ಲಿ ಬಹಳ ಜನ ಮರಾಠಾ ಇದ್ದಾರೆ. ಮೊನ್ನೆ ಅವರೊಡನೆ ಮಾತನಾಡುತ್ತ ನಿಮ್ಮ ಶಿವಾಜಿ ನಮ್ಮವರೂ ಕೂಡ ಎಂದು ಅಭಿಮಾನದಿಂದ ನಾನು ನುಡಿದಾಗ ಅವರು ಹೇಳಿದರು, "ನಾವು ಭಾವೂಸಾರ ಕ್ಷತ್ರಿಯ ಆ ಮರಾಠರೊಡನೆ ಹೆಣ್ಣು-ಗಂಡು ವ್ಯವಹಾರ ಮಾಡುವುದಿಲ್ಲ. ನಮಗಿಂತ ಕೆಳಗಿನವರು ಎಂದು ಭಾವಿಸಲಾಗುತ್ತದೆ. "ಎಂದು ಕೆಲವರು ತಟ್ಟನೆ ಉತ್ತರಿಸಿದಾಗ ನನಗೆ ಆಶ್ಚರ್ಯವಾಯಿತು.

ಮನು ಆಧಾರಿತ ವೈದಿಕ ವರ್ಣಾಶ್ರಮ ಸಾಮಾಜಿಕ ವ್ಯವಸ್ಥೆಯು 5 ಪ್ರಕಾರವಾಗಿ ಜನರನ್ನು ವರ್ಗೀಕರಿಸುತ್ತದೆ.

1. ಬ್ರಾಹ್ಮಣ : ಪೂಜೆ, ಯಜ್ಞ-ಯಾಗ, ವೇದಾಧ್ಯಯನ, ಶಾಸ್ತ್ರಪರಿಣತಿ ಇತ್ಯಾದಿ
2. ಕ್ಷತ್ರಿಯ : ಶಸ್ತ್ರಪರಿಣತಿ, ಯುದ್ಧ, ದೇಶರಕ್ಷಣೆ
3. ವೈಶ್ಯ : ಮುಖ್ಯವಾಗಿ ವ್ಯಾಪಾರ
4. ಶೂದ್ರ : ಶಾರೀರಿಕ ಶ್ರಮದಿಂದ ಕೂಡಿದ ಕೃಷಿ, ಹೈನುಗಾರಿಕೆ, ಮಡಿವಾಳಿಕೆ, ಕುರಿ ಸಂಗೋಪನೆ ಇತ್ಯಾದಿ
5. ಪಂಚಮ ವರ್ಣೀಯ : ಅಸ್ಪೃಶ್ಯ, ಶರೀರ ಮಾಲಿನ್ಯತೆಯ ಮುಖ್ಯವಾಗಿ ಮಾಡುವ ಉದ್ಯೋಗ

ಇವನ್ನು ಸ್ವಧರ್ಮ ಎಂದು ಕರೆದು ಆಯಾ ಜಾತಿ ಕುಲಗಳಲ್ಲಿ ಹುಟ್ಟಿದವರೇ ಅವರಿಗೆ ವಿಧಿಸಿರುವ ಕಾಯಕವನ್ನೇ ಮಾಡಬೇಕು ಎಂಬ ನಿರ್ಬಂಧ ವಿಧಿಸಲಾಗಿತ್ತು. ಈ ಸಮಾಜ ಶಾಸ್ತ್ರದನ್ವಯ ಶೂದ್ರ ವರ್ಣೀಯರಾದ ಶಿವಾಜಿ ಕ್ಷತ್ರಿಯರಿಗೆ ಮೀಸಲಾದ ರಾಜತ್ವವನ್ನು ಹೊಂದಲಾರರು ಎಂಬುದು ವೇದ ಪಂಡಿತರ ನಿರ್ಣಯವಾಗಿದ್ದಿತು. ಈ ಕಟು ಸತ್ಯವನ್ನು ಅರಿತುಕೊಂಡು ಶಿವಾಜಿಯವರ ಪಾರಂಪರಿಕ ಸಮೂಹವು ಶೂದ್ರರೇಕೆ ಕೀಳು ? ಎಂದು ಪ್ರತಿಭಟನೆಯ ಸೊಲ್ಲು ಎತ್ತಬೇಕೇ ವಿನಾ ಕೃತಕ ಕ್ಷತ್ರಿಯತ್ವಕ್ಕೆ ಏಕೆ ಹೋರಾಡಬೇಕು ?

ನನಗೆ ಈ ಸಂದರ್ಭದಲ್ಲಿ ಆಶ್ಚರ್ಯವನ್ನು ಉಂಟು ಮಾಡುವ ಸಂಗತಿ ಏನೆಂದರೆ ಕೃತಕ ಕ್ಷತ್ರಿಯತ್ವಕ್ಕೆ ಹಾತೊರೆಯುವ ಮರಾಠಾ ಸಂಘ-ಸಂಸ್ಥೆಗಳಿಗೆ ಛತ್ರಪತಿ ಶಿವಾಜಿ ಮಹಾರಾಜ ನಂತರ ರಾಜರ್ಷಿ ಶಾಹು ಮಹಾರಾಜರು ಪಟ್ಟ ಮಾನಸಿಕ ವೇದನೆ ಏಕೆ ಅರ್ಥವಾಗುತ್ತಿಲ್ಲ ಎಂಬುದು. ಇಂದಿನ ವೈಚಾರಿಕ ಯುಗದಲ್ಲಿ ಸಹ ಅವರು ಕೃತಕ ಕ್ಷತ್ರಿಯತ್ವಕ್ಕೆ ಹಾತೊರೆಯುತ್ತಿರುವುದು ಸೋಜಿಗದ ಸಂಗತಿ.

( ಶಿವಾಜಿ ಮಹಾರಾಜರ ಮೂಲ ಪುರುಷರು ವೀರಶೈವ -ಲಿಂಗಾಯತರೇ ? ಎಂಬ ಬಗ್ಗೆ ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು.)

## ಗುರು ಸಮರ್ಥ ರಾಮದಾಸರ ಮೆಚ್ಚುಗೆ

ನಿಶ್ಚಯದ ಮಹಾಪರತ್ವ, ಬಹುಜನರ ಆಧಾರಸ್ತಂಭ, ಸಿಂಹಾಸನಕ್ಕೆ ಬಾಧ್ಯಸ್ಥನಾಗಿದ್ದರೂ ಯೋಗಿಯಂತೆ ಜೀವಿಸಿದವ; ಯಶವಂತನು, ಕೀರ್ತಿವಂತನು, ಸಮರ್ಥ್ಯವಂತನು, ಪುಣ್ಯವಂತನು, ನೀತಿವಂತನು ಆಗಿರುವ ಜಾಣ ಅರಸನು ಶಿವರಾಯ ರೂಪವನ್ನು ಸ್ಮರಿಸಬೇಕು; ಶಿವರಾಯನ ಪ್ರತಾಪವನ್ನು ಸ್ಮರಿಸಬೇಕು. ಶಿವರಾಯನ ಸಾಕ್ಷೇಪವನ್ನು ಜಗತ್ತಿನ ಜನರೆಲ್ಲರೂ ಸ್ಮರಿಸಬೇಕು. ಶಿವರಾಯನ ಮಾತು, ಶಿವರಾಯನ ಕೃತಿ ಇವುಗಳು ಜಗತ್ತಿಗೆಲ್ಲ ಮಾದರಿಯಾದವುಗಳು. ಸಮಸ್ತ ಸುಖಗಳನ್ನು ತ್ಯಾಗ ಮಾಡಿದ ಧರ್ಮ ಸ್ಥಾಪನೆಗೆ ಅವಿರತ ಹೋರಾಡಿದ ಶಿವ ಪ್ರಭು.

## ಸಾಧನೆಗೆ ಹೊರಟ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿಯವರಿಗೆ ಹೃದಯ ಸ್ಪರ್ಶಿ ಬೀಳ್ಕೊಡುಗೆ

ಶರಣ ವಾರ ,ದಿ. 11-11-2006ರಂದು ಬೆಂಗಳೂರು ಬಸವ ಮಂಟಪದಲ್ಲಿ ಒಂದು ಹೃದಯ ಸ್ಪರ್ಶಿ ಬೀಳ್ಕೊಡುಗೆ. ಶೂನ್ಯ ಪೀಠಾಧೀಶ ಅಲ್ಲಮ ಪ್ರಭು ದೇವರು ಶೂನ್ಯ ಪೀಠಾರೋಹಣವಾದ ಕೆಲವು ಸಮಯದ ನಂತರ ಒಮ್ಮೆ ಸಂಚಾರ ಹೊರಡುವರು. ಆಗ ಎಲ್ಲಾ ಶರಣರು ಅತ್ಯಂತ ನೋವಿನಿಂದ ಬೀಳ್ಕೊಡುವರು. ಇಂಥ ಒಂದು ಪ್ರಸಂಗ ಜರುಗಿತು. ಗಣಾಚಾರ ದಳದ ಹುಡುಗರಿಗೂ ಪೂಜ್ಯ ಅಲ್ಲಮ ಪ್ರಭು ಸ್ವಾಮೀಜಿಯವರಿಗೂ ಬಹಳ ಆತ್ಮೀಯತೆ. ಪೂಜ್ಯ ಮಾತಾಜಿಯವರ ಹತ್ತಿರ ಮನ ಬಿಚ್ಚಿ ಮಾತನಾಡಲಾರದವರು ಪೂಜ್ಯ ಅಲ್ಲಮ ಪ್ರಭು ಸ್ವಾಮೀಜಿಯವರ ಜೊತೆ ಹರಟುತ್ತೇವೆ. ಒಂದು ದಿವಸ ಮಾತನಾಡುವಾಗ ನಾನು ಹೇಳಿದೆ, "ಸ್ವಾಮೀಜಿ, ಸಂಘಟನಾ ಕಾರ್ಯವನ್ನು ತೀವ್ರಗೊಳಿಸಬೇಕು." ಆಗ ಸ್ವಾಮೀಜಿ ನುಡಿದರು "ನನಗೆ ಅದರಲ್ಲಿ ಆಸಕ್ತಿಯಿಲ್ಲ .ಯೋಗ ಸಾಧನೆಯನ್ನು ತೀವ್ರಗೊಳಿಸಬೇಕು. ವಚನ ಸಾಹಿತ್ಯ ಒಂದು ವಿಶಾಲ ಸಾಗರ .ಹೆಚ್ಚು ಅಧ್ಯಯನ ಮಾಡಬೇಕು ಎಂಬ ಹಂಬಲವಿದೆ."

ಶರಣೆ .ಲೀಲಾವತಿಯವರಂಥ ಕಾರ್ಯಕರ್ತರು ಪೂಜ್ಯ ಮಾತಾಜಿಯವರ ಗಮನಕ್ಕೆ ಈ ವಿಷಯವನ್ನು ತಂದರು .ಒಬ್ಬೊಬ್ಬರು ಒಂದೊಂದು ದಿಶೆಯಲ್ಲಿ ಅನುಷ್ಠಾನ ಮಾಡಬೇಕು ; ಪ್ರಯೋಗಕ್ಕೆ ಒಳಪಡಿಸಬೇಕು. ಅಂತರ್ಮುಖಿ ಪ್ರವೃತ್ತಿಯವರಿಗಷ್ಟೆ ಯೋಗಾಭ್ಯಾಸದಲ್ಲಿ ಹೆಚ್ಚಿನ ಆಸಕ್ತಿ ಆದ್ದರಿಂದ ಶರಣರ ಲಿಂಗಾಂಗಯೋಗದ ಸಾಧನೆಯಲ್ಲಿ ತೊಡಗುವುದು ಅಷ್ಟೇ ಅಗತ್ಯ ಎಂಬುದನ್ನು ಪೂಜ್ಯ ಮಾತಾಜಿಯವರು ಮನಗಂಡರು . ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮೀಜಿಯವರ ಹಂಬಲಕ್ಕೆ ಸ್ಪಂದಿಸಿದರು. ಆದರೆ ಶರಣ ಬಂಧುಗಳಿಗೆ ಇದು ಇಷ್ಟವಿಲ್ಲ .ಪೂಜ್ಯ ಮಾತಾಜಿ ಎಲ್ಲರಿಗೂ ಕರೆ ನೀಡಿದರು, "ಅಲ್ಲಮ ಪ್ರಭು ದೇವರು ಶೂನ್ಯಪೀಠಾರೋಹಣದ ನಂತರ ಒಮ್ಮೆ ಸಂಚಾರ ಕೈಗೊಳ್ಳಲಿಲ್ಲವೆ? ಮಹಾರಾಷ್ಟ್ರ, ಗೋವಾ, ಆಂಧ್ರ, ಶ್ರೀಶೈಲದ ಕದಳಿಬನ ಈ ಎಲ್ಲವನ್ನು ಸಂಚಾರ ಮಾಡಿರಲ್ಲಿಲ್ಲವೆ ? ಬಸವ ಯೋಗದ ಪಥದಲ್ಲಿ ಆಳವಾದ ಸಾಧನೆ ಮಾಡುವುದು ಅತ್ಯಗತ್ಯವಾಗಿದೆ. ಭಾವುಕರಾಗದೆ ಅದಕ್ಕೆ ಅವಕಾಶ ಕೊಡಿ ." ಎಂದು ಹೇಳಿದರಲ್ಲದೆ, ಪೂಜ್ಯ ಸ್ವಾಮೀಜಿಯವರನ್ನು 3 ಸಂಕಲ್ಪಗಳೊಡನೆ ಹರಸಿದರು.

1. ಬಸವ ಯೋಗದ ಮಾರ್ಗದಲ್ಲಿ ಪರಿಣತಿ ಸಾಧಿಸಲಿ.
2. ವಚನ ಸಾಹಿತ್ಯದ ಆಳವಾದ ಅಧ್ಯಯನ ಮಾಡಿ,ಸಾಹಿತ್ಯ ಬರೆಯಲಿ .
3. ಇಂಗ್ಲೀಷ್ ಪ್ರಾವೀಣ್ಯತೆ ಸಾಧಿಸಿ, ವಿದೇಶಗಳಿಗೂ ಹೋಗಿ ಧರ್ಮ ಪ್ರಚಾರ ಮಾಡುವಂತಾಗಲಿ.

ಪೂಜ್ಯ ಸ್ವಾಮೀಜಿಯವರಿಗೆ ಪುಷ್ಪವೃಷ್ಟಿ, ಆರತಿ ಮಾಡಿ ಶರಣರು ಹರಸಿದರು. ಪೂಜ್ಯ ಮಾತಾಜಿ ಬಸವ ರಕ್ಷೆ ಹೊದಿಸಿದರು. ಉನ್ನತ ಗುರಿಯತ್ತ ಸಾಗಲೆಂಬ ಹರಕೆಯೊಡನೆ ಸಂತೋಷ, ಪ್ರತಿವಾರವು ಸಿಗುತ್ತಿದ್ದ ಸ್ವಾಮೀಜಿಯವರ ಪ್ರವಚನ ಇನ್ನೂ ಅಪರೂಪಕ್ಕೊಮ್ಮೆ ಎಂಬ ವಿಷಾದ ಎರಡೂ ಮೇಳೈಸಿ ಪೂಜ್ಯರನ್ನು ಬೀಳ್ಕೊಡಲಾಯಿತು. ಯೋಗ ಸಾಧನೆಗೆ ತೊಡಗುವ ಮುನ್ನ ಧರ್ಮಪಿತ ಬಸವಣ್ಣನವರ ಕೃಪಾಶೀರ್ವಾದ ಪಡೆಯುವ ಉತ್ಕಟೇಚ್ಛೆಯೊಡನೆ ಪೂಜ್ಯ ಸ್ವಾಮೀಜಿಯವರು ಧರ್ಮಕ್ಷೇತ್ರ ಕೂಡಲ ಸಂಗಮದ ಮಹಾಮನೆಗೆ ಬೆಂಗಳೂರಿನಿಂದ ಪ್ರಯಾಣ ಬೆಳೆಸಿದರು. ಯೋಗಾಭ್ಯಾಸಕ್ಕೆ ಯಾವ ಸ್ಥಳ ಸೂಕ್ತ ಎಂಬುದನ್ನು ಧರ್ಮ ಪಿತರ ಪ್ರೇರಣೆಯಿಂದ ಆಯ್ಕೆ ಮಾಡಲಿದ್ದಾರೆ.

-ಸಚ್ಚಿದಾನಂದ ,ಗಣಾಚಾರ ದಳ, ಬೆಂಗಳೂರು.




॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥


ಧರ್ಮಗುರು ಬಸವಣ್ಣ

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಇಪ್ಪತ್ತನೆಯ


ಗಣ ಧ್ವಜ

# ಶರಣ ಮೇಳ

### 2007ರ ಜನವರಿ 11, 12, 13, 14 ಮತ್ತು 15 ರಂದು

ಮಹಾಮಾನವತಾವಾದಿ ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮ ಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳು ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು . ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ ಕೂಡಲ ಸಂಗಮದಲ್ಲಿ ಲಿಂಗಾಯತ (ಬಸವ) ಧರ್ಮೀಯರು ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14 ,15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು . ಮೊಟ್ಟಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹ ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿ ವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತನೆಯ ಶರಣ ಮೇಳವು 2007ರ ಜನವರಿ 11,12,13,14, ಮತ್ತು 15 ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣ ಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಗ್ಗೆ 10 ರಿಂದ ಧ್ವಜಾರೋಹಣ , ಪಥ ಸಂಚಲನ , ಸಮುದಾಯ ಪ್ರಾರ್ಥನೆ ಇರುತ್ತದೆ.(ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.) ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40,30,20 ಮತ್ತು 10ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ , ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ ,ಉಪನ್ಯಾಸ, ಧಾರ್ಮಿಕ ರಸ ಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ. ದಿ.11 ಮತ್ತು 12ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ - ಧರ್ಮಗಳಿಗೆ ಸಂಭಂದ ಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶ ವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪಾಲ್ಗೊಳ್ಳಿರಿ.

## ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರು ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರ ರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ 10 ನೆಯ ದಿನಾಂಕ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುತ್ತದೆ. ಬೆಳಗಿನ ಉಪಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು.
3. ದಾನಿಗಳು : 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು : 500 ರೂ.
5. ಸ್ವಾಗತ ಸಮಿತಿ ಸದಸ್ಯತ್ವ : 250 ರೂ.
6. ಪ್ರತಿನಿಧಿ ಶುಲ್ಕ : 125 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/ 10000 ರೂಪಾಯಿಗಳ ಪುದುವಟ್ಟು(F.D.) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ" ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲೀ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.


ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕುಕೂಲತೆ ಇದ್ದರೂ ಶರಣ ಮೇಳದ (ಜನವರಿ 14 ರಂದು ನಡೆಯುವ) ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡದು ತನ್ನ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

### ಶರಣರ ಬರುವೆಮಗೆ ಪ್ರಾಣ ಜೀವಾಳ

1. ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-23325335/23322790

2. ಪೂಜ್ಯ ಶ್ರೀ ಮಹಾಜಗದ್ಗುರು
ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟೆ






ಬೆಳಕುಣಿ ಚೌಧರಿ ಗ್ರಾಮಕ್ಕೆ ಆಗಮಿಸಿದಾಗ ಟ್ರಾಕ್ಟರ್ ಮೇಲೆ
ಪೂಜ್ಯ ಮಾತಾಜಿಯವರ ಭವ್ಯ ಮೆರವಣಿಗೆ



ಬೆಳಕುಣಿ ಚೌಧರಿ ಗ್ರಾಮಸ್ಥರಿಂದ
ಪೂಜ್ಯ ಮಾತಾಜಿಯವರಿಗೆ ಭಕ್ತಿಪೂರ್ಣ ಸ್ವಾಗತ, ದಿ.11-10-2006

CPMG/KA/BGW - 50/2006-2008 WPP(W)-17 R.No.19980/70



ಬೆಳಕುಣಿ ಚೌಧರಿಯಲ್ಲಿ ಬಸವ ಜ್ಯೋತಿ ಕಾರ್ಯಕ್ರಮದ ಉದ್ಘಾಟನೆ
ಮಾಜಿ ಸಚಿವ ಗುರುಪಾದಪ್ಪ ನಾಗ್ಮಾರಪಳ್ಳಿ ಅವರಿಂದ ದಿ. 11-10-2006



ಶಿವಮೊಗ್ಗ ರಾಷ್ಟ್ರೀಯ ಬಸವ ದಳ (ರಿ.) ಟ್ರಸ್ಟ್‌ನ ನಿವೇಶನದಲ್ಲಿ
ಪೂಜ್ಯರಿಂದ ಬಸವ ಮಂಟಪ ನಿರ್ಮಾಣ ಯೋಜನೆಯ ನಾಮ ಫಲಕ ಅನಾವರಣ,29-10-2006